
ಸಂಪುಟ 20 ಸಂಚಿಕೆ 44
ಅಕ್ಟೋಬರ್ 31, 1999 ಬೆಲೆ ರೂ. 3.00
ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ಡೀಸೆಲ್-ಬೆಲೆ ಏರಿಕೆ ಏಕೆ?

ಬಾಗೆಪಲ್ಲಿಯಲ್ಲಿ ಭ್ರಷ್ಟರ, ಪಟ್ಟಭದ್ರರ ಒಳಸಂಚು

ಕರ್ನಾಟಕದ ಮುಖ್ಯಮಂತ್ರಿಯೋ ? ಮ್ಯಾನೇಜಿಂಗ್ ಡೈರಕ್ಟರ್ರೋ ??

ಕ್ರೌರ್ಯ, ಕಾಮ, ಹಗಲುಗನಸುಗಳ 'ಉಪೇಂದ್ರ'

ಬಸ್ ಪ್ರಯಾಣ ದರಗಳ ಹೆಚ್ಚಳ ಬೇಡ

ಕರ್ನಾಟಕದಲ್ಲಿಯೂ ಬಸ್ ಪ್ರಯಾಣ ದರಗಳನ್ನು ಶೇ 30 ರಷ್ಟು ಹೆಚ್ಚಿಸುವ ಚರ್ಚೆ ನಡೆದಿದೆ. ಕೇಂದ್ರ ಸರ್ಕಾರ ಈ ದಿಢೀರನೇ ಡೀಸೆಲ್ ಬೆಲೆಗಳನ್ನು ಶೇ. 40 ರಷ್ಟು ಹೆಚ್ಚಿಸಿದ್ದರಿಂದ ಇದು ಅನಿವಾರ್ಯವೆಂಬ ಸಬೂಬನ್ನು ಸಾರಿಗೆ ಸಚಿವರು ನೀಡಿದ್ದಾರೆ. ಆದರೆ ಒಂದೆರಡು ದಿನಗಳ ಹಿಂದೆ, ಇವರೇ ಇಂತಹ ಹೊರೆ ಜನಸಾಮಾನ್ಯರಿಗೆ ಭಾದಕವಾಗಲಿದೆಯೆಂದು ಡಿಸೆಲ್ ಬೆಲೆ ಇಳಿಸಲು ಕೇಂದ್ರಕ್ಕೆ ಒತ್ತಾಯಿಸಲಾಗುವುದು ಎಂದಿದ್ದರು. ಬಸ್ ಪ್ರಯಾಣದ ದರಗಳನ್ನು ಹೆಚ್ಚಿಸಬೇಕೆಂದು ಸಾರಿಗೆ ನಿಗಮ ಎರಡು ತಿಂಗಳ ಹಿಂದೆಯೇ ಸರ್ಕಾರಕ್ಕೆ ಪತ್ರ ಬರೆದಿತ್ತು. ಈಗ ಡಿಸೆಲ್ ಬೆಲೆ ಏರಿಕೆಯಿಂದಾಗಿ ದರಗಳ ಹೆಚ್ಚಳ ಅನಿವಾರ್ಯವೆಂದು ರಾಜ್ಯ ಸಾರಿಗೆ ಸಚಿವರು ಹೇಳುತ್ತಿದ್ದಾರೆ. ನವೆಂಬರ್ 1 ರಿಂದ ಜಾರಿಗೆ ಬರಬಹುದಾದ್ದರಿಂದ ಇದು ಕಾಂಗ್ರೆಸ್ ಸರ್ಕಾರದ ಮೊದಲ ರಾಜ್ಯೋತ್ಸವದ ಕೊಡುಗೆಯಾಗಿದೆ.

ಒಂದೆಡೆ ಸರಕು ಸಾಗಾಣಿಕೆಯ ದರಗಳು ಹೆಚ್ಚಿ, ಬಳಸುವ ದಿನನಿತ್ಯದ ಆಹಾರ, ತರಕಾರಿ, ಮುಂತಾದ ಬೆಲೆಗಳು ಏರಲಿವೆ. ಕೃಷಿ, ಕೈಗಾರಿಕಾ ಉತ್ಪನ್ನಗಳ ಬೆಲೆಗಳೂ ಹೆಚ್ಚಲಿವೆ. ಶೇ. 3 ರಷ್ಟು ಬೆಲೆ ಏರಿಕೆ ಸಾಮಾನ್ಯವಾಗಿ ತಗಲುವ ಅಂದಾಜಿದೆ. ಇವೆಲ್ಲವುಗಳನ್ನು ಹೇಗೆ ಸರಿದೂಗಿಸುವುದು ಎಂಬ ಚಿಂತೆಯಲ್ಲಿ ಜನಸಾಮಾನ್ಯರು ಮುಳುಗಿರುವಾಗ ಪ್ರಯಾಣದರಗಳ ಹೆಚ್ಚಳ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ.

ಬಿಜೆಪಿಗಳೂ ರಾಷ್ಟ್ರಮಟ್ಟದಲ್ಲಿ ಏನೇ ಕೊಚ್ಚಿಕೊಂಡರೂ ಕರ್ನಾಟಕದಲ್ಲಿ ಮತದಾರರು ಬಿಜೆಪಿಯ ಸೋಗುಗಳಿಗೆ, ವಾಜಪೇಯಿ ಅಲೆಯೆಂಬ ಸುಳ್ಳಿಗೆ ಸೊಪ್ಪು ಹಾಕಲಿಲ್ಲ. ಸರಿ ಸುಮಾರು ಒಂದೂವರೆ ವರ್ಷದ ಆಡಳಿತ ನೋಡಿದ್ದ ಜನತೆ, ಕೋಮುವಾದಿಗಳನ್ನು ಅಧಿಕಾರಕ್ಕೆ ಬರದಂತೆ ತಡೆದರು. ಮಣ್ಣು

ಸಂಪಾದಕೀಯ

ಮುಕ್ಕಿಸಿದರು. ಇಂತಹ ಸ್ಥಿತಿಯಲ್ಲಿ ಕಾಂಗ್ರೆಸ್ ಸರ್ಕಾರ ಒಂದಿಷ್ಟು ಪರಿಹಾರ ಒದಗಿಸಲಿ ಎಂದು ಜನತೆ ಆಶಿಸಿದರು. ಪರ್ಯಾಯಕ್ಕಾಗಿ ವಿಶ್ವಾಸವಿತ್ತರು ಹೊರತು ಕೃಷ್ಣರವರ ಪಾಂಚಜನ್ಯ ಯಾತ್ರೆಯಿಂದಾಗಲಿ, ಕಾಂಗ್ರೆಸ್ಸು ಜನಪರವೆಂದಾಗಲೀ ಅಲ್ಲ. ಈ ಅಗಾಧ ನಿರೀಕ್ಷೆಗಳ ಜನತೆಯಿಂದ ಮತ ಪಡೆದು ಅಧಿಕಾರಕ್ಕೇರಿದ ಕಾಂಗ್ರೆಸ್ ಸರ್ಕಾರ, ಜನತೆಯ ಜೀವನದ ಸ್ಥಿತಿಗತಿಗಳತ್ತ ಗಮನಹರಿಸುತ್ತದೆಯೇ? ಈಗಿನ ಅವರ ಯೋಚನಾ ಕ್ರಮವೇ ಗಾಬರಿ ಹುಟ್ಟಿಸುವಂತಿದೆ.

ಕೇಂದ್ರ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ, ಸಾರ್ವಜನಿಕ ಆಸ್ತಿಗಳನ್ನು ಮಾರುವುದಾಗಿಯೂ, ಜೀವ ವಿಮಾ ಖಾಸಗೀಕರಣ ಗೊಳಿಸುವುದಾಗಿಯೂ, ಡೀಸಲ್ ಬೆಲೆ ಏರಿಕೆ ಇಳಿಸಲಾಗದು, ಇನ್ನೂ ಅಗತ್ಯವಿರುವುದರಿಂದ ಮತ್ತೇ ದರಗಳನ್ನು ಹೆಚ್ಚಿಸುವುದಾಗಿಯೂ ಇದಕ್ಕೆ ಜನತೆ ಬೆಂಬಲ, ತ್ಯಾಗ, ಮಾಡಬೇಕೆಂದು ಇನ್ನೂ ಕಠಿಣ ನಿಲುವುಗಳನ್ನು ತಾಳುವುದಾಗಿ ಪ್ರಧಾನಿಗಳು, ಅರ್ಥ ಸಚಿವರು ಹೇಳುತ್ತಿದ್ದಾರೆ. ದೇಶದಲ್ಲಿ ಜನ ಸಾಮಾನ್ಯರು, ವಿಶೇಷವಾಗಿ ಲಾರಿ ಮಾಲೀಕರು ತೀವ್ರ ಪ್ರತಿರೋಧ ವ್ಯಕ್ತಪಡಿಸಿ, ಮುಷ್ಕರಕ್ಕೆ ಇಳಿದರೂ ಇವುಗಳಿಗೆ ಸ್ಪಂಧಿಸುವ ಕನಿಷ್ಟ ಪ್ರಜಾಸತ್ತೆಯ ಸೌಜನ್ಯವೂ ವಾಜಪೇಯಿ ಸರಕಾರಕ್ಕೆ ಇಲ್ಲವಾಗಿದೆ.

ಹೀಗೆ ಕೇಂದ್ರ ಸರ್ಕಾರ ದುಡಿಯುವ ಜನರ ಮೇಲೆ ಮತ್ತೆ ಮತ್ತೆ ಧಾಳಿ ನಡೆಸಿ ಲೂಟಿ ನಡೆಸುತ್ತಿರುವಾಗ ರಾಜ್ಯದ ಕಾಂಗ್ರೆಸ್ ಸರ್ಕಾರ ಜನರ ರಕ್ಷಣೆಗೆ ಧಾವಿಸಬೇಕಿತ್ತು. ಕೇಂದ್ರದ ನೀತಿಗಳ ವಿರುದ್ಧ ಜನತೆಯ ಚಳುವಳಿ ನಡೆಸಬೇಕಿತ್ತು. ಇದರ ಬದಲು ಕೇಂದ್ರದ ಸುಲಿಗೆಕೋರ ನೀತಿಗಳನ್ನೇ ಜಾರಿಗೊಳಿಸುವುದಷ್ಟೇ ತಮ್ಮ ಪಾಲಿನ ಕರ್ತವ್ಯವೆಂದು ರಾಜ್ಯ ಕಾಂಗ್ರೆಸ್ ಸರ್ಕಾರ ಅಭಿಪ್ರಾಯಕ್ಕೆ ಬಂದಿದೆ. ಅಂದರೆ ಕೇಂದ್ರ ಸರ್ಕಾರದಂತೆ ತಾನೂ ಸಹ ವಿದೇಶಿ ಹಣ ಕಾಸು ಸಂಸ್ಥೆಗಳ ಗುಲಾಮನಾಗಿಯೇ ಇರಲು ಸಿದ್ಧ ಎಂಬುದು ಇದರರ್ಥ. ಈ ಎಲ್ಲಾ ಹೊರೆಗಳನ್ನು ಜನರ ಹೆಗಲಿಗೆ ಹೇರದೇ, ಪರ್ಯಾಯ ಮಾರ್ಗಗಳನ್ನು ಹಿಡಿಯಲು ಸಾಧ್ಯವಿದೆ. ಆದರೆ ಇದು ಅವರಿಗೆ ಬೇಕಿಲ್ಲ.

ಡೀಸೆಲ್ ಬೆಲೆ ಹೆಚ್ಚಿಸಿದ ಒಡನೆಯೇ ದೆಹಲಿಯ ಕಾಂಗ್ರೆಸ್ ಸರ್ಕಾರ ಮೂರುಪಟ್ಟು ಬಸ್ ಪ್ರಯಾಣದ ದರಗಳನ್ನು ಹೆಚ್ಚಿಸಿ, ಅದನ್ನು ಮುಖ್ಯ ಮಂತ್ರಿಗಳು ಪ್ರಬಲವಾಗಿ ಸಮರ್ಥಿಸಿಕೊಂಡರು. ಕೆಲವೇ ತಿಂಗಳುಗಳ ಹಿಂದೆ ಭಾರೀ ಬೆಂಬಲ ನೀಡಿದ್ದ ಆ ರಾಜ್ಯದ ಜನತೆಯೇ ತೀವ್ರವಾಗಿ ಸೋಲನ್ನುಂಟು ಮಾಡಿದ್ದರೂ ಅದರಿಂದ ಪಾಠ ಕಲಿಯಲಿಲ್ಲ. ಅಂತಹುದೇ ಮಾರ್ಗವನ್ನು ಹಿಡಿಯಲು ಕರ್ನಾಟಕದ ಕಾಂಗ್ರೆಸ್ ಸರ್ಕಾರವೂ ಸಹ ನಿರ್ಧರಿಸಿದಂತಿದೆ. ಆದರೆ ಇದಕ್ಕೆ ಭಿನ್ನವಾಗಿ ಪ. ಬಂಗಾಳ ಎಡರಂಗ ಸರ್ಕಾರ, ಎಡ ಪಕ್ಷಗಳಿಂದ ಸಂಸತ್ ಸದಸ್ಯರು ಪ್ರಧಾನಿಯನ್ನು ಕಂಡು ವಿರೋಧ ವ್ಯಕ್ತ ಪಡಿಸಿ ನಿರ್ಧಾರ ಬದಲಿಸಲು ಒತ್ತಾಯಿಸಿದ್ದು ಶ್ಲಾಘನೀಯ.

ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಜನತೆಯ ಸಂಘರ್ಷ ಇನ್ನೂ ತೀವ್ರಗೊಳ್ಳುವ ಸೂಚನೆಗಳು ಇವೆ. ಕೋಮುವಾದಿಗಳ ವಿರುದ್ಧ ತೀರ್ಪು ನೀಡಿರುವ ಜನತೆಯ ನಿರೀಕ್ಷೆಗಳಿಗೆ ಅನುಗುಣವಾಗಿ ರಾಜ್ಯದ ಕಾಂಗ್ರೆಸ್ ಕಾರ್ಯನಿರ್ವಹಿಸಬೇಕು.

ಅಖಿಲ ಭಾರತ ಕಾಂಗ್ರೆಸ್ ಪಕ್ಷವೇನೋ ಡೀಸಲ್ ಬೆಲೆ ಏರಿಕೆಗೆ ವಿರೋಧ ವ್ಯಕ್ತ ಪಡಿಸಿದೆ. ಆದರೆ ಇಷ್ಟೇ ಸಾಲದು. ಅವರು ಸಂಸತ್ ಒಳಗೂ, ಹೊರಗೂ ಪ್ರತಿರೋಧ ಒಡ್ಡಬೇಕು. ಅದರಂತೆ ರಾಜ್ಯದ ಕಾಂಗ್ರೆಸ್ ಸಹ ಜನತೆಯ, ದೇಶದ ಹಿತ ರಕ್ಷಿಸುವಲ್ಲಿ ಜನರ ನಡುವೆ ತನ್ನನ್ನು ತೊಡಗಿಸಿಕೊಳ್ಳಬೇಕು.

ಇದನ್ನು ನಿರಾಕರಿಸಲಾದೀತೆ?

ಜನ-ವಿರೋಧಿ, ಕಾರ್ಮಿಕ-ವಿರೋಧಿ ಕ್ರಮಗಳಿಂದಲೇ ಎನ್.ಡಿ.ಎ ಸರಕಾರದ ಕಾರ್ಯಾರಂಭ

"ದೃಢ, ಐಕ್ಯ ಪ್ರತಿರೋಧಕ್ಕೆ ಸಿದ್ಧರಾಗಿ"

ಸಾಮೂಹಿಕ ಸಂಘಟನೆಗಳ ಪ್ರಾಯೋಜಕ ಸಮಿತಿ ಕರೆ

ಎಐಟಿಯುಸಿ, ಸಿಐಟಿಯು ಇತ್ಯಾದಿ ಹಲವು ಕೇಂದ್ರ ಕಾರ್ಮಿಕ ಸಂಘಟನೆಗಳು, ಬ್ಯಾಂಕ್, ವಿಮೆ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ವಲಯುದಲ್ಲಿನ ನೌಕರರ ಸಂಘಟನೆಗಳ ರಾಷ್ಟ್ರೀಯ ಒಕ್ಕೂಟಗಳು ಸೇರಿರುವ ಭಾರತೀಯ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಅಕ್ಟೋಬರ್ 17 ರಂದು ನವದೆಹಲಿಯಲ್ಲಿ ಸಭೆ ಸೇರಿ ಚುನಾವಣಾ ನಂತರದ ಸನ್ನಿವೇಶದ ವಿಮರ್ಶೆ ನಡೆಸಿ, ಮುಂದಿನ ಕಾರ್ಯಾಚರಣೆಯ ಬಗ್ಗೆ ಚರ್ಚಿಸಿತು.

ಎಐಟಿಯುಸಿಯ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಮಹೇಂದ್ರ ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಕೈಗೊಂಡಿರುವ ಜನ-ವಿರೋಧಿ, ಕಾರ್ಮಿಕ-ವಿರೋಧಿ ಹಾಗೂ ದೇಶದ ಹಿತಾಸಕ್ತಿಗಳಿಗೂ ವಿರುದ್ಧವಾದ ಕ್ರಮಗಳ ಬಗ್ಗೆ ಪ್ರಾಯೋಜಕ ಸಮಿತಿ ಗಂಭೀರ ಆತಂಕ ವ್ಯಕ್ತಪಡಿಸಿತು. ಚುನಾವಣಾ ಫಲಿತಾಂಶ ಪ್ರಕಟವಾಗುವ ಮೊದಲೇ ಬಿಜೆಪಿ ನೇತೃತ್ವದ ಸರಕಾರ ಅತ್ಯಂತ ಆತುರದಿಂದ ಡೀಸೆಲ್ ಬೆಲೆಗಳನ್ನು 40% ದಷ್ಟು ಭಾರಿ ಪ್ರಮಾಣದಲ್ಲಿ ಏರಿಸಿತು. ಇದು ಎಲ್ಲಾ ವಲಯಗಳಲ್ಲಿ ಬೆಲೆಯೇರಿಕೆಗೆ ಅವಕಾಶ ನೀಡಲಿದ್ದು ಜನಸಾಮಾನ್ಯರನ್ನು ತೀವ್ರ ತೊಳಲಾಟಕ್ಕೆ ಸಿಲುಕಿಸುತ್ತದೆ. ಹಲವೆಡೆ ಈಗಾಗಲೇ ಬಸ್ ದರಗಳನ್ನು ದ್ವಿಗುಣಗೊಳಿಸಲಾಗಿದೆ. ಸೀಮೆಎಣ್ಣೆ ಅಡುಗೆ ಅನಿಲದ ಬೆಲೆಗಳಲ್ಲೂ ತೀವ್ರ ಏರಿಕೆಯ ಸಂಕೇತಗಳು ಬರುತ್ತಿವೆ.

ಭಾರೀ ಬೆಲೆಯೇರಿಕೆಯ ಲಕ್ಷಣಗಳು

ಖರ್ಚಿನ ನಿರ್ವಹಣೆಯ ಹೆಸರಿನಲ್ಲಿ ಎನ್.ಡಿ.ಎ. ಸರಕಾರ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹಾಕುವ ದಾರಿಯನ್ನೇ ಹಿಡಿದಿದೆ. ಇನ್ನೊಂದೆಡೆ ಸಿರಿವಂತ, ದುಡ್ಡುಳ್ಳ ವರ್ಗಕ್ಕೆ ಪರಿಹಾರ ಒದಗಿಸುತ್ತಿದೆ. ಅತ್ತ ವ್ಯಾಪಾರಸ್ಥರು, ಕಂಪನಿಗಳು ಭಾರಿ ಪ್ರಮಾಣದಲ್ಲಿ ತೆರಿಗೆ ತಪ್ಪಿಸಿಕೊಳ್ಳಲು ಅವಕಾಶ ನೀಡಲಾಗುತ್ತಿದೆ. ಈ ವರ್ಷ ಎಪ್ರಿಲ್‌ನಿಂದ ಆಗಸ್ಟ್ ತಿಂಗಳ ಅವಧಿಯಲ್ಲಿ ಕಂಪನಿ ತೆರಿಗೆಯ ಪ್ರಮಾಣ ಕಳೆದ ವರ್ಷ ಇದೇ ಅವಧಿಗೆ ಹೋಲಿಸಿದರೆ 6.9% ದಷ್ಟು ಕಡಿಮೆಯಾಗಿರುವುದು ಇದನ್ನು ತೋರಿಸುತ್ತದೆ. ಇತರ ಎಲ್ಲಾ ಮಂತ್ರಿಗಳ ಹೇಳಿಕೆಗಳನ್ನು ನೋಡಿದರೆ ಆಹಾರ, ರಸಗೊಬ್ಬರ ಮತ್ತಿತರ ಅಗತ್ಯ ಸರಕುಗಳ ಮೇಲೆ ನೀಡುತ್ತಿರುವ ಸಹಾಯಧನಗಳನ್ನೆಲ್ಲಾ ಕಮ್ಮಿ ಮಾಡಲು, ಅಥವಾ ರದ್ದು ಮಾಡುವ ಸಂಭವ ಬಹಳವಾಗಿ ಕಾಣುತ್ತಿದೆ. ಇದರಿಂದ ಭಾರಿ ಬೆಲೆಯೇರಿಕೆ ಸಂಭವಿಸುವ ಲಕ್ಷಣಗಳೆಲ್ಲಾ ನಮ್ಮ ಮುಂದಿದೆ ಎಂದು ಪ್ರಾಯೋಜಕ ಸಮಿತಿ ಎಚ್ಚರಿಸಿದೆ.

ಮಾಲಕರ ಬೇಡಿಕೆಗಳಿಗೆಲ್ಲಾ ಅಸ್ತು

ಲಾಭ ಮಾಡುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ತ್ವರಿತವಾಗಿ ದೇಶಿ-ವಿದೇಶಿ ಖಾಸಗಿಯವರಿಗೆ ಮಾರುವುದಾಗಿಯೂ, ಬ್ಯಾಂಕುಗಳನ್ನು ಖಾಸಗೀಕರಿಸುವುದಾಗಿಯೂ, ಐ.ಆರ್.ಎ. ಮಸೂದೆಯನ್ನು ತ್ವರಿತವಾಗಿ ಪಾಸು ಮಾಡಿ ವಿಮಾ ವಲಯವನ್ನು ಖಾಸಗೀಕರಿಸುವುದಾಗಿ ಸರಕಾರ ಈಗಾಗಲೇ ಕೈಗಾರಿಕೋದ್ಯಮಿಗಳಿಗೆ ಭರವಸೆ ನೀಡಿಯೇ ಬಿಟ್ಟಿದೆ. ಕಾರ್ಮಿಕ ಕಾನೂನುಗಳನ್ನು ಮಾಲಕರ ಪರವಾಗಿ ಸಂಪೂರ್ಣವಾಗಿ ಬದಲಿಸುವುದಾಗಿಯೂ, ಕಾರ್ಮಿಕರು, ಕಾರ್ಮಿಕ ಸಂಘಗಳ ಹಕ್ಕುಗಳನ್ನೆಲ್ಲಾ ಕಸಿದುಕೊಳ್ಳುವುದಾಗಿಯೂ, ಕಾರ್ಮಿಕರನ್ನು ಹೊರಗಟ್ಟುವ ಎಕ್ಸಿಟ್ ಪಾಲಿಸಿ ತರುವುದಾಗಿಯೂ ಕಾಂಟ್ರಾಕ್ಟ್ ದುಡಿಮೆಯನ್ನು ಕಾನೂನುಬದ್ಧ ಗೊಳಿಸಲು ಕಾಂಟ್ರಾಕ್ಟ್ ಲೇಬರ್ ಶಾಸನವನ್ನು ತಿದ್ದುಪಡಿ ಮಾಡುವುದಾಗಿಯೂ ಎನ್.ಡಿ.ಎ. ಸರಕಾರ ಎಲ್ಲಾ ಮಾಲಕರಿಗೆ ಭರವಸೆ ನೀಡಿದೆ. ಎರಡನೇ ಕಾರ್ಮಿಕ ಆಯೋಗದಲ್ಲಿ ಬಿಜೆಪಿಯ ಹೌದಪ್ಪಗಳನ್ನು ತುಂಬಲಾಗಿದೆ. ಕಾರ್ಮಿಕರ, ಕಾರ್ಮಿಕ ಸಂಘಗಳ ಸಂಪೂರ್ಣ ವಿರೋಧವನ್ನು ಬದಿಗೊತ್ತಿ ಕಾರ್ಮಿಕರ ಬೆವರಿನಿಂದ ಸಂಗ್ರಹವಾದ ಭವಿಷ್ಯ ನಿಧಿ, ಪೆನ್ಶನ್ ನಿಧಿಯ ಹಣವನ್ನು ಶೇರು ಮಾರುಕಟ್ಟೆಯಲ್ಲಿ ಸಟ್ಟಾಗಾರಿಕೆಗೆ ನೀಡುವ ಆಳುವ ಕೂಟದ ಚುನಾವಣಾ ಪ್ರಣಾಳಿಕೆಯ ಭರವಸೆಯನ್ನು ಜಾರಿಗೆ ತರಲಾಗುತ್ತಿದೆ. ಈ ಸರಕಾರವೇ ಹಿಂದೆ ಮುಚ್ಚಲು ನಿರ್ಧರಿಸಿದ 12 ರೋಗಗ್ರಸ್ತ ಸಾರ್ವಜನಿಕ ವಲಯದ ಉದ್ದಿಮೆಗಳ ಪುನರುಜ್ಜೀವನಕ್ಕೆ ಹಣ ಒದಗಿಸಲು ಏಕ್‌ದಂ ನಿರಾಕರಿಸಿರುವ ಸರಕಾರ ಇದು ಎಂದು ಪ್ರಾಯೋಜಕ ಸಮಿತಿ ಖಂಡಿಸಿದೆ.

ಬಚ್ಚಿಟ್ಟ ಅಜೆಂಡಾದ ಅನುಷ್ಠಾನ ಆರಂಭ ಆಗಿಯೇ ಬಿಟ್ಟಿದೆ
ಸಂಶೋಧನಾ ಸಂಸ್ಥೆಗಳಿಗೆ ಆರೆಸ್ಸೆಸ್ಸಿಗರ ನೇಮಕ

ಬಿಜೆಪಿ ನೇತೃತ್ವದ ಸರಕಾರ ಮತ್ತೆ ತನ್ನ ಹಿಂದಿನ ಚಾಳಿಯನ್ನು ಮುಂದುವರೆಸಿದೆ. ಡಾ. ಮುರುಳಿ ಮನೋಹರ ಜೋಷಿಯ ನೇತೃತ್ವದ ಕೇಂದ್ರ ಮಾನವಸಂಪನ್ಮೂಲ ಇಲಾಖೆ ಇಬ್ಬರು ಆರೆಸ್ಸೆಸ್ಸಿಗರನ್ನು ಸಂಶೋಧನಾ ಸಂಸ್ಥೆಗಳ ಮುಖ್ಯಸ್ಥರಾಗಿ ನೇಮಿಸಿದೆ. ಪ್ರೊ. ಎಂ.ಎಲ್. ಸೋಂಧಿಯವರನ್ನು ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಮಂಡಳಿಯ ಅಧ್ಯಕ್ಷರಾಗಿ ಹಾಗೂ ಬಿ.ಆರ್.ಗ್ರೋವರ್‌ರನ್ನು ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿದೆ.

ಪ್ರೊ. ಸೋಂಧಿ ಈ ಹಿಂದೆ ಜನಸಂಘವನ್ನು ಸಂಸತ್ತಿನಲ್ಲಿ ಪ್ರತಿನಿಧಿಸಿದವರು. ಬಿ.ಆರ್.ಗ್ರೋವರ್ ಯಾವುದೇ ಐತಿಹಾಸಿಕ ಸಾಕ್ಷ್ಯಾಧಾರಗಳಿಲ್ಲದೆ ಬಾಬ್ರಿ ಮಸೀದಿ ಇದ್ದಲ್ಲಿ ರಾಮಮಂದಿರ ಇದೆ ಎಂದು ಪ್ರಚಾರ ನಡೆಸಿದ ಆರ್.ಎಸ್.ಎಸ್. ಇತಿಹಾಸದಲ್ಲಿ ಒಬ್ಬರು.

ಭಾರತೀಯ ಸಮಾಜವನ್ನು ಕೋಮುಗ್ರಸ್ತಗೊಳಿಸುವ ಆರ್.ಎಸ್.ಎಸ್.ನ ಬಚ್ಚಿಟ್ಟ ಅಜೆಂಡಾವನ್ನು ಜಾರಿಗೆ ತರಲು ಬಿಜೆಪಿ ಸರಕಾರ ಎಷ್ಟು ಉತ್ಸುಕವಾಗಿದೆ ಎಂಬುದನ್ನು ಇದು ತೋರಿಸುತ್ತದೆ. ಶೈಕ್ಷಣಿಕ ಸಂಶೋಧನಾ ಸಂಸ್ಥೆಗಳಲ್ಲಿ ಆರ್.ಎಸ್.ಎಸ್.ನವರ ನುಸುಳಿಕೆ ಭಾರತೀಯ ಸಮಾಜಿಕ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಹಂದರಕ್ಕೆ ಭಾರೀ ಅಪಾಯಕಾರೀ ದೂರಗಾಮಿ ರಾಜಕೀಯ ದುಷ್ಪ್ರಭಾವ ಬೀರುವಂತದ್ದು.

ಬಿಜೆಪಿ ಜತೆ ಕೈ ಮಿಲಾಯಿಸಿರುವ ತೆಲುಗುದೇಶಂ, ಡಿಎಂಕೆ, ನ್ಯಾಶನಲ್ ಕಾನ್ಫರೆನ್ಸ್, ತೃಣಮೂಲ ಕಾಂಗ್ರೆಸ್ ಮತ್ತು ಜನತಾದಳ(ಯು) ದೇಶದ ಶೈಕ್ಷಣಿಕ ಸಂಸ್ಥೆಗಳಲ್ಲಿ ಈ ರೀತಿಯ ಆರ್.ಎಸ್.ಎಸ್.ನುಸುಳಿಕೆಯ ಬಗ್ಗೆ ಏನು ಹೇಳುತ್ತದೆ? ಇಂತಹ ನುಸುಳಿಕೆಯ ವಿರುದ್ಧ ದೇಶಾದ್ಯಂತ ವಿಶ್ವವಿದ್ಯಾಲಯಗಳು, ಕಾಲೇಜುಗಳಲ್ಲಿ ಪ್ರತಿಭಟನಾ ಮತಪ್ರದರ್ಶನ ನಡೆಸಲು ತನ್ನ ಘಟಕಗಳಿಗೆ ಎಸ್‌ಎಫ್‌ಐ ಕರೆ ನೀಡಿದೆ

(ಐಎನ್‌ಎನ್)



ಎಸ್.ಎಂ.ಕೃಷ್ಣರ ಮುಂದಿರುವ ಗೊಂದಲ

ಕರ್ನಾಟಕದ ಮುಖ್ಯಮಂತ್ರಿಯೋ? ಮ್ಯಾನೇಜಿಂಗ್ ಡೈರೆಕ್ಟರೋ?

ಕರ್ನಾಟಕದ ಜನತೆ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಬಿಜೆಪಿಯೆಂಬ ಕೋಮುವಾದಿ ವಿಷ ಜಂತುಗಳ ಕೈಯಲ್ಲಿ ಕೊಡುವುದಕ್ಕೆ ನಿರಾಕರಿಸಿ ಹಾಗೆಯೇ ಜನತಾ ದಳ ಸರ್ಕಾರ ಸಾಗಿದ- ಜನರಿಗೆ ಪರಿಹಾರಗಳನ್ನು ನೀಡದೆ ಬೆಲೆ ಏರಿಸುವ, ಮುಂದೆಯೂ ನಿರಂತರ ಬೆಲೆ ಏರಿಕೆಯ ಕತ್ತಿಯ ನೆರಳಿನಲ್ಲಿಯೇ ಬಾಳುವಂತೆ ವಿದೇಶಿ ಬಂಡವಾಳವನ್ನು ಸ್ವಾಗತಿಸಿದ, ಖಾಸಗೀಕರಣದ ಮಾರ್ಗವನ್ನು ನಿರಾಕರಿಸಿ ಕಾಂಗ್ರೆಸ್‌ಗೆ ಮತ ನೀಡಿದ್ದಾರೆ. ಕಾಂಗ್ರೆಸ್ ಪಕ್ಷ ಎಸ್.ಎಂ.ಕೃಷ್ಣರವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿದೆ.

ಎಸ್.ಎಂ. ಕೃಷ್ಣರವರು ತಾವು ಮುಖ್ಯಮಂತ್ರಿಯಾಗಿ ಆಯ್ಕೆಯಾದ ದಿನದಿಂದಲೇ ಕರ್ನಾಟಕಕ್ಕೆ ಒಂದು ದಕ್ಷ ಸರ್ಕಾರವನ್ನು ನೀಡುವ, ಉತ್ತಮ ಆಡಳಿತ ನೀಡಿದ ಮುಖ್ಯಮಂತ್ರಿ ಎಂದು ಹೆಸರು ಗಳಿಸಬೇಕೆಂಬ ತಮ್ಮ ಆಕಾಂಕ್ಷೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಇದು ಸ್ವಾಗತಾರ್ಹವಾದದ್ದೆ ಎಂಬುದರಲ್ಲಿ ಸಂಶಯವಿಲ್ಲ.

ಆದರೆ ಉತ್ತಮ ಆಡಳಿತ ಎಂದರೆ ಅವರ ಕಲ್ಪನೆ, ತಿಳುವಳಿಕೆ ಏನು? ಎಂಬುದರ ಮೇಲೆ ಅದು ಕರ್ನಾಟಕದ ಜನರಿಗೆ ಅನುಕೂಲವಾಗುವಂತಹದೋ ಅಲ್ಲವೋ ಎಂಬುದು ಅವಲಂಭಿಸಿದೆ. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನವೇ ಅವರು ಉದಯ ಟಿ.ವಿ.ಗೆ ಒಂದು ದೀರ್ಘ ಸಂದರ್ಶನ ನೀಡಿದರು. ಹಾಗೆಯೇ ಅವರ ಸಂದರ್ಶನಗಳು ಕರ್ನಾಟಕದ ಪ್ರಮುಖ ಕನ್ನಡ-ಇಂಗ್ಲೀಷ್ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈ ಸಂದರ್ಶನಗಳಲ್ಲಿ ಅವರು ತಮ್ಮ ಕಲ್ಪನೆ ಕನಸುಗಳನ್ನು ಬಿಚ್ಚಿಟ್ಟಿದ್ದಾರೆ. ಅದರ ಮೂಲಕ ಎಂತಹ ಉತ್ತಮ ಆಡಳಿತ ನೀಡಲಿದ್ದಾರೆ ಎಂತಹ ಕರ್ನಾಟಕವನ್ನು ಕಟ್ಟಬೇಕೆಂದಿದ್ದಾರೆ ಎಂಬುದು ಈಗಾಗಲೇ ಸುವ್ಯಕ್ತವಾಗಿದೆ.

ಕೃಷ್ಣರವರು ಕಲ್ಪಿಸಬೇಕೆಂದಿರುವ ಕರ್ನಾಟಕದ 'ಸಮೃದ್ಧಿ'ಗೆಂದು ಕರ್ನಾಟಕಕ್ಕೆ ಸಮೃದ್ಧವಾಗಿ ಬಂಡವಾಳ ಹರಿದು ಬರುವುದು ಅದರಲ್ಲಿಯೂ ವಿದೇಶಿ ಬಂಡವಾಳದ ಹರಿವಿಗೆ ಬೇಕಾದ ಅನುಕೂಲವನ್ನು ಕಲ್ಪಿಸುವುದು, ಅದಕ್ಕಾಗಿ ಮೂಲಭೂತ ಸೌಕರ್ಯಗಳಾದ ವಿದ್ಯುತ್, ರಸ್ತೆಗಳನ್ನು ಆದ್ಯತೆಯಾಗಿ ತೆಗೆದುಕೊಳ್ಳುವುದು. ಬೆಂಗಳೂರನ್ನು ವಿಶ್ವದ ಮಾಹಿತಿ ತಂತ್ರಜ್ಞಾನ(ಕಂಪ್ಯೂಟರ್ ಸಾಫ್ಟ್ ವೇರ್ ಎಂಬ ವಿದೇಶಿ ಪರಿಣಿತಿಯ) ಕೇಂದ್ರವನ್ನಾಗಿ ಪರಿವರ್ತಿಸುವುದು. ಇದಕ್ಕಾಗಿ ಕರ್ನಾಟಕ ಸರ್ಕಾರದ ಆದಾಯ ಹೆಚ್ಚಿಸಲು ವಾಣಿಜ್ಯ ತೆರಿಗೆಗಳನ್ನು ಮತ್ತಷ್ಟು ಹೆಚ್ಚಿಸುವುದು. ಇನ್ನುಳಿದಂತೆ ಶಿಕ್ಷಣ, ಆರೋಗ್ಯ, ವಸತಿ ಇವುಗಳಿಗೆ ಸಂಬಂಧಿಸಿದಂತೆ ಮಾಮೂಲಿ ಭರವಸೆಯ ಮಾತುಗಳು. ಇಷ್ಟೇ ಅವರ ಮಾತುಗಳಲ್ಲಿ ಇಲ್ಲಿಯವರೆಗೆ ವ್ಯಕ್ತವಾಗಿರುವುದು.

ಈ ಕನಸನ್ನು ನನಸು ಮಾಡಲು ಕೃಷ್ಣ ಮುಖ್ಯಮಂತ್ರಿ ಕೆಲಸ ಮಾಡಿದರೆ ಸಾಗುವುದಿಲ್ಲವಾದ್ದರಿಂದ ಅವರು ಕರ್ನಾಟಕದ ಸಿಇಓ ಆಗಿ ಕೆಲಸ ನಿರ್ವಹಿಸುತ್ತಾರಂತೆ. ಅಂದರೆ ಕರ್ನಾಟಕ ಎಂಬ ಕಾರ್ಪೋರೇಷನ್ ಛೇರ್‌ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್‌ನಂತೆ, ಫ್ಯಾಕ್ಟರಿಗಳು ಮತ್ತಿತರ ವ್ಯಾಪಾರದ ಕಂಪನಿಗಳ ಮುಖ್ಯ ಆಡಳಿತಾಧಿಕಾರಿಯ ಕೆಲಸದ ಮಾದರಿಯೇ ಅವರ ಮಾದರಿ ಎಂದು ಅರ್ಥ. ಈ ಮಾದರಿಯನ್ನು ಸದಾ ಕಂಪ್ಯೂಟರ್ ಮುಂದಿಟ್ಟುಕೊಂಡು ಕೆಲಸ ಮಾಡುವ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರು ಚಾಲ್ತಿಗೆ ತಂದರು. ಅದಕ್ಕೆ ದೇಶ ಬಂಡವಾಳಶಾಹಿ ಪತ್ರಿಕೆಗಳು ಬಹಳ ದೊಡ್ಡ ಪ್ರಚಾರ ನೀಡಿದ್ದಾರೆ. ಅದೇ ದಾರಿಯಲ್ಲಿಯೇ ತಾನು ಸಾಗುತ್ತೇನೆಂದು, ಆಂಧ್ರಪ್ರದೇಶದ ಮುಖ್ಯಮಂತ್ರಿ ತಮಗೆ ಮಾದರಿಯೆಂದು ಎಸ್. ಎಂ.ಕೃಷ್ಣ ಸಾರಿದ್ದಾರೆ.

ಹೀಗೆ ರಾಜ್ಯಾಡಳಿತಕ್ಕೆ ಯಾವುದರ ಮಾದರಿ ಎಂಬ ಪ್ರಶ್ನೆಯಲ್ಲಿ ದೇಶದ ಮುಂದೆ ಅತ್ಯಂತ ಯಶಸ್ವಿಯಾದ ಹಾಗೂ ಜನಪ್ರಿಯವಾದ ಮಾದರಿಯೊಂದು ಸ್ಥಾಪಿತವಾಗಿದೆ. 23 ವರ್ಷಗಳ ನಿರಂತರ ಆಳ್ವಿಕೆ ನಡೆಸಿ 4 ವಿಧಾನ ಸಭಾ ಚುನಾವಣೆಗಳಲ್ಲಿ ಪುನರಾಯ್ಕೆಯಾಗಿರುವ ಹಾಗೂ 6 ಲೋಕಸಭಾ, 4 ಜಿಲ್ಲಾ, ತಾಲ್ಲೂಕು ಪಂಚಾಯಿತ್ ಚುನಾವಣೆಗಳಲ್ಲಿಯೂ ತಮ್ಮ ಮೇಲುಗೈ ಸಾಧಿಸಿರುವ ಪ. ಬಂಗಾಳದ ಎಡರಂಗದ ಮಾದರಿ.

1983 ರಲ್ಲಿ ಕರ್ನಾಟಕದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ಹೆಗ್ಗಡೆಯವರು ಅನುಸರಿಸ ಬಯಸಿದ ಮಾದರಿ ಅದೇ. ಅವರು ತಮ್ಮ ಸಂಪುಟದ ಹಲವಾರು ಸಚಿವರನ್ನು ಪ.ಬಂಗಾಲಕ್ಕೆ ಅಟ್ಟಿದರು. ಅಲ್ಲಿಯ ಸರ್ಕಾರ ಜನಪ್ರಿಯವಾಗಲು ಅನುಸರಿಸಲಾಗಿರುವ ಯೋಜನೆಗಳ ಪರಿಣಾಮ ಕರ್ನಾಟಕದಲ್ಲಿಯೂ ಅಳವಡಿಸಿಕೊಳ್ಳಲು ಪ್ರಯತ್ನಿಸಿದರು. ಇದರ ಫಲವಾಗಿಯೇ ಕರ್ನಾಟಕದಲ್ಲಿ ನಜೀರ್ ಸಾಬ್ ರವರು ನೀರು ಸಾಬ್ ಎಂದು ಹೆಸರಾಗಲು ಕಾರಣವಾದ ಕುಡಿಯುವ ನೀರು ಯೋಜನೆ, ಪಂಚಾಯಿತಿ ರಾಜ್ಯ, ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ಪುಸ್ತಕಗಳನ್ನು, ವಿಧವಾ ವೇತನ, ಹೆರಿಗೆ ಭತ್ಯ ಇತ್ಯಾದಿ ಸಾಮಾನ್ಯ ಜನರಿಗೆ ಪರಿಹಾರ ನೀಡುವ ಯೋಜನೆಗಳು ಜಾರಿಗೆ ಬಂದದು. ಇದೆ ಜನತಾ ಪಕ್ಷಕ್ಕೆ ಜನಪ್ರಿಯತೆಯನ್ನು ತಂದುಕೊಟ್ಟು 1985 ರಲ್ಲಿ ವಿಧಾನ ಸಭೆಯನ್ನು ವಿಸರ್ಜಿಸಲು ಧೈರ್ಯ ಕೊಟ್ಟದ್ದು. ಹೆಗ್ಗಡೆಯವರ ಜನಪ್ರಿಯತೆ ಎಂಬ ಹುಸಿಮಾತು ಇಂದೂ ಚಲಾವಣೆಯಲ್ಲಿರುವುದಕ್ಕೆ ಅದೇ ಆಧಾರ. ಆದರೆ ಈ ಎಡ ಪರ್ಯಾಯ ಮಾದರಿಯ ಮೂಲ ಅಂಶಗಳನ್ನು ಜನತಾ ಪಕ್ಷ ಜಾರಿ ಮಾಡುವ ಧೈರ್ಯ ಮಾಡಲಿಲ್ಲ. ಹಾಗೂ 86 ಜಿಲ್ಲಾ ಪರಿಷತ್ ವಿಜಯದ ನಂತರ ಪ.ಬಂಗಾಲ ಉದಾಹರಣೆಯನ್ನು ಕೈಬಿಡುತ್ತಾ ಬಂದು ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿದರು ಎಂಬ ಕಾರಣಕ್ಕಾಗಿ ಮುಂದೆ ಅವರು ಸೋಲನ್ನಪ್ಪಿದರು.

ಹೀಗೆ ದೇಶದ ಮುಂದೆ ಇಂದು ಎರಡು ಮಾದರಿಗಳಿವೆ. ಹೊಸ ಆರ್ಥಿಕ ನೀತಿ ಬಂಡವಾಳಶಾಹಿ ಪ್ರಿಯ ಮಾದರಿ, ಎಡ ಪರ್ಯಾಯ ಪ್ರಜಾಸತ್ತಾತ್ಮಕ ಮಾದರಿ. ಆದರೆ ಕೃಷ್ಣರವರು ಬಂಡವಾಳಶಾಹಿ ಪ್ರಿಯ ಮಾದರಿಯನ್ನೇ ಆರಿಸಿಕೊಂಡಿದ್ದಾರೆ. ಅದರಲ್ಲಿಯೂ ನೆಹರೂರವರ ಸಮಾಜವಾದಿ ಮಾದರಿಗಿಂತ ಭಿನ್ನವಾದ ಕಂಪನಿ(ಕಾರ್ಪೋರೇಟ್) ಆಡಳಿತದ ಮಾದರಿಯನ್ನು ಅರಗಿಸಿಕೊಂಡಿದ್ದಾರೆ. ಅದರ ಪರಿಣಾಮವೇನಾಗಬಹುದು ಎಂಬುದು ಕರ್ನಾಟಕದ ಜನತೆಯ ದೃಷ್ಟಿಯಿಂದ ಬಹಳ ಮುಖ್ಯವಾದ ಪ್ರಶ್ನೆ. ಅದರ ವಿಶ್ಲೇಷಣೆಯನ್ನು ತುರ್ತಾಗಿ ಮಾಡಬೇಕಾಗಿದೆ.

ಬಂಡವಾಳಶಾಹಿ ಕಾರ್ಪೋರೇಟ್ ಮಾದರಿಯೆಂದರೆ ಈಗಾಗಲೇ ಮುಖ್ಯಮಂತ್ರಿ ಕೃಷ್ಣರವರ ಘೋಷಣೆ ಯಂತೆ ಬಂಡವಾಳಕ್ಕೆ- ವಿದೇಶಿ ಬಂಡವಾಳದ ಹರಿವಿಗೆ ಅನುಕೂಲ ಕಲ್ಪಿಸಿ ಕೊಡುವುದಷ್ಟೆ ಸರ್ಕಾರದ ಕೆಲಸ. ಉಳಿದೆಲ್ಲಾ ಅಭಿವೃದ್ಧಿಯನ್ನು ಖಾಸಗೀ ಬಂಡವಾಳದಾರರು ತಾವೇ ಮಾಡುತ್ತಾರೆ. ಆದರಿಂದ ಕರ್ನಾಟಕದ ಜನತೆಯ ಬಡತನ, ನಿರುದ್ಯೋಗ ಮುಂತಾದ ಎಲ್ಲ ಸಮಸ್ಯೆಗಳೂ ತಂತಾನೆ ಬಗೆಹರಿಯುತ್ತದೆ. ಸರ್ಕಾರ ಈ ಬಗ್ಗೆ ಏನೂ ಮಾಡಬೇಕಾಗಿಲ್ಲ ಬಡತನ ನಿರ್ಮೂಲನ ಕ್ರಮಗಳು ಅವರಿಗೆ ಸಬ್ಸಿಡಿ (ಸಹಾಯ ಧನ) ಒದಗಿಸುವ, ಮಾರುಕಟ್ಟೆ ಆಟಾಟೋಪದಿಂದ ಅವರನ್ನು ರಕ್ಷಿಸುವ ಯಾವ ಹೊಣೆ, ಕರ್ತವ್ಯವೂ ರಾಜ್ಯ ಸರ್ಕಾರಕ್ಕಿಲ್ಲ ಎನ್ನುವುದೇ ಈ ಧೋರಣೆಯ ಮೂಲ. ಹೀಗಾಗಿಯೇ ಅದಕ್ಕೆ ಸಂಬಂಧ ಪಟ್ಟ ಒಂದು ಮಾತನ್ನು, ರಾಜ್ಯ ಸರ್ಕಾರಕ್ಕೆ ಕೈಗೊಳ್ಳಬಹುದಾದ ಒಂದು ಕ್ರಮವನ್ನು ಘೋಷಿಸಿಲ್ಲ. ಕರ್ನಾಟಕದ ಬಡಜನರು ಕಾಂಗ್ರೆಸ್‌ಗೆ ಮತ ನೀಡಿ ತಮ್ಮ ಸಂಕಷ್ಟಗಳ ಪರಿಹಾರಕ್ಕೆ ಈ ಸರ್ಕಾರದ ಕ್ರಮಗಳಿಗಾಗಿ ಕಾಯುತ್ತಿದ್ದಾರೆ ಎನ್ನುವ ಲಕ್ಷವೇ ಇಲ್ಲದಂತೆ ಅದರ ನೀತಿ, ಧೋರಣೆಗಳಿವೆ.

ಇನ್ನೂ ವಿದೇಶಿ ಹಾಗೂ ದೇಶಿ ಖಾಸಗಿ ಬಂಡವಾಳಕ್ಕೆ ಆಹ್ವಾನ ಕೊಡುವುದಕ್ಕಾಗಿ ಅವರು ಕೇಳುವ ಅನುಕೂಲಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ವಿಶ್ವ ಬ್ಯಾಂಕ್ ಮತ್ತಿತರ ಸಾಲಗಳಿಗಾಗಿ ಅವರ ಶರತ್ತಿಗೊಳಗಾಗಬೇಕಾಗುತ್ತದೆ. ಮುಖ್ಯವಾಗಿ ಎಲ್ಲ ವಸ್ತುಗಳು ಹಾಗೂ ಸೇವೆಗಳು- ಬಸ್ ದರ, ರಸ್ತೆ ಪ್ರವೇಶಕ್ಕಾಗಿ ತೆರಿಗೆ, ವಿದ್ಯುತ್‌ದರ, ನಿರಾವರಿ ದರ ಎಲ್ಲವನ್ನೂ ಏರಿಸಬೇಕಾಗುತ್ತದೆ. ಅಂತಹ ನೀತಿಯನ್ನೇ ನಾವು ಅನುಸರಿಸುತ್ತೇವೆ ಎಂದು ಮುಖ್ಯ ಮಂತ್ರಿಗಳು ಈ ಮೂಲಕ ಘೋಷಿಸಿದಂತಾಗಿದೆ. ಎಂದರೆ ಬಡವರಿಗೆ ಪರಿಹಾರ ಕೊಡುವ ಕಾರ್ಯಕ್ರಮಗಳಿಗೆ ಬದಲಾಗಿ ಅವರ ಮೇಲೆ ಮತ್ತಷ್ಟು ಹೊರೆ ಹೊರಿಸುವ ನೀತಿಗಳನ್ನೇ- ಜನಗಳ ಆಶಯಗಳಿಗೆ ವಿರುದ್ಧವಾದ ಧೋರಣೆಯನ್ನೇ ಕಾಂಗ್ರೆಸ್ ಸರ್ಕಾರ ಅನುಸರಿಸಬಯಸುತ್ತಿದೆ ಎಂದರ್ಥ.

ಇಂತಹ ಧೋರಣೆ, ಯೋಜನೆಗಳ ಸಂದರ್ಭದಲ್ಲಿಯೇ ಸಿಇಓ ಮಾದರಿ ಅಥವಾ ಮ್ಯಾನೇಜಿಂಗ್ ಡೈರೆಕ್ಟರ್ ಮಾದರಿಯ ಅವಶ್ಯಕತೆ ಬರುವುದು. ರಾಜಕೀಯ ಪಕ್ಷದ ನಾಯಕನಾಗಿ, ಮುಖ್ಯಮಂತ್ರಿಯಾಗಿ



ಕೆಲಸ ಮಾಡಬೇಕಾದರೆ ತಮ್ಮ ಪಕ್ಷದ ವಿವಿಧ ಹಂತಗಳ ಕಾರ್ಯ ಕರ್ತರ, ಈ ಕಾರ್ಯಕರ್ತರ ಹಿಂದಿರುವ ಜನತೆಯ, ಅಂದರೆ ತಮಗೆ ಮತ ನೀಡಿದವರ ಅಭಿಪ್ರಾಯವನ್ನು ಪಡೆದುಕೊಳ್ಳುತ್ತಲೇ ಕೆಲಸ ಮಾಡಬೇಕಾಗುತ್ತದೆ. ಅಂದರೆ ರಾಜಕೀಯವಾಗಿ, ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡಬೇಕಾಗುತ್ತದೆ. ಮ್ಯಾನೇಜಿಂಗ್ ಡೈರೆಕ್ಟರ್ ರೀತಿಯಲ್ಲಿ ಕೆಲಸ ಮಾಡುವುದೆಂದರೆ ತನ್ನ ಕಂಪನಿಗೆ ಅನುಕೂಲವಾಗುತ್ತದೆ ಎಂದು ತನಗೆ ಏನು ಅಭಿಪ್ರಾಯವಿದೆಯೋ ಅದನ್ನು ಉಳಿದ ಯಾರ ಅಭಿಪ್ರಾಯದ ಪರಿಗಣನೆಯಿಲ್ಲದೆ, ಹೇರಿ ಜಾರಿಮಾಡಿಸುವುದು. ಅದರಿಂದ ಆ ಕಂಪನಿಯಲ್ಲಿ ಆಸಕ್ತರಾದ, ಕಂಪನಿಯ ಜೊತೆಗಿರುವ ಇತರರ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಧಿಕ್ಕರಿಸಿ ಮುನ್ನುಗ್ಗುವುದು. ಅದೇ ವಿಶ್ವದಾದ್ಯಂತ ಸ್ಥಾಪಿತವಾಗಿರುವ ಕಾರ್ಪೋರೇಟ್ ಮಾದರಿ.

ಐ.ಎಂ.ಎಫ್-ವಿಶ್ವ ಸಂಸ್ಥೆಗಳ ಶರತ್ತಿಗೆ ಮಣಿದು ಬಂಡವಾಳಶಾಹಿಗಳಿಗೆ ಅನುಕೂಲವಾಗುವಂತೆ ನಡೆಯಬೇಕಾದರೆ ಆಗ ಜನಗಳ, ಕಾರ್ಯಕರ್ತರ ಇಡೀ ಪಕ್ಷದ ಅಭಿಪ್ರಾಯಗಳನ್ನು ಪರಿಗಣಿಸಿದರೆ ನಡೆಯುತ್ತದೆಯೇ ಆದ್ದರಿಂದಲೇ ಕೃಷ್ಣರವರು ಈ ಕಾರ್ಪೊರೇಟ್ ಮಾದರಿಯನ್ನು - ಅಧಿಕಾರಶಾಹಿ ಪ್ರಜಾಸತ್ತೆಗೆ ವಿರೋಧಿ ಮಾದರಿಯನ್ನು ಆರಿಸಿಕೊಂಡಿರುವುದು. ಈ ಬಂಡವಾಳಶಾಹಿ ಪ್ರಜಾಪ್ರಭುತ್ವ ವಿರೋಧಿ ಮಾದರಿಗೆ ಪರ್ಯಾಯವಾಗಿಯೇ ಎಡ ಪರ್ಯಾಯದ ಪ್ರಜಾಸತ್ತಾತ್ಮಕ ಮಾದರಿ ದೇಶದಲ್ಲಿ ರೂಪುಗೊಂಡಿರುವುದು. ಈ ಮಾದರಿಯ ಬುನಾದಿಯೇ ಎಲ್ಲ ಯೋಜನೆ, ಆಡಳಿತ, ಯೋಜನೆಗಳನ್ನು ರೂಪಿಸುವವರೂ ಜನರೇ ಜಾರಿಗೆ ತರುವವರೂ ಜನರೇ. ಈ ಮಾದರಿಯ ಭಾಗವಾಗಿಯೇ ದೇಶದಲ್ಲಿಯೇ ಪ್ರಥಮ ಬಾರಿಗೆ ನಿಜವಾದ ಪಂಚಾಯತ್ ರಾಜ್ಯ ವ್ಯವಸ್ಥೆ ಪ.ಬಂಗಾಳದಲ್ಲಿ ರೂಪುಗೊಂಡದ್ದು. ಇಡೀ ವಿಶ್ವದ ಗಮನವನ್ನು ಸೆಳೆದಿದ್ದು ಹಾಗೂ ರಾಜೀವ್ ಗಾಂಧಿಯವರು ಪಂಚಾಯಿತ್ ರಾಜ್ಯ ಕಾನೂನು ತರುವಂತೆ ಒತ್ತಡ ಹೇರಿದ್ದು, ಹಾಗೆಯೇ ಕೇರಳದಲ್ಲಿ ಜನ ರೂಪಿತ ಯೋಜನೆಯ ಮಾದರಿ ಇಂದು ಪ್ರಸಿದ್ಧವಾಗಿದೆ. ತ್ರಿಪುರದಲ್ಲಿ ಗಿರಿಜನ ಪ್ರದೇಶ ಅಭಿವೃದ್ಧಿ ಮಂಡಳಿ ಗಿರಿಜನ- ಗಿರಿಜನೇತರರ ನಡುವೆ ಮಧುರ ಬಾಂಧವ್ಯಕ್ಕೆ ಹಾಗೆಯೇ ಗಿರಿಜನರ ಜೀವನ ಹಾಗೂ ಸಂಸ್ಕೃತಿಯ ಸಂರಕ್ಷಣೆಗೆ ಮಾದರಿಯಾಗಿದೆ.

ಅದೇ ರೀತಿ ಪ್ರಜಾಸತ್ತೆಯ ಈ ವಿಸ್ತರಣೆಗೆ ಆಧಾರವಾಗಿ ಭೂಸುಧಾರಣೆಯ ಕ್ರಮಗಳು, ಆರ್ಥಿಕ ಪ್ರಜಾಸತ್ತೆಯ ಕ್ರಮಗಳು ಪಶ್ಚಿಮ ಬಂಗಾಲ, ಕೇರಳ, ತ್ರಿಪುರಗಳಲ್ಲಿಯೇ ಇಂದಿಗೂ ಸಾಧಿತವಾಗಿರುವುದು. ಅದನ್ನು ಜಾರಿಗೆ ತಂದಿದ್ದು ಕೂಡ ಅಧಿಕಾರಶಾಹಿಯ ಮೂಲಕ ಅಥವಾ ಆರಿಸಿದ ಕೆಲವೇ ಪುಢಾರಿಗಳ ಭೂಸುಧಾರಣ ಸಮಿತಿಗಳ ಮೂಲಕ ಅಲ್ಲ. ಕೋಟಿಗಟ್ಟಲೇ ಬರ್ಗಾದಾರರ(ಗೇಣಿದಾರರ) ಭೂವಂಚಿತರ ಮೂಲಕ. ಆದ್ದರಿಂದಲೇ ಈ ಮೂರು ರಾಜ್ಯಗಳಲ್ಲಿ ನಿಜವಾದ ಪ್ರಜಾಪ್ರಭುತ್ವ ರೀತಿಯಲ್ಲಿ ಪಂಚಾಯಿತ್ ರಾಜ್ಯ ವ್ಯವಸ್ಥೆ ನಡೆದು ರಾಜ್ಯದ ಜನರನ್ನು ಎಲ್ಲ ಧೋರಣೆ ನೀತಿ, ಕಾರ್ಯಕ್ರಮಗಳ ನಿರ್ಧಾರದ ಜಾರಿಯಲ್ಲಿ ಭಾಗವಹಿಸುವಂತೆ ಮಾಡಿರುವುದು.

ಈ ರಾಜ್ಯದ ಮುಖ್ಯಮಂತ್ರಿಗಳು ಯಾವುದನ್ನು ಆರಿಸಿಕೊಳ್ಳುತ್ತಾರೆ. ಅದಕ್ಕೆ ತಕ್ಕಂತ ಫಲವನ್ನು ಅವರು ಮುಂದಿನ ಚುನಾವಣೆಗಳಲ್ಲಿ ಅನುಭವಿಸುತ್ತಾರೆ ಆದರೆ ರಾಜ್ಯದ ಜನತೆಯ ಸಂಕಷ್ಟಗಳನ್ನು ಅನುಭವಿಸಿ ನಂತರವೇ ಪಾಠ ಕಲಿಯಬೇಕಾಗುತ್ತದೆ ಹಾಗೂ ರಾಜಸ್ತಾನ, ಒರಿಸ್ಸಾ, ದೆಹಲಿಗಳಂತೆ ಪಾಠ ಕಲಿಯಬೇಕಾಗುತ್ತದೆ.

- ಜಿ.ಎನ್.ನಾಗರಾಜ್

ಬಾಗೇಪಲ್ಲಿ ಚುನಾವಣೆ: ಭ್ರಷ್ಟರ, ಪಟ್ಟಭದ್ರರ ಒಳಸಂಚು

ವಿಧಾನಸಭಾ ಚುನಾವಣೆಗಳು ಮುಗಿದವು. ಸಚಿವ ಸಂಪುಟವೂ ರಚನೆಯಾಯಿತು. ಆದರೆ ಈ ಬಾರಿ ದುಡಿಯುವ ಜನತೆಯ ಧ್ವನಿಯಾಗಿ ಮಾತನಾಡುತ್ತಿದ್ದ, ಹೋರಾಡುತ್ತಿದ್ದ ಶಾಸಕರು ಇಲ್ಲದಂತಾಗಿದೆ. ಬಾಗೇಪಲ್ಲಿಯ ಸಿಪಿಐ(ಎಂ) ಶಾಸಕರಾಗಿ, ಸದಾ ಕ್ರಿಯಾಶೀಲರಾಗಿ ಪಾತ್ರವಹಿಸುತ್ತಿದ್ದ ಜಿ.ವಿ.ಶ್ರೀರಾಮರೆಡ್ಡಿಯವರನ್ನು ಏನೆಲ್ಲಾ ತಂತ್ರ-ಕುತಂತ್ರಗಳಿಂದ ಸೋಲಿಸಲಾಗಿದೆ. ದುಡಿಯುವ ವರ್ಗದ ಪರವಾಗಿ ನಿಂತ, ಬಾಗೇಪಲ್ಲಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಸಿಪಿಐ(ಎಂ) ಶಾಸಕರು ಸೋತದ್ದಾದರೂ ಹೇಗೆ? ಕಾಂಗ್ರೆಸ್‌ನಿಂದ ಉಚ್ಛಾಟನೆಗೊಂಡು, ಸ್ವತಂತ್ರ ಅಭ್ಯರ್ಥಿಯಾಗಿದ್ದ ಎನ್. ಸಂಪಂಗಿ ಗೆದ್ದದ್ದಾದರೂ ಹೇಗೆ?

ಬಾಗೇಪಲ್ಲಿ ಕ್ಷೇತ್ರದ ಚುನಾವಣೆಯ ಪ್ರಕ್ರಿಯೆಯಲ್ಲಿ ಅನೇಕ ವಿಶೇಷ, ಅನಿರೀಕ್ಷಿತ ಘಟನೆಗಳ ಸರಮಾಲೆಯೇ ಇದೆ. ಈ ಕ್ಷೇತ್ರದ ಚುನಾವಣೆ ಸೆಪ್ಟೆಂಬರ್ 5 ರಂದೇ ನಡೆಯಬೇಕಾಗಿತ್ತು. ಆದರೆ ನಾಮಪತ್ರ ಸಲ್ಲಿಕೆಯ ಸಂದರ್ಭದಲ್ಲಿ ತನಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ಸಿಗಲಿಲ್ಲವೆಂದು, ಆ ಪಕ್ಷದ ಟಿಕೆಟ್ ದೊರೆತಿದ್ದ ಅಭ್ಯರ್ಥಿ ಮುನಿರಾಜುರವರು ನಾಮಪತ್ರ ಸಲ್ಲಿಸದಂತೆ ಅಡ್ಡಿಯನ್ನುಂಟು ಮಾಡಿ ಗಲಭೆ ಸೃಷ್ಟಿಸಿದ್ದು, ಇದೇ ಸಂಪಂಗಿ ಹಾಗೂ ಬೆಂಬಲಿಗರ ತಂಡ. ಈ ಗಲಭೆಯಲ್ಲಿ ಗೋಲಿಬಾರು ನಡೆದು ಇಬ್ಬರು ಅಮಾಯಕರು ಪ್ರಾಣಕಳೆದುಕೊಂಡ ಧಾರುಣ ಘಟನೆ ಸಂಭವಿಸಿತು. ಇದನ್ನೇ ಬಳಸಿಕೊಂಡು ವಿಧಾಸಭಾ ಚುನಾವಣೆಯನ್ನು ಅಂತಿಮ ಹಂತಕ್ಕೆ ಮುಂದೂಡಲಾಯಿತು. ಈ ಒಳಗೆ ರಾಜ್ಯದ ಎಲ್ಲಾ ಬಹುತೇಕ ಕ್ಷೇತ್ರಗಳ ಚುನಾವಣೆಗಳು ಮುಗಿದು ಹೋಗಿದ್ದವು. ಆದ್ದರಿಂದ ಕೋಲಾರ ಜಿಲ್ಲೆಯ ಬಂಡವಾಳಶಾಹಿ ಪಕ್ಷಗಳ ನಾಯಕರು, ಸಿಪಿಐ(ಎಂ) ವಿರುದ್ಧ ಮಸಲತ್ತು ನಡೆಸಲು ಈ ಸಮಯ ಸಾಕಾಯಿತು. ಈ ಚುನಾವಣೆಯಲ್ಲಿ ಜಾತಿ ಎಂಬ ವಿಷ ಬೀಜವನ್ನು ಬಿತ್ತಿದರು. ಕೋಟಿಗಟ್ಟಲೇ ಹಣ ಸುರಿದರು. ಹೆಂಡದ ಹೊಳೆಯೇ ಹರಿಯಿತು. ಸೀರೆ, ಮೂಗುತಿಗಳ ವಿತರಣೆಯೂ ಆಯಿತು. ಇತರೆ ಪಕ್ಷಗಳ ಹಿರಿ-ಕಿರಿ ನಾಯಕರನ್ನು ಹಣದಿಂದ ಖರೀದಿಸಲಾಯಿತು. ಬಾಗೇಪಲ್ಲಿಯ ಕಳ್ಳ ವ್ಯಾಪಾರಿಗಳು, ಪಟ್ಟಭದ್ರ

9ನೇ ಪುಟಕ್ಕೆ

ಕರಾವಳಿ ಇನ್ನು ಬಿಜೆಪಿಯ ಕೋಟೆಯಲ್ಲ

- ಬಿ.ಮಾಧವ

'ಕರಾವಳಿಯ ಜನರು ಬುದ್ಧಿವಂತರು' ಎಂಬ ಮಾತುಗಳು ಕರ್ನಾಟಕದ ಇತರ ಭಾಗಗಳಲ್ಲಿ ಕೇಳಿಬರುವುದು ಸಾಮಾನ್ಯ. ಶಿಕ್ಷಣ, ಕಲೆ, ಸಾಹಿತ್ಯ, ವಾಣಿಜ್ಯ ಮತ್ತು ವ್ಯಾಪಾರದಲ್ಲಿ ಕರಾವಳಿ ಕರ್ನಾಟಕದ ಜನರ ಪ್ರತಿಭೆ ಯಾವಾಗಲೂ ಎದ್ದು ಕಾಣುತ್ತದೆ. ಹಿಂದೂ-ಮುಸ್ಲಿಂ-ಕ್ರೈಸ್ತ ಸಮುದಾಯಗಳ ನಡುವೆ ಮಧುರ ಬಾಂಧವ್ಯದ ಪರಂಪರೆ ಕೂಡಾ ಇರುವ ಪ್ರದೇಶವಿದು. ಆದರೆ 1992ರ ಡಿಸೆಂಬರ್ 6ರ ನಂತರ ಈ ಭವ್ಯ ಪರಂಪರೆಗಳಿಗೆ ಸಿಡಿಲೆರಗಿತು. ಅಂದಿನಿಂದ ಬಹುತೇಕ ಮನುಷ್ಯರು ಮನುಷ್ಯರಾಗಿ ಉಳಿಯಲಿಲ್ಲ. ಅವರು ತಮ್ಮನ್ನು ಮತೀಯ ಆಧಾರದಲ್ಲಿ ಗುರುತಿಸಿಕೊಳ್ಳಲಾರಂಭಿಸಿದರು. 'ಬುದ್ಧಿವಂತ' ಜನರು ಆತನಕ ಕಲಿತದ್ದೆಲ್ಲಾ ತಿರುಗು ಮುರುಗಾಯಿತು.

ಈ ಹಿನ್ನೆಲೆಯಲ್ಲಿ ಅನಂತರದ ಚುನಾವಣೆಗಳು ಬಂದವು. ಯಾವ ರಾಜಕೀಯ ಮತ್ತು ಆರ್ಥಿಕ ನೀತಿಗಳ ಆಧಾರದಲ್ಲಿ ರಾಜ್ಯದ ಮತ್ತು ದೇಶದ ಆಡಳಿತ ನಡೆಸಬೇಕು. ಜನಸಾಮಾನ್ಯರ ಬದುಕಿನ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕೆಂಬುದರ ಆಧಾರದಲ್ಲಿ ಜನ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಚುನಾವಣೆಗಳ ಮೂಲ ಉದ್ದೇಶಗಳ ಮೇಲೆ ಕೋಮುಭಾವನೆಗಳ ಪರದೆ ಬಿತ್ತು. ಕೋಮುಗಳ ಹೆಸರಿನಲ್ಲಿ ವಿಷಪೂರಿತ ಪ್ರಚಾರಗಳು, ಸದಾ ಉದ್ರಿಕ್ತ ಪರಿಸ್ಥಿತಿ, ಅಲ್ಲಲ್ಲಿ ಕೋಮು ಗಲಭೆಗಳನ್ನೆಬ್ಬಿಸಿ ಅವುಗಳನ್ನು ನೆರೆಯ ಪ್ರದೇಶಗಳಿಗೆ ವಿಸ್ತರಿಸುವುದು, ಇವುಗಳೇ ಓಟುಗಳಿಸುವ ವಿಧಾನಗಳೆಂಬ ಭಾವನೆಯನ್ನು ಬೆಳೆಸಲಾಯಿತು.


1994ರಲ್ಲಿ ಈ ಭಾವನೆಗಳು ಪರಾಕಾಷ್ಠೆಗೆ ತಲುಪಿದಾಗ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಮಂಗಳೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಎಲ್ಲಾ ಎಂಟು ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆದ್ದರು. ಉಡುಪಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮೊತ್ತಮೊದಲ ಬಾರಿಗೆ ಸುರತ್ಕಲ್ ಮತ್ತು ಬೈಂದೂರಿನಲ್ಲಿ ಬಿಜೆಪಿ ಗೆದ್ದಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿಜೆಪಿ ತನ್ನ ಪ್ರಾಬಲ್ಯವನ್ನು ಮೆರೆಯಿತು. ಕೋಮುವಾದಿಗಳ ಅಟ್ಟಹಾಸ ಮುಂದುವರಿದಂತೆ ಮಂಗಳೂರು ಮತ್ತು ಕಾರವಾರ ಲೋಕಸಭಾ ಸ್ಥಾನಗಳೊಂದಿಗೆ 1998ರಲ್ಲಿ ಉಡುಪಿ ಲೋಕಸಭಾ ಕ್ಷೇತ್ರವೂ ಬಿಜೆಪಿಯ ತೆಕ್ಕೆಗೆ ಬಿದ್ದಿತು..

ಈ ಮಧ್ಯೆ ಕರಾವಳಿಯ ಜನರು ಒಳ್ಳೆಯ ಪಾಠ ಕಲಿತರು. ಸುರತ್ಕಲ್ಲಿನ ಕೋಮು ಗಲಭೆಗಳು ಇಡೀ ಕರಾವಳಿಯನ್ನು ನಡುಗಿಸಿದವು. ಅಲ್ಲಿನ ಕರಾಳ ಕೃತ್ಯಗಳ ಹಿಂದಿದ್ದ ರಾಜಕೀಯ ಕೈಗಳನ್ನು ಜನರು ಗುರುತಿಸಿದರು. ಎಂಎಲ್ಎ ಮತ್ತು ಎಂಪಿಗಳ ಹೆಸರು ಹೇಳಿಕೊಂಡು ಆಡಳಿತದ ಎಲ್ಲಾ ಸ್ತರಗಳಲ್ಲೂ ಅಧಿಕಾರದ ದುರುಪಯೋಗ ನಡೆಸುವ ಶಕ್ತಿಗಳನ್ನು ಅವರು ಕಣ್ಣಾರೆ ಕಂಡರು.

1999ರ ಚುನಾವಣೆಗಳು ಜಾತ್ಯಾತೀತ ಶಕ್ತಿಗಳಿಗೆ ಒಂದು ವರದಾನವೆಂಬಂತೆ ವ್ಯಕ್ತವಾದವು. ಉಡುಪಿ ಮತ್ತು ಕಾರವಾರ ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಸೋತಿತು. ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ತನ್ನ ಸ್ಥಾನವನ್ನು ಉಳಿಸಿಕೊಂಡಿತಾದರೂ, ಈ ಕ್ಷೇತ್ರದ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋತರು. ಉಡುಪಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸುರತ್ಕಲ್ ಮತ್ತು ಬೈಂದೂರಿನಲ್ಲಿ 1994ರಲ್ಲಿ ಗಳಿಸಿದ್ದ ಸ್ಥಾನಗಳನ್ನು ಪಡೆಯಲು ವಿಫಲವಾದ ಬಿಜೆಪಿಗೆ ಕುಂದಾಪುರದ ಕಾಂಗ್ರೆಸ್ ಶಾಸಕರ ಮೇಲಿನ ಅತೃಪ್ತಿಯ ಲಾಭ ಪಡೆದು ಅಲ್ಲಿ ತನ್ನ ಖಾತೆ ತೆರೆಯಲು ಸಾಧ್ಯವಾಯಿತು.

ಒಟ್ಟಿನಲ್ಲಿ ಕರಾವಳಿ ಕರ್ನಾಟಕದ ಮತದಾರರು ಬಿಜೆಪಿಗೆ ಬಲವಾದ ಹೊಡೆತ ನೀಡಿದ್ದಾರೆ. ಮತ ಎಣಿಕೆಯ ದಿನದಂದು ಸ್ಥಳೀಯ ಪತ್ರಿಕೆಗಳಲ್ಲಿ ಕರ್ನಾಟಕದ ಬಿಜೆಪಿಯ ಕನಸಿನ ಮಂತ್ರಿಮಂಡಲದ ಪಟ್ಟಿ ಪ್ರಕಟವಾಗಿತ್ತು. ಬಿಜೆಪಿ ಮತ್ತು ಆರೆಸ್ಸೆಸ್ ಮುಖಂಡರು ಜಂಟಿಯಾಗಿ ಸಮಾಲೋಚಿಸಿ ತಯಾರಿಸಿದ್ದೆನ್ನಲಾದ ಈ ಪಟ್ಟಿಯಲ್ಲಿ ಕರಾವಳಿಯ ಒಂದೆರಡು ಬಿಜೆಪಿ ಮುಖಂಡರು ಮಂತ್ರಿಗಳಾಗಿ ಆದಿನದ ಮಟ್ಟಿಗೆ ಕನಸಿನ ಲೋಕದಲ್ಲಿ ಮೆರೆದರು.

ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ ಸಿಪಿಐ(ಎಂ) ಸೋತಿದೆ. ಆದರೆ ಅಲ್ಲಿನ ಮತದಾರರು ಸೋಲಿಸಿದ್ದು ಸಿಪಿಐ(ಎಂ) ನಲ್ಲ ಬಿಜೆಪಿಯನ್ನು ಹಿಂದಿನ ಚುನಾವಣೆಗಳಲ್ಲಿ ನಮಗೆ ದೊಡ್ಡ ಪ್ರಮಾಣದಲ್ಲಿ ಮತ ನೀಡುತ್ತಿದ್ದ ಮುಸ್ಲಿಂ ಬಾಂಧವರು ಈ ಬಾರಿ ಬಿಜೆಪಿಯನ್ನು ಸೋಲಿಸಬೇಕೆಂಬ ದೃಢ ನಿರ್ಧಾರ ಮಾಡಿ, ಎಲ್ಲಾ ಭಿನ್ನಾಭಿಪ್ರಾಯಗಳನ್ನೂ ಬದಿಗೆ ತಳ್ಳಿ, ತಮ್ಮ ಸಮಾಜದವರೇ ಆದ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಿ ಗೆಲ್ಲಿಸಿದ್ದಾರೆ. ಉಳ್ಳಾಲದ ಮುಸ್ಲಿಂ ಬಾಂಧವರ ಭಾವನೆಗಳನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಅವರೆಲ್ಲಾ ಕಾಂಗ್ರೆಸ್ ಬೆಂಬಲಿಗರೇನಲ್ಲ. ಅವರು ಖಂಡಿತವಾಗಿ ಮತೀಯ ಭಾವನೆಗಳಿಂದ ಪ್ರೇರಿತರಾದವರಲ್ಲ. ಮುಂದಿನ ದಿನಗಳಲ್ಲಿ ಸಿಪಿಐ(ಎಂ) ನೇತೃತ್ವದ ಜನಪರ ಚಳುವಳಿಗಳಲ್ಲಿ ಬಹುಸಂಖ್ಯೆಯ ಅಲ್ಪಸಂಖ್ಯಾತ ಬಾಂಧವರು ಹಿಂದಿನಂತೆಯೇ ಭುಜಕ್ಕೆ ಭುಜಕೊಟ್ಟು ಮುನ್ನಡೆಯುವರೆಂಬ ವಿಶ್ವಾಸ ಇದೆ.



ಒಂದು 'ಕೈ' ನೋಡಿಕೊಂಡ ಉತ್ತರ ಕನ್ನಡದ ಮತದಾರರು

ಈ ಬಾರಿ ಯಾವ ಅಲೆಯೂ ಉತ್ತರ ಕನ್ನಡದಲ್ಲಿ ಬಿಜೆಪಿಯನ್ನು ರಕ್ಷಿಸಲಿಲ್ಲ. ಹ್ಯಾಟ್ರಿಕ್ ಸಾಧಿಸುತ್ತೇವೆ ಎಂದು ಆತ್ಮವಿಶ್ವಾಸದಿಂದ ಓಡಾಡುತ್ತಿದ್ದ ಅನಂತಕುಮಾರ ಹೆಗಡೆ, ಶಿವಾನಂದ ನಾಯ್ಕ ಮತ್ತು ರಾಜ್ಯ ಬಿಜೆಪಿ ಸರ್ಕಾರದಲ್ಲಿ ಶಿಕ್ಷಣ ಸಚಿವನಾಗುತ್ತೇನೆಂದು ಕನಸು ಕಂಡಿದ್ದ ಎಂ.ಪಿ. ಕರ್ಕಿ, ಮೊನ್ನೆ ಮೊನ್ನೆಯವರೆಗೆ ಕಾಂಗ್ರೆಸ್‌ನಲ್ಲಿದ್ದು ಕೋಮುವಾದದ ಬಗ್ಗೆ ಉದ್ದುದ್ದ ಭಾಷಣ ಮಾಡುತ್ತಿದ್ದು ಚುನಾವಣೆ ಸಮೀಪಿಸಿದಾಗ ಬಿಜೆಪಿಗೆ ಹಾರಿದ ಪ್ರಭಾಕರ ರಾಣೆಯೂ ಸೇರಿದಂತೆ ಅನೇಕರನ್ನು ಉತ್ತರ ಕನ್ನಡದ ಜನತೆ ಸಾಲುಸಾಲಾಗಿ ತಿರಸ್ಕರಿಸಿದ್ದಾರೆ. ಸ್ವಾತಂತ್ರ್ಯ ಪಡೆದ ಪ್ರಾರಂಭದ ದಿನಗಳಿಂದ ಸೌಹಾರ್ದತೆಯ ಮೌಲ್ಯಗಳನ್ನು ಆ ತತ್ವಗಳಿಗೆ ತಾವೇ ಹಿಡಿಸಿದ ಗ್ರಹಣವನ್ನು ಬೆಂಬಲಿಸಿದ್ದ ಜನತೆ ಕಳೆದ 3-4 ವರ್ಷದ ನಂತರ ತಾವೇ ಬಿಡಿಸಿ ಮತ್ತೆ ಜಾತ್ಯಾತೀತ ಮೌಲ್ಯಗಳನ್ನು ಎತ್ತಿಹಿಡಿದು ಸಂಘಪರಿವಾರಕ್ಕೆ ಸೂಕ್ತ ಪಾಠ ಕಲಿಸಿದ್ದಾರೆ. ರಾಮಕೃಷ್ಣ ಹೆಗಡೆಯವರ ಬುದ್ಧಿವಂತಿಕೆಯ ಫಲವಾಗಿ ರೂಪುಗೊಂಡ ಎನ್.ಡಿ.ಎ. ಕೊನೆಯ ಹಂತದಲ್ಲಿ ಬಂಗಾರಪ್ಪನವರ ಬೆಂಬಲಿಗರೆನಿಸಿಕೊಂಡವರು ಕಾಂಗ್ರೆಸ್ ವಿರೋಧಿ ಬಣಕ್ಕೆ ಬೆಂಬಲಿಸಿದ್ದು ಲಾಭ ಆಗಬಹುದು ಎಂದು ಕೊಂಡವರಿಗೆ ದೊಡ್ಡ ನಿರಾಶೆ ಆಗುವುದರೊಂದಿಗೆ ಹೆಗಡೆಯವರಿಗೂ ಉತ್ತರಕನ್ನಡದಲ್ಲಿ ತನ್ನ ಶಕ್ತಿ ಏನು ಎನ್ನುವ ಸ್ಪಷ್ಟ ಸತ್ಯ ಅರಿವಾಗಿದ್ದನ್ನು ಕೂಡ ಇಲ್ಲಿ ದಾಖಲಿಸಲೇ ಬೇಕು. ಬಿಜೆಪಿಯೊಂದಿಗೆ ಕೈಜೋಡಿಸಿಯೂ ಒಂದು ಸ್ಥಾನ ಗೆಲ್ಲಲಾರದ ಲೋಕಶಕ್ತಿ ಸ್ವತಂತ್ರವಾಗಿ ಸ್ಪರ್ಧೆಮಾಡಿದ್ದರೆ ಸ್ಥಿತಿ ಏನಾಗಬಹುದಿತ್ತು ಎನ್ನುವುದಕ್ಕೆ ಜಿಲ್ಲೆಯ ಫಲಿತಾಂಶ ಉದಾಹರಣೆಯಾಗಿದೆ.

ಕೆನರಾ ಲೋಕಸಭಾ ಕ್ಷೇತ್ರವನ್ನು ಸುಮಾರು 10191 ಮತಗಳ ಅಂತರದಿಂದ ಶ್ರೀಮತಿ ಮಾರ್ಗರೇಟ್ ಆಳ್ವಾ ಗೆದ್ದಿದ್ದಾರೆ. ಕಳೆದೆರಡು ಚುನಾವಣೆಗಳಲ್ಲಿ ಆಳ್ವಾ ಅನಂತಕುಮಾರರ ಎದುರು ಸೋತು, ಸೋತರೂ ಜನರ ಮಧ್ಯೆ ಕೆಲಸ ಮಾಡಿದ ಫಲವಾಗಿ ಗೆಲವು ಸಾಧಿಸಿದ್ದಾರೆ ಎನ್ನಬಹುದು ಅಥವಾ ಎರಡು ಸಲ ಗೆದ್ದೂ ಜನರ ಮಧ್ಯೆ ಕೆಲಸ ಮಾಡದೆ ಹಿಂದೂ ಸಂಘಟನೆಯಲ್ಲಿ ಐಕ್ಯರಾದ ಫಲವಾಗಿ ಅನಂತಕುಮಾರ ಸೋತಿದ್ದಾರೆ ಎನ್ನಬಹುದು ಅಥವಾ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡದೆ ಕೇವಲ ಭಾಷಣ, ಆಶ್ವಾಸನೆಗಳಲ್ಲಿ ಹೆಚ್ಚು ತೊಡಗಿಕೊಂಡಿರುವ ಅನಂತಕುಮಾರ ಅವರಿಗೆ ಜನ ಪಾಠಕಲಿಸಿದ ಫಲವಾಗಿ ಅನಂತಕುಮಾರ ಸೋತಿದ್ದಾರೆ ಎನ್ನಬಹುದು, ಅಥವಾ ನೂರಾರು ವರ್ಷಗಳಿಂದ ಸೌಹಾರ್ದತೆ ಮೆರೆದ ಜಿಲ್ಲೆಯಲ್ಲಿ ಮತ, ಜಾತಿಗಳ ವಿಷಬೀಜ ಬಿತ್ತುವ ಕ್ರಿಯೆಯನ್ನು ಜನ ಒಪ್ಪದೆ ಸೌಹಾರ್ದತಾ ವಾತಾವರಣವನ್ನು ಇಷ್ಟಪಟ್ಟ ಕಾರಣದಿಂದ ಅನಂತಕುಮಾರ ಸೋತಿದ್ದಾರೆ ಎನ್ನಬಹುದು. ಅಥವಾ ಬೆಲೆ ಏರಿಕೆ, ಖಾಸಗೀಕರಣ ಅಭಿವೃದ್ಧಿಹೀನ ಸ್ಥಿತಿಗೆ ಕಾರಣವಾದ ಎ.ಬಿ. ವಾಜಪೇಯಿ ಅವರ ಅಸಮರ್ಥ ನಾಯಕತ್ವದ ವಿರುದ್ಧ ಜನ ತೀರ್ಪು ಕೊಟ್ಟಿರುವುದರಿಂದ ಬಿಜೆಪಿ ಸೋತಿದೆ ಎನ್ನಬಹುದು. ಅಥವಾ ಸ್ವದೇಶಿಯ ಹೆಸರಿನಲ್ಲಿ ಸ್ವದೇಶಿ ಕೈಗಾರಿಕೆಗಳನ್ನು ಸಂಪೂರ್ಣನಾಶ ಮಾಡುತ್ತಿರುವ ನಿರುದ್ಯೋಗ ಸಮಸ್ಯೆಗೆ ಕಾರಣ ಆಗುತ್ತಿರುವ ಕೇಂದ್ರ ಸರ್ಕಾರದ ಆರ್ಥಿಕ ನೀತಿಯನ್ನು ಅರ್ಥಮಾಡಿಕೊಳ್ಳುವ ಪ್ರಜ್ಞಾವಂತಿಕೆಯನ್ನು ಉ.ಕ. ಜಿಲ್ಲೆಯ ಜನ ಮರೆತ ಕಾರಣದಿಂದ ಬಿಜೆಪಿ ಸೋತಿದೆ ಎನ್ನಬಹುದು. ಮತ್ತು ಈ ಎಲ್ಲಾ ಕಾರಣಗಳು ಕೂಡ ಇವರ ಸೋಲಿನಲ್ಲಿ ಕೆಲಸ ಮಾಡಿದೆ.

ಇದು ಕೇವಲ ಬಿಜೆಪಿಗೆ ಮಾತ್ರ ಪಾಠವಲ್ಲ ಕಾಂಗ್ರೆಸ್ಸಿಗೂ ಕೂಡ ಪಾಠವಾಗಬೇಕಾಗಿದೆ. ಮತದಾರರ ದೊಡ್ಡತನವನ್ನು ಅವರ ದೌರ್ಬಲ್ಯವೆಂದು ತಿಳಿದು ವರ್ತಿಸುವ ಹೊಣೆಗೇಡಿ ಪಕ್ಷ, ಅಭ್ಯರ್ಥಿಗಳನ್ನು ಜನ ಸಹಿಸುವುದಿಲ್ಲ. ಕಾಂಗ್ರೆಸ್‌ನ ಆಡಳಿತದ ಕಾಲದ ಬೆಲೆ ಏರಿಕೆ, ನಿರುದ್ಯೋಗ, ಮೂಲ ಸೌಕರ್ಯದ ಕೊರತೆ, ಬಡತನ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಸಮರ್ಪಕತೆಯನ್ನು ಸಹಿಸಲಾರದ ಜನ ಬಿಜೆಪಿಯ ಕಪಟ ಮಾತುಗಳನ್ನು ನಂಬಿ ಬೆಂಬಲಿಸಿದರು. ಇವರಿಂದಲೂ ಸಮಸ್ಯೆಗೆ ಪರಿಹಾರ ಇಲ್ಲ ಎನ್ನುವುದಕ್ಕಾಗಿ ಮತ್ತೆ ಕಾಂಗ್ರೆಸ್ಸಿಗೆ ಬೆಂಬಲಿಸಿದ್ದಾರೆ. ಈ ಬೆಂಬಲ ಕಾಯಂ ಆದದ್ದೆಂದು ಕಾಂಗ್ರೆಸ್ ತಿಳಿಯಬೇಕಾಗಿಲ್ಲ. ಮತ್ತೆ ಕಾಂಗ್ರೆಸ್ಸಿನಿಂದ ಅದೇ ಆರ್ಥಿಕ ನೀತಿ, ಅದೇ ಜನವಿರೋಧಿ ಅಧಿಕಾರ ಹರಿದು ಬಂದರೆ ಮತ್ತೆ ಜನ ಪಾಠ ಕಲಿಸುತ್ತಾರೆ. ಹಾಗಾಗಿ ಕಾಂಗ್ರೆಸ್‌ನ ಪ್ರತಿನಿಧಿಗಳು ಇವನ್ನು ಅರ್ಥಮಾಡಿಕೊಳ್ಳಬೇಕು. ಇವರೆಲ್ಲರೂ ಗೆದ್ದ ಅಂತರ ತೀರಾ ಕಡಿಮೆ ಇದೆ. ಸಂಘಪರಿವಾರ ಇನ್ನೈದು ವರ್ಷ ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ. ಮತ್ತೆ ಅದು ಆಚೆ ವಾಲದಂತೆ ನೋಡಿಕೊಳ್ಳುವ ಕೆಲಸ ಈ ಜಿಲ್ಲೆಯ ಪ್ರತಿನಿಧಿಗಳದ್ದು, ಪ್ರತಿನಿಧಿಗಳನ್ನು ಎಚ್ಚರಿಸುವ ಕೆಲಸ ಪ್ರಜ್ಞಾವಂತ ಮತದಾರರದ್ದು, ಸಂಘ ಸಂಸ್ಥೆಗಳದ್ದು ಬಿಜೆಪಿಯ ದೌರ್ಬಲ್ಯ, ಪ್ರಜಾ ಪ್ರಭುತ್ವ ವಿರೋಧಿ ನೀತಿಗಳು, ಸ್ವದೇಶಿ ತತ್ವದ ಒಳಹೂರಣಗಳ ಬಗ್ಗೆ ವ್ಯಾಪಕವಾಗಿ ಜನತೆಗೆ ತಿಳಿಸುವ ಕೆಲಸವನ್ನು ಕಾಂಗ್ರೆಸ್ ಗಂಭೀರವಾಗಿ ಎತ್ತಿಕೊಳ್ಳಲಿಲ್ಲ. (ಅಲ್ಲಿದ್ದವರಲ್ಲಿ ಕೆಲವರು ಇನ್ನೂ ಬಿಜೆಪಿ ಮನಸ್ಸಿನವರೇ ಆಗಿರುವುದು ಇದಕ್ಕೆ ಕಾರಣ ಆಗಿರಬಹುದು). ಆದರೆ ಜಿಲ್ಲೆಯಲ್ಲಿರುವ ಎಡಸಂಘಟನೆಗಳು ಮತ್ತು ಪ್ರಜಾಸತ್ತಾತ್ಮಕ ಜಾತ್ಯಾತೀತ ಮೌಲ್ಯಗಳಲ್ಲಿ ನಂಬಿಕೆ ಇರುವ ಸಾಂಸ್ಕೃತಿಕ ಸಂಘಟನೆಗಳು ಪದಾಧಿಕಾರಿಗಳು ನಿರಂತರವಾಗಿ ಜನರಿಗೆ ತಿಳುವಳಿಕೆ ಕೊಡುವ ಕೆಲಸ ಮಾಡಿದರು.

ಉತ್ತರ ಕನ್ನಡದಾದ್ಯಂತ ಕ್ರಿಯಾಶೀಲವಾಗಿರುವ ಸಿಐಟಿಯು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಮಹಿಳಾ ಸಂಘಟನೆಗಳು, ಎಸ್.ಎಫ್.ಐ, ಡಿ.ವೈ.ಎಫ್.ಐ ಹೀಗೆ ಅನೇಕ ಸಂಘಟನೆಗಳು ಜಾಥಾ ಮೂಲಕ, ಸಾರ್ವಜನಿಕ ಸಭೆಗಳ ಮೂಲಕ, ವಿಚಾರ ಸಂಕಿರಣಗಳ ಮೂಲಕ, ಕರಪತ್ರ ಕಿರುಪುಸ್ತಕಗಳ ಮೂಲಕ ಪತ್ರಿಕೆಗಳ ಮೂಲಕ ಸಮಾವೇಶಗಳ ಮೂಲಕ ಬಿಜೆಪಿಯ ಮತ್ತು ಅದರ ಮಿತ್ರರ ನಿಜ ಬಣ್ಣವನ್ನು ಬಯಲು ಮಾಡುವ ಪ್ರಾಮಾಣಿಕ ಪ್ರಯತ್ನಮಾಡಿದರು. ಈ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಬೇಕೆಂದು ಪಣತೊಟ್ಟು ಇವರೆಲ್ಲ ಜಿಲ್ಲೆಯಲ್ಲಿ ಕೆಲಸಮಾಡಿದ್ದು ಕೆನರಾ ಕ್ಷೇತ್ರದಲ್ಲಿ ಜಾತ್ಯಾತೀತ ಮೌಲ್ಯಗಳ ಗೆಲುವಿನ ಪ್ರಮುಖ ಕಾರಣಗಳಲ್ಲೊಂದು ಎನ್ನುವುದನ್ನು ಗುರುತಿಸಬಹುದು.

ವಿಧಾನಸಭೆ: ಯಾವ ಹೊಂದಾಣಿಕೆಯೂ ಫಲಕೊಡಲಿಲ್ಲ ಬಿಜೆಪಿಗೆ

ವಿಧಾನ ಸಭಾ ಚುನಾವಣೆಯಲ್ಲಿ ಜಿಲ್ಲೆಯ ಗಮನ ಸೆಳೆದ ಎರಡು ಕ್ಷೇತ್ರಗಳೆಂದರೆ ಭಟ್ಕಳ ಮತ್ತು ಕಾರವಾರ.

ಕೋಮುಗಲಭೆಯ ಕಾರಣಕ್ಕಾಗಿ ಭಟ್ಕಳ ರಾಜ್ಯದಾದ್ಯಂತ ಹೆಸರು ವಾಸಿಯಾದ ಕ್ಷೇತ್ರ. ಇದೇ ಇಲ್ಲಿ ಬಿಜೆಪಿಯ ಬಂಡವಾಳಕೂಡ ಆಗಿತ್ತು. ಇಲ್ಲಿ ಶಿವಾನಂದ ನಾಯ್ಕ ಸೋತು, ಕಾಂಗ್ರೆಸ್‌ನ ಜೆ.ಡಿ. ನಾಯ್ಕ ಆಯ್ಕೆ ಆಗಿದ್ದಾರೆ. ಕೋಮುಗಲಭೆ, ಚಿತ್ತರಂಜನ್‌ರ ಕೊಲೆಯ ಅಲೆಗಳಿಂದ ಶಿವಾನಂದ ನಾಯ್ಕ ಆಯ್ಕೆ ಆಗುತ್ತಿದ್ದರು.

ಉತ್ತರ ಕನ್ನಡದ ತುಂಬ ಬಿಜೆಪಿ ಸೋತರೂ ಭಟ್ಕಳದಲ್ಲಿ ಶಿವಾನಂದ ನಾಯ್ಕ ಗೆಲ್ಲುತ್ತಾನೆಂಬ ಅನಿಸಿಕೆ ಇತ್ತು. ಹೇಗೂ ನಾವು ಗೆಲ್ಲುತ್ತೇವೆಂದು ಚುನಾವಣಾ ನೀತಿ ಸಂಹಿತೆ ಮೀರಿ ಪೋಸ್ಟರ್, ಬ್ಯಾನರ್ ಹೆಚ್ಚಿದ್ದು, ಅದನ್ನು ತೆಗೆಸಿದ ಚುನಾವಣಾಧಿಕಾರಿಗಳಿಗೆ ಜೀವ ಬೆದರಿಕೆ ಹಾಕಿದ್ದು ಈಗ ಹಳೆಯ ಕತೆ. ಆದರೆ ಚುನಾವಣಾ ಫಲಿತಾಂಶ ಬಂದ ನಂತರ ವಿಜಯೋತ್ಸವಕ್ಕಾಗಿ ಖರೀದಿಸಿದ ಪಟಾಕಿಗಳನ್ನೆಲ್ಲ ಸಿಡಿಸಲು ದೀಪಾವಳಿಯವರೆಗೆ ಕಾಯಬೇಕಾದ ಸ್ಥಿತಿ ಅವರದ್ದು. ಅಥವಾ ತಂದ ಅಂಗಡಿಗೇ ವಾಪಸು ಮಾಡುವ ಸ್ಥಿತಿ ಬಂದಿದ್ದು ಮಾತ್ರ ತಮಾಷೆಯಾಗಿದೆ.

ಮುಸ್ಲಿಂ-ಕ್ರಿಶ್ಚಿಯನ್ ವಿರೋಧಿ ನಿಲುವೇ ತನನ್ನು ಯಾವತ್ತೂ ರಕ್ಷಣೆ ಮಾಡುತ್ತದೆ ಎಂದು ತಿಳಿದದ್ದು ಸೋಲಿಗೆ ಒಂದು ಕಾರಣವಾದರೆ ಕ್ಷೇತ್ರದ ತುಂಬಾ ಕಾರ್ಮಿಕ-ಯುವಜನ ವಿರೋಧಿ ಕಾರ್ಯಾಚರಣೆ ಮಾಡಿದ್ದು ಪ್ರಮುಖ ಕಾರಣವಾಯಿತು. ಭಟ್ಕಳ ತಾಲೂಕಿನ ಅನಂತವಾಡಿಯ ಪ್ರಧ್ವೀಶ ಹಂಚಿನ ಫ್ಯಾಕ್ಟರಿಯ ಕಾರ್ಮಿಕರ ಹೋರಾಟ ನಡೆಯುತ್ತಿದ್ದಾಗ ಮಾಲಿಕರ ಪರ ವಕಾಲತು ವಹಿಸಿ ನ್ಯಾಯ ಕೇಳಲು ಹೋದ ಕಾರ್ಮಿಕರ ಮೇಲೆ ಪೊಲೀಸರನ್ನು ಛೂಬಿಟ್ಟ ಫಲವಾಗಿ ಇನ್ನೂ ನ್ಯಾಯಾಲಯಕ್ಕೆ ಅಲೆಯುವ ಸ್ಥಿತಿ ಇದೆ. ಇದರೊಂದಿಗೆ ಜಿಲ್ಲೆಯ ಅನೇಕ ಕಡೆಯಲ್ಲಿ ಸಿಐಟಿಯು ಸಂಘಟನೆಯನ್ನು ಒಡೆದು ಬಿ.ಎಂ.ಎಸ್. ಕಟ್ಟಲು ಪ್ರಯತ್ನಿಸಿ (ಅಗದು ಕೈಸೋತದ್ದು ಬೇರೆ) ಕಾರ್ಮಿಕರ ವಿರೋಧ ಕಟ್ಟಿಕೊಂಡರು. ಕಾರ್ಮಿಕರಿಗೆ, ನೌಕರರಿಗೆ ಸಿಗಬೇಕಾದ ಸೌಲತ್ತುಗಳಿಂದ ಅವರು ವಂಚಿತರಾಗಬೇಕಾಯಿತು. ಕಾರ್ಮಿಕ ವಿರೋಧಿ ಮಾಲಿಕರ ಪರ ನೀತಿಯಿಂದ ನೂರಾರುಜನ ಕಾರ್ಮಿಕರು ಬೀದಿಪಾಲು ಮಾಡಿದ ಖ್ಯಾತಿ ಶಿವಾನಂದ ನಾಯ್ಕರ[...] ಮತ್ತು ಅವರ ಪಕ್ಷಕ್ಕೆ ಸಲ್ಲುತ್ತವೆ. ಇದರ ಫಲವಾಗಿ [...] ಕ್ಷೇತ್ರದಲ್ಲಿ ನಿರ್ಣಾಯಕವಾದ ಕಾರ್ಮಿಕರ ಓಟು ಇವರ[...] ಸೋಲಿಸುವಲ್ಲಿ ಮಹತ್ವದ ಕೊಡುಗೆ ಕೊಟ್ಟಿತು.

"ಆಯ್ಕೆ ಆದ ನಂತರ ನನ್ನ ವಿರುದ್ಧ ಪ್ರಚಾರ ಮಾಡುವ ಇವರನ್ನು ನೋಡಿಕೊಳ್ಳುತ್ತೇನೆ" ಎಂದು ಎಲ್[...] ಭಾಷಣ ಮಾಡಿದ್ದರು, ಅದಕ್ಕಿಂತ ಮೊದಲು ನಾ[...] ಒಂದು ಕೈ ನೋಡಿಕೊಂಡೆವು ಎಂದು ಅನೇಕ ಕಾರ್ಮಿಕ[...] ಯುವಜನರು ಗೆಲುವಿನ ನಗು ಬೀರುತ್ತಿದ್ದಾರೆ.

ಕಾರವಾರ: ಇನ್ನೊಂದು ಕ್ಷೇತ್ರ ಕಾರವಾರದ[...] ಸ್ಪರ್ಧೆಮಾಡಿದ ಇಬ್ಬರು ಪ್ರಮುಖರೂ ಪಕ್ಷಾಂತರಿಗ[...] ಆಗಿದ್ದರು. ಕೆ.ಸಿ.ಪಿ.ಯಿಂದ ಆಯ್ಕೆಯಾ[...] ಜನತಾದಳದೊಂದಿಗೆ ಸಂಬಂಧಬೆಳೆಸಿ ನಿಗಮದ ಅಧ್ಯಕ್ಷ[...] ಆಗಿ ಕೊನೆಗೆ ಕಾಂಗ್ರೆಸ್ ಸೇರಿ ಸ್ಪರ್ಧಿಸಿದ್ದ ವಸಂ[...] ಆಸ್ನೋಟಿಕರ್ ಒಬ್ಬರಾದರೆ, ತಾನು ಬೆಳೆ[...] ಶಿಷ್ಯನೆಂದ(?)ಲೇ ಹಿಂದಿನ ಚುನಾವಣೆಯಲ್ಲಿ ಸೋ[...]

ಪುಟ 1[...]

ಕುಲಗೆಟ್ಟ ಮತ ಮತ್ತು ಮತದಾರನ ಉತ್ತರ

ಯಾಕೆ ತಾವು ಸೋತೆವೆಂದು ಬಿಜೆಪಿ ಈಗ ಆತ್ಮವಿಮರ್ಶೆ ಮಾಡಿಕೊಳ್ಳತೊಡಗಿದೆ. ಮಾಜಿ ಎಂ.ಪಿ. ಅನಂತಕುಮಾರ ಹೆಗಡೆ ಹೋದಲ್ಲೆಲ್ಲಾ ಇದು ನಮ್ಮ ಸೋಲಲ್ಲ, ಇದು ಕೇವಲ ತಾಂತ್ರಿಕ ಸೋಲು ಎಂದು ವಿಶ್ಲೇಷಿಸುತ್ತಿದ್ದಾರೆ. ಇನ್ನೂ ಮುಂದೆ ಹೋಗಿ "ಕೆನರಾಕ್ಷೇತ್ರದಲ್ಲಿ ಒಟ್ಟು 28935 ಮತಗಳು ಕುಲಗೆಟ್ಟಿವೆ (ತಿರಸ್ಕೃತ ಆಗಿವೆ) ಇವೆಲ್ಲವೂ ನಮಗೆ ಬೀಳುವ ಮತಗಳಾಗಿತ್ತು ಹಾಗಾಗಿ ನಾವು ಸೋತರೂ ಗೆದ್ದಿದ್ದೇವೆ" ಎಂದು ಸೋತವರೂ ಸೇರಿ ಬಿಜೆಪಿಯ ಜನ ಹೇಳುತ್ತಿದ್ದಾರೆ. ಈ ವಾದ ಕೇಳುತ್ತಿದ್ದ ಒಬ್ಬ ಮತದಾರ ಉತ್ತರಿಸಿದ್ದು ಹೀಗೆ. "28935 ಮತಗಳು ಕುಲಗೆಟ್ಟ ಮತಗಳಲ್ಲ. ನಿಜವಾಗಿ ಅವು ಮೌಲಿಕ ಮತಗಳು. ಕಮಲಕ್ಕೆ ಬಿದ್ದಿರುವ ಮತಗಳು ಮಾತ್ರ ಕುಲಗೆಟ್ಟಮತಗಳು"

ಬಿಜೆಪಿಯ ಮಿತ್ರರು ಈಗ ಏನು ಹೇಳುತ್ತಾರೆ?

- ಸುರ್ಜಿತ್

ಸಂಘ ಪರಿವಾರದ ಮುಖ್ಯಸ್ಥರು, ಮುಖವಾಣಿಗಳು ಏನೇ ಹೇಳಿಕೊಂಡರೂ ಬಿಜೆಪಿಯ ಆಕಾಂಕ್ಷೆಗಳಿಗೆ ಕಡಿವಾಣ ಬಿದ್ದಿದೆ, ಅದರ ಬಲ ಕಮ್ಮಿಯಾಗಿದೆ, ಅದರ ಮಿತ್ರಪಕ್ಷಗಳ ಬಲ ಹೆಚ್ಚಿದೆ ಎಂಬುದು ಸ್ಪಷ್ಟ. ಎನ್.ಡಿ.ಎ. ಸರಕಾರ ಕಠಿಣ ಕ್ರಮಗಳಿಗೆ ಸಿದ್ಧವಾಗಿರುವಂತೆ ಹೇಳುತ್ತಾ ಜನಸಾಮಾನ್ಯರ ಮೇಲೆ ಧಾಳಿಗಳಿಗೆ ಸಿದ್ಧವಾಗುತ್ತಿರುವಾಗ ಈ ಮಿತ್ರಪಕ್ಷಗಳು ತಮ್ಮ ಹೆಚ್ಚಿದ ಬಲವನ್ನು ಬಳಸುತ್ತವೆಯೇ ಎಂಬುದನ್ನು ಜನ ಗಮನಿಸುತ್ತಿದ್ದಾರೆ. ತಮ್ಮ ಜನ ಬೆಂಬಲ ಉಳಿಸಿಕೊಳ್ಳಲಿಕ್ಕಾದರೂ ಅವರು ಹಾಗೆ ಮಾಡಬೇಕಾಗುತ್ತದೆ ಎನ್ನುತ್ತಾರೆ ಸಿಪಿಐ(ಎಂ) ನ ನ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್.



ಅಟಲ್ ಬಿಹಾರಿ ವಾಜಪೇಯಿಯವರ ಗಜಗಾತ್ರದ ಮಂತ್ರಿಮಂಡಲ ಅಧಿಕಾರ ವಹಿಸಿಕೊಂಡಿದೆ. 13ನೇ ಲೋಕಸಭೆಯ ಮೊದಲ ಅಧಿವೇಶನ ಆರಂಭವಾಗಿದೆ. 24 ಪಕ್ಷಗಳಿರುವ ಬಿಜೆಪಿ ನೇತೃತ್ವದ ಎನ್.ಡಿ.ಎ. ಗೆ ನಿಜವಾದ ಪರೀಕ್ಷೆಯ ದಿನಗಳೂ ಸಮೀಪಿಸುತ್ತಿದೆ. ಸ್ಥಿರತೆ ಕೊಡುತ್ತೇವೆಂಬ ಎನ್.ಡಿ.ಎ. ಮಾತುಗಳನ್ನು ಯಾರೂ ನಂಬುತ್ತಿಲ್ಲ. ಏಕೆಂದರೆ ಸ್ಥಿರತೆ ಬರುವುದು ಸಂಖ್ಯೆಯಿಂದ ಅಲ್ಲ, ಧೋರಣೆಗಳಿಂದ ಮತ್ತು ಕಾರ್ಯಕ್ರಮಗಳಿಂದ. ಇಲ್ಲೇ ಇರುವುದು ಸಮಸ್ಯೆ. ಏಕೆಂದರೆ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳಲ್ಲಿ ಹಲವು ಧೋರಣೆಗಳಲ್ಲಿ ಅತ್ಯಂತ ವಿಭಿನ್ನವಾದ ಅಭಿಪ್ರಾಯಗಳಿವೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಎನ್.ಡಿ.ಎ. ಸರಕಾರದ ರಚನೆ ಸಾಧ್ಯವಾಗಿರುವುದೇ ಬಿಜೆಪಿ ತನ್ನ ಆಕಾಂಕ್ಷೆಗಳನ್ನು ಕಡಿತ ಮಾಡಿಕೊಂಡದ್ದರಿಂದ. 1996 ರಲ್ಲಿ ಏಕಾಂಗಿಯಾಗಿ ಅಧಿಕಾರಕ್ಕೆ ಬರಲು ಅದು ಪ್ರಯತ್ನಿಸಿತು, ಸೋತಿತು. 1998 ರಲ್ಲಿ ತನ್ನದೇ ಪ್ರಣಾಳಿಕೆಯ ಮೇಲೆ ಚುನಾವಣೆಗೆ ಇಳಿಯಿತು. ಆದರೆ ಭಾರತದಂತಹ ಅಪಾರ ವೈವಿಧ್ಯದ ದೇಶದಲ್ಲಿ ತಾನೇ ಏಕಾಂಗಿಯಾಗಿ ಅಧಿಕಾರಕ್ಕೆ ಬರುವ ಸಾಧ್ಯತೆಯಿಲ್ಲ ಎಂಬುದನ್ನರಿತು ವಿವಿಧ ಭಾಗಗಳಲ್ಲಿ ವಿವಿಧ ಪ್ರಾದೇಶಿಕ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡಿತು. ನಂತರ ಒಂದು ರಾಷ್ಟ್ರೀಯ ಆಡಳಿತ ಕಾರ್ಯಸೂಚಿ(ಅಜೆಂಡಾ) ಯನ್ನು ತಯಾರಿಸಬೇಕಾಗಿ ಬಂತು. 13 ಪಕ್ಷಗಳ ಸಹ ಪಡೆಯಲು ತನ್ನ ಕೆಲವು ಅಜೆಂಡಾಗಳನ್ನು ಮುಂದೂಡಬೇಕಾಗಿ ಬಂತು. ಈಗ 1999 ರಲ್ಲಂತೂ ತನ್ನೆಲ್ಲಾ ಮಿತ್ರಪಕ್ಷಗಳೊಂದಿಗೆ ಅಲ್ಲದಿದ್ದರೂ ಹಲವು ಪಕ್ಷಗಳೊಡಗೂಡಿ ಜಂಟಿ ಪ್ರಣಾಳಿಕೆ ಹೊರಡಿಸಬೇಕಾಗಿ ಬಂತು.

ಇವೆಲ್ಲಾ ಹೇಳುವ ಕಥೆಯೇನು?

ಸಂಘ ಪರಿವಾರದ ಹಳೆಯ ರಾಗ

ಬಿಜೆಪಿ ಮುಖಂಡರೇನೋ ಸದ್ಯಕ್ಕಾದರೂ ಸಮ್ಮಿಶ್ರ ಸರಕಾರಗಳ ಯುಗ ಆರಂಭವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಅವರ ಬೆನ್ನೆಲುಬಾದ ಆರ್.ಎಸ್.ಎಸ್. ಮತ್ತು ಅದರ ಪರಿವಾರದವರು ಮಾತ್ರ ಈಗಲೂ ಬೇರೆಯೇ ರಾಗ ಹಾಡುತ್ತಿದ್ದಾರೆ. ಆರ್.ಎಸ್.ಎಸ್. ಮುಖವಾಣಿ 'ಆರ್ಗನೈಸರ್' ಎನ್.ಡಿ.ಎ. ವಿಜಯ ಅಭೂತಪೂರ್ವ 'ಹಿಂದೂ ಉತ್ಕರ್ಷ'ದ ಫಲ ಎಂದಿದೆ. ಬಿಜೆಪಿಯ ಮಿತ್ರ ಪಕ್ಷಗಳು ಇದನ್ನು ಗಮನಿಸಿ ಆ ಪಕ್ಷಗಳೊಂದಿಗೆ ಕೈಮಿಲಾಯಿಸಿರದಿದ್ದರೆ ಅವರೆಲ್ಲಾ ಗೆಲ್ಲುತ್ತಲೇ ಇರಲಿಲ್ಲವಂತೆ. ಆರ್.ಎಸ್.ಎಸ್. ಸಹಕಾರ್ಯವಾಹ ಹೊ.ವೆ.ಶೇಷಾದ್ರಿಯವರು ಕಳೆದ ಹಲವು ದಶಕಗಳಲ್ಲಿ ಇದ್ದ ಹಿಂದು-ವಿರೋಧಿ ಶಕ್ತಿಗಳ ಮೇಲುಗೈ ಈಗ ಉಳಿದಿಲ್ಲ, ಜನಗಳ ಮನೋಭಾವನೆಯಲ್ಲಿ ಬದಲಾವಣೆ ಬರುತ್ತಿದೆ, ಜನರಲ್ಲಿ 'ರಾಷ್ಟ್ರೀಯ ಪುನರುತ್ಥಾನ' ದ ಪ್ರಜ್ಞೆ ಹೆಚ್ಚುತ್ತಿದೆ ಎಂದಿದ್ದಾರೆ. ನಾಗಪುರದಲ್ಲಿ ವಿಜಯದಶಮಿಯ ದಿನದ ತನ್ನ ಎಂದಿನ ಭಾಷಣದಲ್ಲೂ ಆರ್.ಎಸ್.ಎಸ್. ಮುಖ್ಯಸ್ಥ ಪ್ರೊ. ರಾಜೇಂದ್ರ ಸಿಂಗ್ ಅದೇ ರಾಗ ಹಾಡಿದ್ದಾರೆ.

ಒಟ್ಟಿನಲ್ಲಿ ತಮ್ಮಿಂದಾಗಿಯೇ ಮಿತ್ರ ಪಕ್ಷಗಳು ಯಶಸ್ವಿಯಾಗಿದ್ದಾರೆ ಎನ್ನುತ್ತಿದ್ದಾರೆ ಸಂಘ ಪರಿವಾರದವರು. ಆದರೆ ವಾಸ್ತವತೆ ತದ್ವಿರುದ್ಧವಾಗಿದೆ. ಈ ಚುನಾವಣೆಗಳಲ್ಲಿ ಪ್ರಧಾನ ಲಾಭ ಪಡೆದವರು ಬಿಜೆಪಿಯ ಮಿತ್ರ ಪಕ್ಷದವರು. ಬಿಜೆಪಿಯ ಮತಗಳಿಕೆ ಇಳಿದಿದೆ, ಹೇಗೋ ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿದ್ದಾರೆ ಅಷ್ಟೆ.

ಎರಡು ಪ್ರಧಾನ ಪ್ರಶ್ನೆಗಳು

ಅದೇನೇ ಇರಲಿ, ಬಿಜೆಪಿಯ ಮಿತ್ರರ ಮುಂದಂತೂ ಈಗ ಎರಡು ಪ್ರಧಾನ ಪ್ರಶ್ನೆಗಳಿವೆ. ಒಂದು, ಕೋಮುವಾದ ಮತ್ತು ಒಕ್ಕೂಟ ತತ್ವದ ಉಲ್ಲಂಘನೆ ಹಾಗೂ ರಾಷ್ಟ್ರೀಯ ಐಕ್ಯತೆಗೆ ಅದು ತರುವ ಕುತ್ತು. ಎರಡು, ಆರ್ಥಿಕ ಪ್ರಶ್ನೆಗಳು. ಜಾತ್ಯಾತೀತತೆ ಮತ್ತು ಒಕ್ಕೂಟ ತತ್ವ ಯಾವುದೇ ರಾಜಕೀಯ ವ್ಯವಸ್ಥೆಯ, ಅದರಲ್ಲೂ ಭಾರತದಂತಹ ಬಹು-ಧರ್ಮೀಯ, ಬಹು-ಭಾಷಿಕ, ಬಹು ಜನಾಂಗೀಯ ದೇಶದ ರಾಜಕೀಯ ವ್ಯವಸ್ಥೆಯ ಅನಿವಾರ್ಯ ಅಂಶಗಳು ಎಂಬ ಬಿಜೆಪಿಯ ಮಿತ್ರ ಪಕ್ಷಗಳ ಯೋಚನೆ ಸರಿಯಾಗಿಯೇ ಇದೆ.

ಆದರೆ ವಾಸ್ತವದಲ್ಲಿ?

ಬಿಜೆಪಿ ಮುಖಂಡರು ತಮ್ಮ ಅಜೆಂಡಾಗಳನ್ನು ಕೈಬಿಟ್ಟಿದ್ದೇವೆ ಎನ್ನುವುದನ್ನು ಯಾರೂ ನಂಬುತ್ತಿಲ್ಲ, ಅಲ್ಪಸಂಖ್ಯಾತರಂತೂ ಖಂಡಿತಾ ನಂಬುತ್ತಿಲ್ಲ. ಪ್ರಧಾನ ಮಂತ್ರಿಗಳ ಕ್ಷೇತ್ರದಲ್ಲೇ ಪ್ರೊ. ರಾಜೇಂದ್ರ ಸಿಂಗ್ ಬಾಬ್ರಿ ಮಸೀದಿಯಿದ್ದಲ್ಲಿ ರಾಮದೇವಸ್ಥಾನ ಕಟ್ಟುವ ಗುರಿ ಬಿಟ್ಟಿಲ್ಲ, ಮಥುರಾ, ವಾರಣಾಸಿಗಳಲ್ಲಿ ಮುಸ್ಲಿಮರು ಮಸೀದಿಗಳನ್ನು ಸ್ವಇಚ್ಛೆಯಿಂದಲೇ ಬಿಟ್ಟುಕೊಡಬೇಕು ಎಂದು ಹೇಳಿದಾಗ ವಾಜಪೇಯಿಯವರಾಗಲೀ, ಬೇರೆ ಯಾವ ಬಿಜೆಪಿ ಮುಖಂಡರಾಗಲೀ ತುಟಿಪಿಟಿಕ್ಕೆನ್ನಲಿಲ್ಲ, ಅದು ತಮ್ಮ ಪಕ್ಷದ ಅಭಿಪ್ರಾಯವಲ್ಲ ಎಂದು ಹೇಳುವ ಧೈರ್ಯ ತೋರಲಿಲ್ಲ. ಏಕೆ?

ಈಗಂತೂ ವಿಹೆಚ್‌ಪಿ ಮತ್ತು ಭಜರಂಗದಳ ಕ್ರೈಸ್ತರ ವಿರುದ್ಧ ತೀವ್ರ ಅಪಪ್ರಚಾರ ಆರಂಭಿಸಿಯೇಬಿಟ್ಟಿವೆ. ಅವರ ತಕ್ಷಣದ ಗುರಿ ಕ್ಯಾಥೊಲಿಕ್ ಕ್ರೈಸ್ತರ ಧಾರ್ಮಿಕ ಮುಖ್ಯಸ್ಥ ಪೋಪ್ ಜಾನ್ ಪಾಲ್ II ರವರ ಭಾರತ ಭೇಟಿ. 'ಆರ್ಗನೈಸರ್' ನ ಇತ್ತೀಚಿನ ಸಂಚಿಕೆ ಮೂರು ಲೇಖನಗಳಲ್ಲಿ ಈ ಬಗ್ಗೆ ವಿಷಕಾರಿದೆ. ವಿ.ಹೆಚ್.ಪಿ. ಮತ್ತು ಭಜರಂಗದಳ ಗೋವಾದಿಂದ ಒಂದು ಯಾತ್ರೆಯನ್ನೇ ಆರಂಭಿಸಿದೆ. ಕ್ರೈಸ್ತ-ವಿರೋಧಿ ಭಾವನೆಗಳನ್ನು ಉದ್ರೇಕಿಸಲಾರಂಭಿಸಿಯೇ ಬಿಟ್ಟಿದೆ. ಪೋಪ್‌ರವರ ಭೇಟಿಯ ಹಿಂದಿನ ದಿನ ಅಂದರೆ ನವೆಂಬರ್ 4 ರಂದು ಈ ಯಾತ್ರೆ ದಿಲ್ಲಿ ತಲುಪುತ್ತದಂತೆ. ಆರಂಭದಲ್ಲಿ ಪೋಪ್‌ರ ಈ ಭೇಟಿಯನ್ನೇ ರದ್ದು ಮಾಡಿಸಬೇಕೆಂದು ಕೋಮುವಾದಿ ಸಂಘಟನೆಗಳು ಬೊಬ್ಬೆ ಹಾಕಿದ್ದುವು. ಅದಕ್ಕೆ ಅನುಕೂಲಕರ ಪ್ರತಿಕ್ರಿಯೆ ಬಾರದ್ದನ್ನು ಕಂಡು ತಮ್ಮ ರಾಗ ಬದಲಿಸಿವೆ. ಈಗ ಏನೇನೋ ವಿಚಿತ್ರ ಬೇಡಿಕೆಗಳನ್ನು ಮುಂದಿಟ್ಟಿವೆ - ಮೂರು, ನಾಲ್ಕು ಶತಮಾನಗಳ ಹಿಂದೆ ಗೋವಾದಲ್ಲಿ ಪೋರ್ಚುಗೀಸರು ನಡೆಸಿದ ಅತ್ಯಾಚಾರಗಳಿಗೆ ಪೋಪ್ ಕ್ಷಮೆ ಕೋರಬೇಕಂತೆ, "ಬಲವಂತ'ದ ಮತಾಂತರದ ವಿರುದ್ಧ ಹೇಳಿಕೆ ನೀಡಬೇಕಂತೆ, ಈಶಾನ್ಯ ಭಾರತದಲ್ಲಿ ಉಗ್ರಗಾಮಿ ಗುಂಪುಗಳಿಗೆ ಪೋಪ್‌ರ ಕಡೆಯಿಂದ ಹೋಗುವ ನೆರವು ನಿಲ್ಲಿಸಬೇಕು ಇತ್ಯಾದಿ ಇತ್ಯಾದಿ.

ಜನ ಗಮನಿಸುತ್ತಿದ್ದಾರೆ

18 ಕೋಟಿ ಅಲ್ಪಸಂಖ್ಯಾತರಿರುವ ಒಂದು ದೇಶದಲ್ಲಿ ಅವರಲ್ಲಿ ಭಯ ಹುಟ್ಟಿಸಿ ಸ್ಥಿರತೆ ತರಲು ಸಾಧ್ಯವೇ? ಶಿವಸೇನೆ ಬಿಟ್ಟು ಬಿಜೆಪಿಯ ಇತರ ಮಿತ್ರ ಪಕ್ಷಗಳೆಲ್ಲಾ ಧರ್ಮನಿರಪೇಕ್ಷತೆಯ ಮಾತನಾಡುತ್ತಿದ್ದಾರೆ. ಖಂಡಿತಾ ಅವರು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ನಿಜ, ಅವರಲ್ಲಿ ಕೆಲವರು ಪೋಪರ ಭೇಟಿಯ ವಿರುದ್ಧ ವಿ.ಹೆಚ್.ಪಿ. ಅಪಪ್ರಚಾರಗಳನ್ನು ಬೈಯುವ ಪ್ರಯತ್ನ ನಡೆಸಿದ್ದಾರೆ - ಆದರೆ ಬಹಳ ಮೆಲುದನಿಯಲ್ಲಿ, ಬಹಳ ಮಂದಿಯ ಗಮನಕ್ಕೂ ಬಾರದ ರೀತಿಯಲ್ಲಿ.

ಕಳೆದ ಬಾರಿ 356ನೇ ಕಲಮಿನ ಪ್ರಯೋಗದಂತಹ ಒಕ್ಕೂಟ ತತ್ವ-ವಿರೋಧಿ ಕ್ರಮಕೈಗೊಂಡಾಗಲೂ ಬಿಜೆಪಿಯ ಈ ಮಿತ್ರರು ತುಟಿಬಿಚ್ಚಲಿಲ್ಲ. ಆದರೆ ಮುಂಬರುವ ದಿನಗಳಲ್ಲಿ ಈ ಮಿತ್ರಪಕ್ಷಗಳ ಪಾತ್ರ ಮಹತ್ವಪೂರ್ಣವಾಗುತ್ತದೆ. ಏಕೆಂದರೆ ಸರಕಾರದ ಯಾವುದೇ ಒಕ್ಕೂಟ ತತ್ವ-ವಿರೋಧಿ, ಜಾತ್ಯಾತೀತ-ವಿರೋಧಿ ಕ್ರಮವನ್ನು ತಡೆಯುವ ಸಂಖ್ಯಾಬಲ ಈಗ ಅವರ ಬಳಿಯಿದೆ. ಆದ್ದರಿಂದಲೇ ಜನ ಅವರು ಏನು ಮಾಡುತ್ತಾರೆ ಎಂಬುದನ್ನು ಗಮನವಿಟ್ಟು ನೋಡುತ್ತಿರುತ್ತಾರೆ.

ಆರ್ಥಿಕ ರಂಗದಲ್ಲಿ ಮಾತ್ರ
ವಿದೇಶಿ ತತ್ವ ಬೇಕು!

ಧರ್ಮನಿರಪೇಕ್ಷತೆಯಂತಹ 'ವಿದೇಶಿ ತತ್ವ'ಗಳನ್ನು ಅನುಸರಿಸುವ 'ಗುಲಾಮ ಮನೋಭಾವ'ದ ವಿರುದ್ಧ ಹಾರಾಡಿದ ಪ್ರೊ. ರಾಜೇಂದ್ರ ಸಿಂಗರ ವಿಜಯದಶಮಿ ಭಾಷಣದ ದಿನವೇ ಆರ್.ಎಸ್.ಎಸ್. ನ ಸರಕಾರ್ಯವಾಹ ಹೊ.ವೆ. ಶೇಷಾದ್ರಿಯವರು 'ಹೊಸ ಆರ್ಥಿಕ ವ್ಯವಸ್ಥೆ'ಗೆ ತಮ್ಮ ಬೆಂಬಲ ಸಾರಿದರು! ಇದರಲ್ಲೇನೂ ಆಶ್ಚರ್ಯವಿಲ್ಲ. ಆರ್ಥಿಕ, ವಿದೇಶಾಂಗ ಮತ್ತು ರಕ್ಷಣಾ ನೀತಿಗಳಲ್ಲಿ ಆರ್.ಎಸ್.ಎಸ್.-ಬಿಜೆಪಿಯ ಬಲಪಂಥೀಯ ಒಲವು ಎಲ್ಲರಿಗೂ ತಿಳಿದದ್ದೆ.

ಯಶವಂತ ಸಿನ್ಹಾರವರು ಚುನಾವಣಾ ಪ್ರಕ್ರಿಯೆಯ ನಡುವೆಯೇ ವಿದೇಶಿ ನೆಲದಲ್ಲಿ ಐಎಂಎಫ್-ವಿಶ್ವಬ್ಯಾಂಕ್‌ಗೆ ಭರವಸೆ ನೀಡಿದ 'ಸುಧಾರಣೆ' ಗಳು 13ನೇ ಲೋಕಸಭೆಯ ಮುಂದಿರುವ ಎರಡನೇ ಪ್ರಧಾನ ಪ್ರಶ್ನೆ. ಚುನಾವಣಾ ಫಲಿತಾಂಶ ಬರುವ ಮೊದಲೇ ಡೀಸೆಲ್ ಬೆಲೆಯೇರಿಕೆಯೊಂದಿಗೆ ಇದು ಆರಂಭವಾಗಿಯೇ ಬಿಟ್ಟಿದೆ. ಜನಜೀವನದ ಮೇಲೆ ಇದರ ದುಷ್ಪರಿಣಾಮಗಳೂ ಆಗಲೇ ಕಾಣಲಾರಂಭಿಸಿವೆ. ದಿಲ್ಲಿ, ಒರಿಸ್ಸಾ ರಾಜ್ಯಗಳಲ್ಲಿ ಬಸ್ ದರ ಏರಿಕೆಯಾಗಿದೆ, ದೈನಂದಿನ ಅಗತ್ಯ ವಸ್ತುಗಳ ಬೆಲೆಗಳು ಏರುತ್ತಿವೆ. ಬಿಜೆಪಿಯ ಮಿತ್ರಪಕ್ಷಗಳು ತೆಲುಗುದೇಶಂ, ಚೌತಾಲರ ಲೋಕದಳ, ಅಕಾಲಿದಳ, ಎಂ.ಡಿ.ಎಂಕೆ. ಕೂಡಾ ಡೀಸೆಲ್ ಬೆಲೆಯೇರಿಕೆಯನ್ನು ಪ್ರತಿಭಟಿಸಿವೆ. ಆದರೆ ಇಲ್ಲೂ ಅವರ ಪ್ರತಿಭಟನೆ ಶಕ್ತಿಹೀನವಾಗಿದೆ. ವಾಜಪೇಯಿ ಸರಕಾರ ಇಷ್ಟಕ್ಕೇ ನಿಲ್ಲುವುದಿಲ್ಲ ಜನಗಳ ಮೇಲೆ ಮುಂದೆ ಬರಲಿರುವ ಧಾಳಿಗಳೇನು ಎಂಬುದರ ಸಂಕೇತಗಳನ್ನು ಈಗಾಗಲೇ ನೀಡಲಾಗಿದೆ - ಇವನ್ನುಗಮನಿಸಿ

1. *ಪ್ರತಿಜ್ಞೆ ಸ್ವೀಕಾರದ ಮೊದಲೇ ವಾಜಪೇಯಿಯವರು ಕೆಲವು ಕಠಿಣ ಕ್ರಮಗಳಿಗೆ ಸಿದ್ಧವಾಗುವಂತೆ ಜನಗಳಿಗೆ ಹೇಳಿದ್ದಾರೆ.*
2. *ಹಣಕಾಸು ಮಂತ್ರಿಗಳು ಸರಕಾರ ರಸಗೊಬ್ಬರ ಸಬ್ಸಿಡಿಯನ್ನು ಕ್ರಮೇಣ ತೆಗೆದುಹಾಕುವ ಬಗ್ಗೆ ಯೋಚಿಸುತ್ತಿದೆ ಎಂದಿದ್ದಾರೆ.*
3. *ಟಿ.ವಿ. ಸಂದರ್ಶನವೊಂದರಲ್ಲಿ ಹಣಕಾಸು ಮಂತ್ರಿಗಳು ಜನ ತಾವು ಪಡೆಯುವ ಸಾಮಾಜಿಕ ಸೇವೆಗಳಿಗೆ ತಕ್ಕ ಬೆಲೆ ತೆರಬೇಕಾಗುತ್ತದೆ ಎಂದು ಬೆದರಿಸಿದ್ದಾರೆ. ಸಾಮಾಜಿಕ ಸೇವೆಗಳೆಂದರೆ ಶಿಕ್ಷಣ, ಆರೋಗ್ಯ, ರೇಶನ್, ವಿದ್ಯುತ್ ಇತ್ಯಾದಿ. ಇದರರ್ಥ ಇವಕ್ಕೆಲ್ಲಾ ಹೆಚ್ಚು ಬೆಲೆ ತೆರಲು ಸಿದ್ಧವಾಗಿರಿ ಎಂದು. ರೇಶನ್‌ನಿಂದ ಸಕ್ಕರೆಯನ್ನು ಕೈಬಿಡುವ ಬಗ್ಗೆಯೂ ಸರ್ಕಾರ ಯೋಚಿಸುತ್ತಿದೆಯಂತೆ.*
4. *ಈ ಸಾಮಾಜಿಕ ಸೇವೆಗಳ ಪೂರೈಕೆಯಲ್ಲಿ ಖಾಸಗಿಯವರಿಗೆ ಅವಕಾಶ ಕೊಡಬೇಕು ಎಂಬುದು ಪ್ರಧಾನ ಮಂತ್ರಿಗಳ ಬಯಕೆಯಂತೆ. ಅಂದರೆ ಜನಗಳಿಗೆ ಅತ್ಯಾವಶ್ಯಕವಾದ ಈ ಸೇವೆಗಳನ್ನು ಒದಗಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸರಕಾರ ಆತುರದಿಂದಿದೆ. ಶ್ರೀಮಂತರಿಗೆ ಈಗಾಗಲೇ ಖಾಸಗೀ ವಿಶ್ವವಿದ್ಯಾಲಯಗಳು, ಖಾಸಗೀ ಆಸ್ಪತ್ರೆಗಳಿವೆ. ಪ್ರಧಾನಮಂತ್ರಿಗಳ ಈ ಆಶಯದ ಅರ್ಥ ಬಡಜನರನ್ನು ಅವರಿಗೆ ಈಗ ದೊರಕುತ್ತಿರುವ ಅಲ್ಪಸ್ವಲ್ಪ ಶಿಕ್ಷಣ, ಆರೋಗ್ಯ ಸೌಲಭ್ಯಗಳಿಂದಲೂ ವಂಚಿಸುವುದು.*
5. *ಸಾರ್ವಜನಿಕ ವಲಯದ ಶೇರುಗಳ ಮಾರಾಟ ತನ್ನ ವೈಯಕ್ತಿಕ ಉಸ್ತುವಾರಿಯಲ್ಲಿ ನಡೆಯಬೇಕು ಎಂಬುದು ಪ್ರಧಾನಿಗಳ ಇನ್ನೊಂದು ಆಶಯವಂತೆ. ಅಂದರೆ ಟೆಲಿಕಾಂ ವಲಯದಲ್ಲಿ ಅವರ ನೇರ ಉಸ್ತುವಾರಿಯಲ್ಲಿ ನಡೆದಂತೆ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ದೇಶಿ-ವಿದೇಶಿ ಬಂಡವಾಳಿಗರಿಗೆ ತಟ್ಟೆಯಲ್ಲಿಟ್ಟು ಅರ್ಪಿಸಲಿಕ್ಕೆ! ವಿಮಾ ವಲಯ ಮತ್ತು ಹಲವು ರಾಷ್ಟ್ರೀಕೃತ ಬ್ಯಾಂಕುಗಳ ಖಾಸಗೀಕರಣದ ಪ್ರಯತ್ನಗಳೂ ನಡೆದಿವೆ.*
6. *ರೈಲ್ವೆ ಮತ್ತು ಸಾಗಾಣಿಕೆ ದರಗಳನ್ನು ಹೆಚ್ಚಿಸಲಾಗುವುದು ಎಂಬ ಮಾತೂ ಕೇಳಬರುತ್ತಿದೆ.*

ಜನಗಳ ಬಗ್ಗೆ ಕಾಳಜಿಯೇನಾದರೂ ಇದ್ದರೆ.....

ನಿಜ, ಇವೆಲ್ಲಾ ಯಶವಂತಸಿನ್ಹಾರವರು ಚುನಾವಣಾ ಪ್ರಕ್ರಿಯೆಯ ನಡುವೆಯೇ ಐಎಂಎಫ್-ವಿಶ್ವಬ್ಯಾಂಕ್‌ಗೆ ನೀಡಿದ ಆಶ್ವಾಸನೆಗಳ ಭಾಗಗಳು. ಆದರೆ ಇವೆಲ್ಲದರ ಅರ್ಥ ಮಾತ್ರ ಒಂದೇ. ಅದೆಂದರೆ ಜೀವನಾವಶ್ಯಕ ವಸ್ತುಗಳೆಲ್ಲದರ ಬೆಲೆಯೇರಿಕೆ, ಭಾರತೀಯ ಜನತೆಯ ಮೇಲೆ ಅಪಾರ ಹೊರೆ, ಅವರ ಕೊಳ್ಳುವ ಶಕ್ತಿಯಲ್ಲಿ ಭಾರಿ ಕಡಿತ, ಇದರಿಂದ ಸಂಕಟ, ಬಡತನ, ಹಸಿವಿನಿಂದ ಸಾವಿನಲ್ಲೂ ಹೆಚ್ಚಳ. ಎನ್.ಡಿ.ಎ. ಸರಕಾರ ಜನಗಳಿಗೆ ಸಿದ್ಧಪಡಿಸಿಟ್ಟುಕೊಂಡಿರುವ ಕ್ರಮಗಳಿವು.

ಇಲ್ಲಿಯೇ ಬಿಜೆಪಿಯ ಮಿತ್ರ ಪಕ್ಷಗಳಿಗೆ ಒಂದು ದೊಡ್ಡ ಪರೀಕ್ಷೆ ಕಾದಿದೆ. ಅವರು ಹೇಳಿಕೊಳ್ಳುವಂತೆ ಅವರಿಗೆ ಜನಗಳ ಆಕಾಂಕ್ಷೆಗಳ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ ಎನ್.ಡಿ.ಎ. ಸರಕಾರ ತರಲಿರುವ ಈ ಜನ-ವಿರೋಧಿ ಕ್ರಮಗಳನ್ನು ಬೆಂಬಲಿಸಲು ಸಾಧ್ಯವೇ? ತಮ್ಮ ಚುನಾವಣಾ ಭವಿಷ್ಯವನ್ನು ಗಮನಿಸಿಯಾದರೂ ಅವರು ಇಂತಹ ಕ್ರಮಗಳ ವಿರುದ್ಧ ತಮ್ಮ ದನಿ ಕೇಳಿಸುವಂತೆ ಮಾಡಬೇಕಾಗುತ್ತದೆ. ಇಲ್ಲವಾದರೆ ಅವರ ಜನಬೆಂಬಲ ಹ್ರಾಸಗೊಳ್ಳುತ್ತದೆ. ಡೀಸೆಲ್ ಬೆಲೆಯೇರಿಕೆ ವಿರುದ್ಧ ಬಿಜೆಪಿಯ ಮಿತ್ರಪಕ್ಷಗಳ ಪ್ರತಿಭಟನೆಯ ಮೆಲುದನಿಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

ಕಾಂಗ್ರೆಸ್ ಕೂಡಾ ಉದಾರೀಕರಣ, ಜಾಗತೀಕರಣದ ಹೆಸರಲ್ಲಿ ಎನ್.ಡಿ.ಎ. ಸರಕಾರದ ಆರ್ಥಿಕ ನೀತಿಗಳನ್ನು ಬೆಂಬಲಿಸ ಹೊರಟರೆ ಅದರ ಜನಬೆಂಬಲವೂ ಮತ್ತಷ್ಟು ಹ್ರಾಸಗೊಳ್ಳುತ್ತದೆ ಎಂಬುದನ್ನು ಅರಿಯಬೇಕು. ಏಕೆಂದರೆ 1991ರಿಂದ ಅದು ಹೊಸ ಆರ್ಥಿಕ ಧೋರಣೆ ಆರಂಭಿಸಿದಾಗಿನಿಂದ ಅದರ ಜನಬೆಂಬಲ ಬಹಳಷ್ಟು ಪ್ರಮಾಣದಲ್ಲಿ ಇಳಿಮುಖವಾಗುತ್ತಾ ಬಂದಿದೆ.

ಜನ ಈಗಾಗಲೇ ಮೆಲ್ಲಮೆಲ್ಲನೆಯಾದರೂ ವಾಜಪೇಯಿ ಸರಕಾರದ ಪ್ರತಿಗಾಮಿ ಕ್ರಮಗಳ ವಿರುದ್ಧ ದನಿ ಎತ್ತಲಾರಂಭಿಸಿದ್ದಾರೆ. ಬ್ಯಾಂಕ್, ವಿಮಾ ನೌಕರರು ಸರಕಾರದ ದುಷ್ಟಯೋಜನೆಗಳ ವಿರುದ್ಧ ಐಕ್ಯ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ. ತಮಿಳುನಾಡಿನಲ್ಲಿ ಡೀಸೆಲ್ ದರ ಏರಿಕೆಯ ವಿರುದ್ಧ ಒಂದು ದಿನದ ಮುಷ್ಕರ ನಡೆದಿದೆ. ಲಾರಿ ಮತ್ತು ಬಸ್ ನಡೆಸುವವರು ಮುಷ್ಕರದಲ್ಲಿದ್ದಾರೆ.

ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಪಾತ್ರ ಇರುವುದು ಇಲ್ಲೇ. ಜನಗಳ ಪ್ರತಿಭಟನೆಗಳಲ್ಲಿ ಮಧ್ಯ ಪ್ರವೇಶಿಸಿ ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿ ವಿಚ್ಛಿದ್ರಕಾರಿ ದಾರಿ ಹಿಡಿಯದಂತೆ ನೋಡಿಕೊಳ್ಳಬೇಕು. ಕೋಮುವಾದಿ ಶಕ್ತಿಗಳನ್ನು ತಡೆದಿಡಲು, ಬಿಜೆಪಿಯ ಮಿತ್ರಪಕ್ಷಗಳು ಜನಗಳಲ್ಲಿನ ಆಳವಾದ ಅಸಂತೃಪ್ತಿಗೆ ಸ್ಪಂದಿಸುವಂತೆ ಮಾಡಲು ಇದೊಂದೆ ದಾರಿ. ○

ಡೀಸೆಲ್ ಬೆಲೆಯೇರಿಕೆ ಏಕೆ?

ಕೆ.ಪ್ರಕಾಶ್



ಅಕ್ಟೋಬರ್ 6,1999- ಚುನಾವಣೆಗಳು ಮುಗಿದಿವೆ. ಎಣಿಕೆ ನಡೆಯುವ ದಿನ. ಫಲಿತಾಂಶಗಳು ಏನಾಗುತ್ತವೆ ಗೊತ್ತಿಲ್ಲ. ನೆಮ್ಮದಿಯ ಬದುಕನ್ನು ಬಯಸಿದ, ತಮ್ಮ ಬಯಕೆಯ ಸರ್ಕಾರವನ್ನು ಹೊಂದುವ ಜನತೆಯ ತೀರ್ಮಾನ ಇನ್ನೂ ಮತಪೆಟ್ಟಿಗೆಯಲ್ಲೇ ಇದೆ. ಇದರ ಪ್ರಕಟಣೆಯಾಗುವ ಮೊದಲೇ ಸರ್ಕಾರ ಡೀಸೆಲ್ ಬೆಲೆಗಳಲ್ಲಿ ಶೇ.40ರಷ್ಟು ಏರಿಕೆಯನ್ನು ಪ್ರಕಟಿಸಿದೆ.

ಚುನಾವಣೆ ಮುಗಿಯುತ್ತಿದ್ದುದನ್ನೇ ಕಾಯುತ್ತಿದ್ದ ಬಿಜೆಪಿ ಕೂಟ ಫಲಿತಾಂಶಕ್ಕೂ ಕಾಯದೆ ಬೆಲೆಏರಿಕೆ ಮಾಡಿ ಭಾರತದ ಜನಕೋಟಿಯನ್ನು ವಂಚಿಸಿದೆ. ವಾಜಪೇಯಿ ಕೂಟಕ್ಕೆ ಬಹುಮತ ನೀಡಿ ಬಹಳಷ್ಟು ನಿರೀಕ್ಷಿಸಿದ್ದ ಜನರಿಗೆ ಕೇಂದ್ರ ಸರ್ಕಾರ ಬೆನ್ನಲ್ಲಿ ಚೂರಿ ಹಾಕಿದೆ.

ಬೆಲೆಏರಿಕೆ 6ನೇ ತಾರೀಖಿನಿಂದ ಜಾರಿಗೆ ಬರುವುದು ಎಂದೇಳಿದರೂ ಹಿಂದಿನ ರಾತ್ರಿಯೇ ಬೆಲೆಗಳನ್ನು ಏರಿಸಿ ಲೀಟರ್‌ಗೆ 4ರೂಗಳನ್ನು ಹೆಚ್ಚು ವಸೂಲಿ ಮಾಡಿದ್ದರಿಂದ, ಬಂದದ್ದರಲ್ಲಿ, ಮೊದಲ ಕಂತಿನಲ್ಲೇ ವಾಜಪೇಯಿ ಕೂಟ ಹಲವಾರು ಕೋಟಿ ರೂ.ಗಳ ಪಾಲು ಪಡೆದು ಜೀರ್ಣಿಸಿಕೊಂಡಿತು.

ಬಡವರ ಬೆನ್ನು ಸುಡುವ ಬೆಲೆ ಏರಿಕೆಯ ಬಿಸಿ ಇಡೀ ಜೀವನ ವೆಚ್ಚವನ್ನು ದುಬಾರಿ ಮಾಡಲಿದೆ ಎಂಬುದು ಸಾಧಾರಣ ತಿಳುವಳಿಕೆಯಾದರೂ ವಾಜಪೇಯಿ ನೇತೃತ್ವದ ಸರ್ಕಾರ ಇಂತಹ ತೀರ್ಮಾನಕ್ಕೆ ಬರುವುದಕ್ಕೆ ಕಾರಣವೇನು?

ಕಚ್ಚಾ ತೈಲ ಮತ್ತು ಡೀಸೆಲ್‌ಗಳ ಅಂತರರಾಷ್ಟ್ರೀಯ ಬೆಲೆಗಳು ಕಳೆದ 9 ತಿಂಗಳಿಂದ ತೀವ್ರವಾಗಿ ಏರುತ್ತಿವೆ, ಇದರಿಂದಾಗಿ ತೈಲ ನಿಧಿಯಲ್ಲಿ ಅಪಾರವಾದ ಕೊರತೆಯುಂಟಾಗುತ್ತಿದೆ, ಇದರಿಂದ ಹಣಕಾಸು ಕೊರತೆಯು ತೀವ್ರಗೊಂಡು ಬಜೆಟ್‌ನ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ, ಪೆಟ್ರೋಲಿಯಂ ಉತ್ಪನ್ನಗಳ ಆಮದನ್ನು ಮುಂದುವರಿಸಲಾಗದಂತಹ ಸ್ಥಿತಿಗೆ ದೇಶ ತಲುಪುತ್ತದೆ, ಆದ್ದರಿಂದ ತೈಲ ನಿಧಿ ಕೊರತೆಯನ್ನು ತುಂಬಬೇಕು ಎಂದು ಸರ್ಕಾರ ಕಾರಣ ಕೊಡುತ್ತಿದೆ. ನಿಜ, ಜನರ ಬದುಕಿಗೆ, ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಅಗತ್ಯವಾದ ಪೆಟ್ರೋಲಿಯಂ ಉತ್ಪನ್ನಗಳು ಇಲ್ಲದಿದ್ದರೆ ಜನರು ತೀವ್ರ ಸಂಕಷ್ಟಕ್ಕೆ ಒಳಗಾಗುತ್ತಾರೆ. ಹೀಗಾಗಿ ಕೊರತೆಯನ್ನು ಭರ್ತಿಮಾಡಬೇಕು. ಆದರೆ ಹೇಗೆ? ಶೇ. 40ರಷ್ಟು ಡೀಸೆಲ್ ಬೆಲೆಯನ್ನು ಏರಿಸುವ ಮೂಲಕ ಎಂಬುದು ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರದ ವಾದ. ಕೊರತೆಯನ್ನು ತುಂಬುವುದು ಹೇಗೆಂಬ ಪ್ರಶ್ನೆ ಒಂದು ಕಡೆಯಾದರೆ, ವಾಜಪೇಯಿ ಸರ್ಕಾರ ಬೆಲೆ ಏರಿಸಿದ ರೀತಿಯಾದರೂ ಪ್ರಶ್ನಾರ್ಹವಾಗಿದೆ. ಇವರ ಪ್ರಕಾರವೇ ಕಳೆದ 9 ತಿಂಗಳಿಂದ ಕಚ್ಚಾ ತೈಲ ಮತ್ತು ಡೀಸೆಲ್‌ನ ಅಂತರರಾಷ್ಟ್ರೀಯ ಬೆಲೆಗಳು ಏರುತ್ತಿದ್ದರೂ ಯಾಕೆ ಬೆಲೆ ಏರಿಸಲಿಲ್ಲ? ಚುನಾವಣೆ ಮುಗಿದು ಎಣಿಕೆ ಆರಂಭವಾಗುವಾಗ ಏರಿಸುವ ಅಗತ್ಯವೇನಿತ್ತು? ಮೊದಲೇ ಏರಿಸಿದ್ದರೆ ಜನ ಸರಿಯಾಗಿ ಪಾಠ ಕಲಿಸುತ್ತಿದ್ದರು ಎಂದಲ್ಲವೇ? ಬಿಜೆಪಿಯ ಜನ ದೇಶವನ್ನು ಮತ್ತು ಸಾಮಾನ್ಯ ಜನರನ್ನು ತಮ್ಮ ವಂಚನೆಯ ಜಾಲದಲ್ಲಿ ಬೀಳಿಸಿ ಪರಿತಪಿಸುವಂತೆ ಮಾಡಿದ್ದಾರೆ.

ಇಂತಹ ವಂಚನೆಯ ತೀರ್ಮಾನದ ಹಿಂದಿರುವ ಕೆಲ ಅಂಶಗಳನ್ನು ಗಮನಿಸೋಣ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ಮತ್ತು ಹಣಕಾಸು ಸಚಿವಾಲಯದ ಪ್ರಕಾರ ಶೇ. 40ರಷ್ಟು ಡೀಸೆಲ್ ಬೆಲೆ ಏರಿಸುವುದರಿಂದ ಸುಮಾರು 6600 ಕೋಟಿ ರೂಪಾಯಿಗಳು ಸಂಗ್ರಹವಾಗುತ್ತವೆ. ಇದರಿಂದ ತೈಲ ನಿಧಿ ಕೊರತೆಯನ್ನು ಸಾಕಷ್ಟು ನೀಗಿಸಿಕೊಳ್ಳಬಹುದು. ಆದರೆ ಈ ಬೆಲೆ ಏರಿಕೆಯ ನಂತರವೂ ತೈಲನಿಧಿ ಕೊರತೆಯು ರೂ. 9850 ಕೋಟಿಗಳಿಗೆ ಬಂದು ನಿಲ್ಲಲಿದೆ. ಮುಂದೆ ಅಡಿಗೆ ಅನಿಲ, ಸೀಮೆಎಣ್ಣೆಗಳ ಬೆಲೆಗಳನ್ನು ತೀವ್ರವಾಗಿ ಏರಿಸಬಹುದಾದ ಸಾಧ್ಯತೆಗಳನ್ನು ಇದು ಸೂಚಿಸುತ್ತದೆ.

ತೈಲನಿಧಿ ಕೊರತೆ ಏಕೆ?

ಕೆಲವು ಸಾಮಾಜಿಕ ಗುರಿಗಳನ್ನು ಗಮನದಲ್ಲಿಟ್ಟುಕೊಂಡು ದೇಶದಲ್ಲಿ ಪೆಟ್ರೋಲ್ ಉತ್ಪನ್ನಗಳ ಬೆಲೆಗಳನ್ನು ನಿರ್ವಹಿಸುವ ಗುರಿಯಿಂದ ತೈಲನಿಧಿ ಖಾತೆ ಪ್ರಾರಂಭವಾಯಿತು. ಪೆಟ್ರೋಲ್ ಮತ್ತು ವಿಮಾನದ ಇಂಧನದಂತಹವುಗಳ ಬೆಲೆಗಳನ್ನು ಹೆಚ್ಚಿಗೆ ನಿಗದಿಗೊಳಿಸಿ ಅದರಿಂದ ಬರುವ ಮಿಗುತೆ ಹಣವನ್ನು ಡೀಸೆಲ್, ಅಡಿಗೆ ಅನಿಲ, ಸೀಮೆಎಣ್ಣೆ, ರಸಗೊಬ್ಬರ ಉದ್ದಿಮೆಗೆ ಬಳಸುವ ನಾಫ್ತಾ ಮುಂತಾದವುಗಳನ್ನು ಕಡಿಮೆ ಬೆಲೆಗೆ ಒದಗಿಸುವುದಕ್ಕೆ ಬಳಸಲು ಈ ತೈಲ ನಿಧಿ ಖಾತೆಯ ಉದ್ದೇಶವಾಗಿತ್ತು. ಇಂತಹ ನೀತಿಯಡಿ ಪ್ರಾರಂಭವಾದ ಈ ಖಾತೆಯಲ್ಲಿ ಕೊರತೆ ಉಂಟಾಗಲು ಸಾಧ್ಯವಿರಲಿಲ್ಲ. ಏಕೆಂದರೆ ಕೆಲವು ಪೆಟ್ರೋಲಿಯಂ ಪದಾರ್ಥಗಳಿಗೆ ನೀಡುವ ಸಬ್ಸಿಡಿ ಮತ್ತು ಕೆಲವು ಪೆಟ್ರೋಲಿಯಂ ಪದಾರ್ಥಗಳಿಂದ ಬರುವ ಹೆಚ್ಚುವರಿ ಹಣವು ಸಮ-ಸಮನಾಗಿರುತ್ತದೆ.

ಹಾಗಿದ್ದ ಮೇಲೆ ಕೊರತೆ ಉಂಟಾಗಿದ್ದು ಏಕೆ?

ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳ ಸಾಲದ ಷರತ್ತುಗಳು ಶುರುವಾದ ಬೆನ್ನಲ್ಲೇ ಈ ತೈಲ ನಿಧಿ ಕೊರತೆಯೂ ಪ್ರಾರಂಭಗೊಂಡಿತು. ತೈಲನಿಧಿ ಖಾತೆಯಲ್ಲಿದ್ದ ಸಾವಿರಾರು ಕೋಟಿಗಳನ್ನು ಹಣಕಾಸು ಮಂತ್ರಾಲಯ ತಾನು ಲಪಟಾಯಿಸಲು ಪ್ರಾರಂಭಿಸಿತು. ಈಗಲೂ ಅದನ್ನೇ ಮಾಡುತ್ತಿರುವುದು. ಡೀಸೆಲ್ ಆಮದಿನ ಮೇಲೆ ಶೇ. 32ರಷ್ಟು ಆಮದು ಸುಂಕ, ಶೇ.15 ರಷ್ಟು ಅಬಕಾರಿ ಸುಂಕವನ್ನು ಪರಿಗಣಿಸಿದರೆ ಪ್ರಸಕ್ತ ಬೆಲೆಏರಿಕೆಯಿಂದ ನಿರೀಕ್ಷಿಸಲಾಗಿರುವ 6600 ಕೋಟಿ ರೂಗಳಲ್ಲಿ ರೂ. 3100 ಕೋಟಿಗಳು ಹಣಕಾಸು ಮಂತ್ರಾಲಯಕ್ಕೆ ಹೋಗುತ್ತದೆ. ತೈಲ ನಿಧಿ ಖಾತೆಗೆ ಹೋಗುವುದು ಕೇವಲ ರೂ. 3500 ಕೋಟಿ ಮಾತ್ರ.

ಹಣಕಾಸು ಮಂತ್ರಾಲಯ ತನ್ನ ಕೊರತೆಯನ್ನು ನೀಗಿಸಿಕೊಳ್ಳಲು ತೈಲ ವಲಯವನ್ನು ಈ ರೀತಿ ಬಳಸಿಕೊಳ್ಳುತ್ತಿರುವುದರಿಂದ ತೈಲ ನಿಧಿಯಲ್ಲಿ ಕೊರತೆ ಸೃಷ್ಟಿಯಾಗಿದೆ.


ದೇಶೀ ತೈಲ ಉತ್ಪಾದನೆಯನ್ನು ಕಡೆಗಣಿಸಿ ತೈಲ ಶೋಧನೆ ಮತ್ತು ಅಭಿವೃದ್ಧಿಗೆ ಹಣ ತೊಡಗಿಸದೆ ಕಡಿತ ಮಾಡಿದ್ದರಿಂದ ತೈಲ ನಿಧಿ ಕೊರತೆ ಹೆಚ್ಚಾಗಿದೆ. ತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ನೀತಿ ಕೈಬಿಟ್ಟು ಉದಾರೀಕರಣದ ಬೆಂಬಲಿಗರ ಆಮದು ಪರವಾದ ನೀತಿಯನ್ನು ಸರ್ಕಾರ ಅನುಸರಿಸುತ್ತಾ ಬಂದಿದೆ.

ಜಾಗತಿಕವಾಗಿ ತೈಲ ಮಾರುಕಟ್ಟೆಯನ್ನು ನಿಯಂತ್ರಿಸುವ ಕೆಲವೇ ಕೆಲವು ಬಹುರಾಷ್ಟ್ರೀಯ ಕಂಪನಿಗಳು ಮತ್ತು ಇವು ಎಸೆಯುವ ಎಂಜಲು ಹಣಕ್ಕೆ ತಮ್ಮನ್ನು ಮಾರಿಕೊಂಡಿರುವ ಜನ ಸೇರಿ, ಭಾರತ ತನ್ನ ತೈಲ ಅವಶ್ಯಕತೆಯ ಶೇ. 60ಕ್ಕೂ ಹೆಚ್ಚನ್ನು ಆಮದುಗಳಿಂದಲೇ ಪೂರೈಸಿಕೊಳ್ಳಬೇಕೆಂಬ ಸ್ಥಿತಿಯನ್ನು ಸೃಷ್ಟಿಸಿದ್ದಾರೆ.

ದೇಶದೊಳಗೆ ಪೆಟ್ರೋಲಿಯಂ ಬೇಡಿಕೆ ಹೆಚ್ಚುತ್ತಿದೆ. ಆದರೆ ದೇಶೀಯ ಉತ್ಪಾದನೆ ಇಳಿಯುತ್ತಿದೆ. 1984-85ರಲ್ಲಿ ಶೇ.70ರಷ್ಟಿದ್ದ ತೈಲ ಸ್ವಾವಲಂಬನೆಯು ಹಾಗೇ ಮುಂದುವರೆದಿದ್ದರೆ ಇಷ್ಟರೊಳಗೆ ಸಂಪೂರ್ಣ ಸ್ವಾವಲಂಬನೆಯನ್ನು ಸಾಧಿಸಬಹುದಿತ್ತು. ಆದರೆ ಹಾಗಾಗಲಿಲ್ಲ. ಇದಕ್ಕೆ ವಿರುದ್ಧ ದಿಕ್ಕಿನ ಪಯಣದಿಂದಾಗಿ 1992-93ರಲ್ಲಿ ಇದು ಶೇ.42ಕ್ಕೆ ಇಳಿಯಿತು. ಒಂದು ಅಂದಾಜಿನ ಪ್ರಕಾರ ಕ್ರಿ.ಶ. 2010-11ರ ವೇಳೆಗೆ ಒಟ್ಟು ಬೇಡಿಕೆಯ ಶೇ.25ರಷ್ಟು ಮಾತ್ರವೇ ದೇಶೀಯ ಉತ್ಪಾದನೆಯಿಂದ ಸಿಗಬಹುದಷ್ಟೆ. ಇದರಿಂದ ಆಮದಿನ ಪ್ರಮಾಣ ಹೆಚ್ಚಿ ದೇಶದ ಒಟ್ಟಾರೆ ಆರ್ಥಿಕ ಸ್ಥಿತಿಯ ಮೇಲೆ ದುಷ್ಪರಿಣಾಮ ಬೀರಲಿದೆ.

'ಸ್ವದೇಶಿ' ಬಗ್ಗೆ ಬೊಗಳೆ ಹೊಡೆಯುವ ಬಿಜೆಪಿ ಮಂದಿಯ 'ಬಚ್ಚಿಟ್ಟ ವಿದೇಶೀ ಅಜೆಂಡಾ' ಡೀಸೆಲ್ ಬೆಲೆ ಏರಿಕೆಯಲ್ಲಿ ಪ್ರಕಟಗೊಂಡಿದೆ.

ಹೀಗಾಗಿ ತೈಲ ನಿಧಿ ಕೊರತೆಯು, ಸರ್ಕಾರ ತೈಲ ವಲಯವನ್ನು ಹಣಹೂಡಿಕೆಯಿಲ್ಲದೆ ನರಳಿಸಿದ ಮತ್ತು



ಡೀಸೆಲ್ ಬೆಲೆಯೇರಿಕೆಗೆ

ದೇಶ 13ನೇ ಲೋಕಸಭಾ ಚುನಾವಣೆಗಳ ಫಲಿತಾಂಶಗಳಿಗೆ ಕಾಯುತ್ತಿದ್ದರೆ ವಾಜಪೇಯಿ ಸರಕಾರ ಜನಗಳ ಮೇಲೆ 6600 ಕೋಟಿ ರೂ.ಗಳ ಭಾರೀ ಹೊರೆ ಹಾಕುವ ಬಗ್ಗೆ ಯೋಚಿಸುತ್ತಿತ್ತು. ಮತದಾನ ಮುಗಿದು ಇನ್ನೇನು ಮತಎಣಿಕೆ ನಡೆಯಬೇಕು. ಅಷ್ಟರಲ್ಲೇ ಡೀಸೆಲ್ ಬೆಲೆಗಳಲ್ಲಿ 40% ರಷ್ಟು ಭಾರೀ ಏರಿಕೆ ಮಾಡಿ ಚುನಾವಣೆಯ ಸಮಯದಲ್ಲಿ ಜನಗಳನ್ನು ಮೋಸ ಮಾಡಲು ಬಚ್ಚಿಟ್ಟ ತನ್ನ ಕರಾಳ ರೂಪವನ್ನು ಬಿಚ್ಚಿಟ್ಟಿತು. ತೈಲನಿಧಿಯಲ್ಲಿ ಹೆಚ್ಚುತ್ತಿರುವ ಕೊರತೆಯನ್ನು ಮುಚ್ಚಲು ಇದು ಅನಿವಾರ್ಯ ಎಂದು ಈಗ ಹೇಳುತ್ತಿರುವ ಸರಕಾರ ಕೆಲವೇ ದಿನಗಳ ಹಿಂದೆ ಚುನಾವಣೆಗಳ ಸಮಯದಲ್ಲಿ ಇಂತಹ ಯಾವ ಪ್ರಸ್ತಾವವೂ ಇಲ್ಲ ಎಂದು ಹೇಳುತ್ತಿತ್ತು. ಈ ನಿರ್ಧಾರವನ್ನು ಬಹಳ ಹಿಂದೇನೇ ತಗೊಳ್ಳಲಾಗಿತ್ತು, ಜನಗಳನ್ನು ಮೋಸ ಮಾಡಲು ಈಗಷ್ಟೇ ಅದನ್ನು ಪ್ರಕಟಿಸಿದೆ ಎಂಬುದು ಸ್ವಯಂವೇದ್ಯ.


ಸಹಜವಾಗಿಯೇ ಈ ದರ ಏರಿಕೆಗೆ ದೇಶಾದ್ಯಂತ ಪ್ರತಿಭಟನೆ ಕಂಡುಬಂದಿದೆ. ಏಕೆಂದರೆ ಇದು ಡೀಸೆಲ್ ಬೆಲೆಯೇರಿಕೆಗೇ ಸೀಮಿತಗೊಳ್ಳುವುದಿಲ್ಲ.

ದಿಲ್ಲಿಯಲ್ಲಿ ಪ್ರತಿಭಟನೆ

ದಿಲ್ಲಿಯಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಸುಮಾರು ಒಂದು ಸಾವಿರ ಜನ ಅಕ್ಟೋಬರ್ 18 ರಂದು ಜನಗಳ ಅಪಾರ ಸಿಟ್ಟಿಗೆ ದನಿ ನೀಡಿದರು. ಫಲಕಗಳನ್ನು ಹಿಡಿದ, ಪ್ರತಿಭಟನಾ ಘೋಷಣೆಗಳನ್ನು ಕೂಗುತ್ತಿದ್ದ ಕ್ರೋಧತಪ್ತ ಪ್ರತಿಭಟನಾಕಾರರು ಜಂತರ್ ಮಂತರ್‌ನಿಂದ ಸಂಸದ್ ಭವನದತ್ತ ಮೆರವಣಿಗೆ ನಡೆಸಿದರು. ಸಂಸದ್ ಮಾರ್ಗ ಪೋಲೀಸ್ ಠಾಣೆಯೆದುರು ಭಾರಿ ಸಂಖ್ಯೆಯ ಪೋಲೀಸರು ಮೆರವಣಿಗೆಯನ್ನು ತಡೆಯಲು ವ್ಯವಸ್ಥೆ ಮಾಡಿದ್ದರು. ಪೋಲೀಸರ ಅಡ್ಡತಡೆಗಳನ್ನು ಮುರಿದು ಪ್ರತಿಭಟನಾಕಾರರು ಒಂದು ಗಂಟೆಯ ಕಾಲ ಘೋಷಣೆಗಳನ್ನು ಕೂಗಿದರು. ನಂತರ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯ ಜೋಗೇಂದ್ರ ಶರ್ಮ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪಶ್ಚಿಮ ಬಂಗಾಳ ಎಡರಂಗದ ಪ್ರತಿಭಟನಾ ಕಾರ್ಯಕ್ರಮ

ಅಕ್ಟೋಬರ್ 21 ರಂದು ಪಶ್ಚಿಮ ಬಂಗಾಳದಲ್ಲಿ ಎಡರಂಗದ ನೇತೃತ್ವದಲ್ಲಿ ಡೀಸೆಲ್ ಬೆಲೆಯೇರಿಕೆಯ ವಿರುದ್ಧ ಭಾರೀ ಪ್ರತಿಭಟನೆ ನಡೆದಿದೆ. ವಿಶ್ವ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ







ಅದರಲ್ಲಿ ಬಂದದ್ದನ್ನು ಲಪಟಾಯಿಸುವ ನೀತಿಯನ್ನು ನಿರಂತರವಾಗಿ ಅನುಸರಿಸಿದ್ದರ ಫಲ ಎಂಬುದು ಸ್ಪಷ್ಟವಾಗಿದೆ.

ಸರ್ಕಾರಿ ಸ್ವಾಮ್ಯದ ಓಎನ್‌ಜಿಸಿ, ಓಐಎಲ್ ಗೆ ತೈಲ ಶೋಧನೆಗೆ ನೀಡುವ ಹಣದಲ್ಲಿ ತೀವ್ರವಾಗಿ ಕಡಿತಗೊಳಿಸಿದ್ದು ಒಂದು ಕಡೆಯಾದರೆ, ಓಎನ್‌ಜಿಸಿ ಕಂಡು ಹಿಡಿದ ತೈಲ ನಿಕ್ಷೇಪಗಳನ್ನು ಎನ್ರೋನ್ ಮತ್ತು ರಿಲೈಯನ್ಸ್ ನಂತಹ ಖಾಸಗಿ ಕಂಪನಿಗಳಿಗೆ ನೀಡಿದ್ದು ಮತ್ತೊಂದು ಕಡೆ. ಇವರು ಇಲ್ಲೇ ತಯಾರಿಸುವ ಕಚ್ಚಾ ತೈಲವನ್ನು ದೇಶೀಯ ಬೆಲೆಗೆ ನೀಡುವ ಬದಲು ಅಂತರ ರಾಷ್ಟ್ರೀಯ ಬೆಲೆಗಳಿಗೇ ಮಾರುವ ಒಪ್ಪಂದಗಳಿಗೆ ಹಣಕಾಸು ಮಂತ್ರಾಲಯ ಬಂದಿದೆ. ಈ ರೀತಿ ಕಚ್ಚಾ ತೈಲಕ್ಕೆ ಇಷ್ಟು ದುಬಾರಿ ಬೆಲೆ ತೆತ್ತರೆ ಡೀಸೆಲ್‌ನಂತಹ ಪೆಟ್ರೋಲಿಯಂ ಉತ್ಪನ್ನಗಳಿಗೆ ಸಬ್ಸಿಡಿಯನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದೇ ಈಗಿನ ಸರ್ಕಾರಕ್ಕೂ ಮತ್ತು ಕೆಲವು ಆಟೋಮೊಬೈಲ್ ಕಂಪನಿಗಳಿಗೂ ಬೇಕಾಗಿರುವುದು. ಆದರೆ ದೇಶದ ಜನಕ್ಕೆ ಬೇಡವಾಗಿರುವುದು.

ಡೀಸೆಲ್ ಬೆಲೆ ಏಕೆ ಕಡಿಮೆ ಇರಬೇಕು?

ಶೇ.80ರಷ್ಟು ಡೀಸೆಲನ್ನು ಕೃಷಿ ಮತ್ತು ಸಾರ್ವಜನಿಕ ಸಾಗಾಣಿಕೆಗೆ ಬಳಸಲಾಗುತ್ತಿದೆ. ಡೀಸೆಲ್ ಬೆಲೆ ಹೆಚ್ಚಿದರೆ ಸಾರ್ವಜನಿಕ ಸಾಗಾಣಿಕೆಯ ಖರ್ಚು ಹೆಚ್ಚುತ್ತದೆ. ಇದರಿಂದ ಎಲ್ಲಾ ಸರಕುಗಳ ಬೆಲೆ ಹೆಚ್ಚುತ್ತದೆ.

ಇದು ಸಾಮಾನ್ಯ ಜನರನ್ನು, ಬಡವರನ್ನು ತೀವ್ರವಾಗಿ ಬಾಧಿಸುತ್ತದೆ. ಆದ್ದರಿಂದಲೇ ಡೀಸೆಲ್‌ನಂತಹ ಉತ್ಪನ್ನಗಳಿಗೆ ಸಬ್ಸಿಡಿಯನ್ನು ನೀಡುತ್ತಿರುವುದು. ಇದಕ್ಕೆ ನೀಡುವ ಸಬ್ಸಿಡಿಯ ಕೊರತೆಯನ್ನು 'ಪೆಟ್ರೋಲ್‌ನಂತಹ ಉತ್ಪನ್ನಗಳಿಂದ ಬರುವ ಮಿಗುತಾಯದಿಂದ ಭರಿಸಿಕೊಳ್ಳಬೇಕೆಂದೇ ತೈಲ ನಿಧಿ ಖಾತೆ ಇರುವುದು. ಜೊತೆಗೆ ಒಂದು ಸರ್ಕಾರದ ಸಾಮಾಜಿಕ ಬದ್ಧತೆ ಇರುವುದೂ ಇಲ್ಲೇ.



ಎಡ ಪಕ್ಷಗಳ ಸಂಸತ್ ಸದಸ್ಯರು ಪ್ರಧಾನಿಯನ್ನು ಕಂಡು ಡೀಸೆಲ್ ಬೆಲೆ ಏರಿಕೆಗೆ ವಿರೋಧ ವ್ಯಕ್ತಪಡಿಸಿದರು

ಈಗಾಗಲೇ ಹೇಳಿದ ಹಾಗೆ ಸರ್ಕಾರದ ಪ್ರಯತ್ನಗಳಿಂದ ತೈಲ ಬ.ರಾ. ಕಂಪನಿಗಳ ಒತ್ತಡದಿಂದ ಮತ್ತು ಪೆಟ್ರೋಲ್ ಕಾರುಗಳನ್ನು ಉತ್ಪಾದಿಸುವ ಖಾಸಗಿ ಕಂಪನಿಗಳ ಲಾಭಿಯಿಂದ ಪೆಟ್ರೋಲ್ ಮತ್ತು ಡೀಸೆಲ್ ನಡುವಿನ ಬೆಲೆಗಳ ಅಂತರವನ್ನು ಇಲ್ಲವಾಗಿಸುವ ಪ್ರಯತ್ನ ಶೇ.40ರಷ್ಟು ಬೆಲೆ ಏರಿಕೆಯ ಹಿಂದಿದೆ. ಮತ್ತು ಮುಕ್ತ ಮಾರುಕಟ್ಟೆಯ ನೀತಿಯಿಂದಾಗಿ ಜನಪರವಾದ ನೀತಿಗಳನ್ನು ಕೈಬಿಡುವ ಕೆಲಸಗಳನ್ನು ಮಾಡಲಾಗುತ್ತಿದೆ.

ಶ್ರೀಮಂತ-ಬಡವರು ಒಂದೇ ಬೆಲೆ

ತೆರಬೇಕೆನ್ನುವುದು ಸರಿಯಲ್ಲ.

ಡೀಸೆಲ್, ಸೀಮೆಎಣ್ಣೆ, ಅಡಿಗೆ ಅನಿಲ ಇವುಗಳ ಬೆಲೆ ಏರಿಕೆ ಮುಖ್ಯವಾಗಿ ಬಡವರನ್ನು ಮತ್ತು ಸಾಮಾನ್ಯ ಜನರನ್ನೇ ತಟ್ಟುವುದು. ಆದರೆ, ಇಂತಹ ಪದಾರ್ಥಗಳಿಗೆ ನೀಡುವ ಸಬ್ಸಿಡಿಯಿಂದಲೇ ಇಷ್ಟೆಲ್ಲಾ ಕೊರತೆ-ಸಮಸ್ಯೆಗಳಿಗೆ ಕಾರಣ ಎನ್ನುತ್ತಾ, ಸಬ್ಸಿಡಿಗಳನ್ನು ರದ್ದುಗೊಳಿಸಿದರೆ ತೈಲ ನಿಧಿ ಕೊರತೆ ಇಲ್ಲವಾಗುತ್ತದೆ ಎಂದು ಹೇಳುತ್ತಾ ಹಣಕಾಸು ಮಂತ್ರಾಲಯ ಇಡೀ ಸಮಸ್ಯೆಯ ಹಾದಿಯನ್ನು ತಪ್ಪಿಸಿದೆ.

ಸಾಮಾನ್ಯ ಜನರನ್ನು ಮತ್ತು ಬಡವರನ್ನು ದೃಷ್ಟಿಯಲ್ಲಿಟ್ಟುಕೊಂಡು ಬಂದಿರುವ ಡೀಸೆಲ್ ಮತ್ತು ಪೆಟ್ರೋಲ್ ನಡುವಿನ ಬೆಲೆಗಳ ವ್ಯತ್ಯಾಸವನ್ನು ಇಲ್ಲವಾಗಿಸುವ ಪಿತೂರಿ ನಡೆದಿದೆ. ಆ ಮುಖಾಂತರ ಜನರ ಕೊಳ್ಳುವ ಸಾಮರ್ಥ್ಯದಲ್ಲಿ ಎಷ್ಟೇ ವ್ಯತ್ಯಾಸವಿದ್ದರೂ, ಶ್ರೀಮಂತರಾಗಿದ್ದರೂ- ಬಡವರಾಗಿದ್ದರೂ, ಒಂದೇ ಬೆಲೆಯನ್ನು ತೆರಬೇಕು ಎನ್ನುತ್ತಿದೆ. ಆದರೆ ವಾಸ್ತವದಲ್ಲಿ ತೈಲ ವಲಯದಿಂದ ಸರಕಾರ ಗಳಿಸುವ ಆದಾಯಕ್ಕೆ ಹೋಲಿಸಿದರೆ ಡೀಸೆಲ್ ಮತ್ತು ಸೀಮೆಎಣ್ಣೆಯಂತಹ ಪದಾರ್ಥಗಳಿಗೆ ನೀಡುವ ಸಬ್ಸಿಡಿಯ ಹಣ ಕಡಿಮೆಯೇ. ಹೀಗಿದ್ದರೂ ಜನರನ್ನು ಹಾದಿತಪ್ಪಿಸುವ ವಾದವನ್ನು ಸರ್ಕಾರ ಮಾಡುತ್ತಿದೆ.

ಸರ್ಕಾರವೆಂದರೆ ಜನರ ಬದುಕನ್ನು ಉತ್ತಮಪಡಿಸುವ ಸಾಮಾಜಿಕ ಕಳಕಳಿ ಇರುವಂತದ್ದು. ಕೇವಲ ಲೆಕ್ಕಾಚಾರದ ಗುಮಾಸ್ತನಾಗಿ ಅಲ್ಲ. ಜನರ ಋಣ ತೀರಿಸಬೇಕಾದ್ದು ಸರ್ಕಾರದ ಜವಾಬ್ದಾರಿ. ಆದರೆ ಬಿಜೆಪಿ ಸರ್ಕಾರ ಶ್ರೀಮಂತರ, ಬಂಡವಾಳಿಗರ ಋಣ ತೀರಿಸಲು ಹೊರಟಿದೆ. ಅದಕ್ಕಾಗಿ ಸಾಮಾನ್ಯರು, ಬಡವರು ಬೆಲೆ ತೆರಬೇಕೆಂದು ಹೇಳುತ್ತಿದೆ. ಇದನ್ನು ಈ ದೇಶದ ಜನತೆ ಒಪ್ಪಲು ಸಾಧ್ಯವಿಲ್ಲ.

ಜನರ ದೈನಂದಿನ ಜೀವನ ಪರಿಸ್ಥಿತಿಯ ಮೇಲೆ ವಾಜಪೇಯಿ ಸರಕಾರದ ದಾಳಿಗಳು ಇನ್ನಷ್ಟು ಮುಂದುವರಿಯುವ ಸ್ಪಷ್ಟ ಲಕ್ಷಣಗಳು ಕಾಣಿಸುತ್ತಿವೆ. ಡೀಸೆಲ್ ಬೆಲೆ ಏರಿಕೆಯ ವಿರುದ್ಧ ದೇಶದಾದ್ಯಂತ ಪ್ರತಿಭಟನೆಯ ಅಲೆ ಎದ್ದರೂ ಬೆಲೆಯನ್ನು ಇಳಿಸುವ ಪ್ರಶ್ನೆಯೇ ಇಲ್ಲ ಎಂದು ಹಣಕಾಸು ಮಂತ್ರಿ ಯಶವಂತಸಿನ್ಹಾ ಮತ್ತು ಪ್ರಧಾನ ಮಂತ್ರಿ ವಾಜಪೇಯಿಯವರು ಹೇಳುತ್ತಿದ್ದಾರೆ. ಪ್ರಧಾನ ಮಂತ್ರಿ ಮುಂದುವರಿಯುತ್ತಾ, "ರಾಷ್ಟ್ರದ ಹಿತದೃಷ್ಟಿಯಿಂದ ಇನ್ನೂ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ." ಎಂದು ಹೇಳುತ್ತಿದ್ದಾರೆ. ಅವರು ಹೇಳುವ ರಾಷ್ಟ್ರದ ಹಿತ ಎಂದರೆ ದೇಶ ವಿದೇಶದ ಕೆಲವೇ ಕೆಲವು ಶ್ರೀಮಂತರ ಹಿತ. 'ಕಠಿಣ ಕ್ರಮ' ಎಂದರೆ ಜನಸಾಮಾನ್ಯರ ಮೇಲೆ ಮಧ್ಯಮ ವರ್ಗದ ಮೇಲೆ ಹೊರಲಾಗದ ಹೊರೆ. ತೀವ್ರ ಪ್ರಚಾರ, ಪ್ರಕ್ಷೋಭೆಗಳ ಮೂಲಕ ಡೀಸೆಲ್ ಏರಿಕೆಯನ್ನು ಹಿಂತೆಗೆದುಕೊಳ್ಳಲು ಬಿಜೆಪಿ ಸರಕಾರದ ಮೇಲೆ ಒತ್ತಡ ತರಬೇಕಾಗಿದೆ. ವಿಶಾಲ ನೆಲೆಯಲ್ಲಿ ಹೋರಾಟಗಳನ್ನು ನಡೆಸುವುದರ ಮೂಲಕ ಮುಂಬರುವ ದಾಳಿಗಳನ್ನು ಎದುರಿಸಲು ಸಾಧ್ಯವಾಗುತ್ತದೆ. ○

...ಭಟನೆಗಳ ಸರಣಿ ಆರಂಭ

ಇಳಿಯುತ್ತಿರುವಾಗ ಬಿಜೆಪಿ ಈ ಕೃತ್ಯಕ್ಕಿಳಿದಿದೆ ಎಂದು ಟೀಕಿಸಿರುವ ಎಡರಂಗದ ಹೊಸದಾಗಿ ಚುನಾಯಿತರಾದ ಲೋಕಸಭಾ ಸದಸ್ಯರು ಹಾಗೂ ಅವರ ಜತೆಗೆ ಎಡಪಕ್ಷಗಳ ರಾಜ್ಯಸಭಾ ಸದಸ್ಯರು ಅಕ್ಟೋಬರ್ 21 ರಂದು ಡೀಸೆಲ್ ಬೆಲೆಯೇರಿಕೆಯನ್ನು ಹಿಂತೆಗೆದುಕೊಳ್ಳುವಂತೆ ಬಿಜೆಪಿ ನೇತೃತ್ವದ ಸರಕಾರವನ್ನು ಆಗ್ರಹಪಡಿಸಿದ್ದಾರೆ.

ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಬೃಹತ್ ಪ್ರತಿಭಟನಾ ಮೆರವಣಿಗೆ

ಕೇಂದ್ರ ಸರ್ಕಾರದ ಶೇ 35 ರಷ್ಟು ಡೀಸೆಲ್ ಬೆಲೆಯ ಏರಿಕೆಯನ್ನು ವಿರೋಧಿಸಿ ಮತ್ತು ಹಗರಿಬೊಮ್ಮನಹಳ್ಳಿ ಪ್ರಮುಖ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ನೇತೃತ್ವದಲ್ಲಿ ಅಕ್ಟೋಬರ್ 10 ರಂದು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು.


ಹಗರಿಬೊಮ್ಮನ ಹಳ್ಳಿಯ ಮ್ಯಾಕ್ಸಿಕ್ಯಾಬ್ ಡ್ರೈವರ್ ಮತ್ತು ಓನರ್ಸ್ ಯೂನಿಯನ್, ಬಂಡಿ ಹಮಾಲರ ಸಂಘಟನೆ, ಆಟೋ ಚಾಲಕರ ಮತ್ತು ಹಮಾಲರ ಸಂಘ, ರಸ್ತೆ ಬದಿಯ ವ್ಯಾಪಾರಿಗಳ ಸಂಘದವರು, ಪ್ರಮುಖ ಬೀದಿಗಳ ಮುಖಂತಾರ ವರ್ಣರಂಜಿತ ಮೆರವಣಿಗೆಯೊಂದಿಗೆ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿದರು.

ಸಭೆಯನ್ನುದ್ದೇಶಿಸಿ ಸಿಐಟಿಯು ಜಿಲ್ಲಾ ಸಹಕಾರ್ಯದರ್ಶಿ ಡಿ.ವೆಂಕಟರಮಣ ಮಾತನಾಡಿ ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ದೇಶದಲ್ಲಿ ಯಾವುದೇ ಆರ್ಥಿಕ ಸ್ಥಿತಿಗತಿಯಲ್ಲಿ ಏರು ಪೇರು ಇರುವುದಿಲ್ಲ, ಆರ್ಥಿಕವಾಗಿ ಸುಭದ್ರವಾಗಿದೆ, ಯಾವುದೇ ಬೆಲೆ ಏರಿಕೆ ಇಲ್ಲ ಎಂದವರು ಚುನಾವಣೆ ಮುಗಿದ ಕೂಡಲೇ ಡೀಸೆಲ್ ಬೆಲೆ ಏರಿಸಿರುವುದು ಅವರ ಜನವಿರೋಧಿ ನೀತಿಯನ್ನು ತೋರಿಸುತ್ತದೆ ಎಂದರು.

ಸಿಐಟಿಯು ಮುಖಂಡರಾದ ಆರ್.ಎಸ್. ಬಸವರಾಜ ಮಾತನಾಡಿ ತಾಲೂಕಿನಲ್ಲಿ ಎಸ್.ವಿ.ಕೆ. ಬಸ್ಸುಗಳ ಹಾವಳಿ ಹೆಚ್ಚಾಗಿದ್ದು ಪರವಾನಿಗೆ ಪತ್ರವಿಲ್ಲದೆ ಎಸ್.ವಿ.ಕೆ. ಬಸ್ಸುಗಳು ಓಡಾಡುತ್ತಿದ್ದ ಇದನ್ನು ಕೂಡಲೇ ರದ್ದುಪಡಿಸಬೇಕು ಜೊತೆಗೆ ತಾಲೂಕಿನ ರಸ್ತೆಗಳು ತುಂಬಾ ಹದಗೆಟ್ಟಿದ್ದು ರಸ್ತೆ ರಿಪೇರಿ ಕೆಲಸ ತುರ್ತಾಗಿ ನಡೆಯಬೇಕು. ಹಗರಿ ಸೇತುವೆ ರಿಪೇರಿ ಕೆಲಸ ತುರ್ತಾಗಿ ನಡೆಯುವಂತಾಗಬೇಕು, ಸರ್ಕಾರಿ ಮಾರುಕಟ್ಟೆ ಇಲ್ಲದಿರುವುದು, ಕಳಪೆ ಪೆಟ್ರೋಲ್ ರಾಜಾರೋಷವಾಗಿ ಮಾರಾಟ ಮಾಡತೊಡಗಿದ್ದು ಇವುಗಳನ್ನು ಕೂಡಲೇ ಈಡೇರಿಸಬೇಕು ಇಲ್ಲವಾದಲ್ಲಿ ಹಗರಿಬೊಮ್ಮಹಳ್ಳಿಯನ್ನು ಬಂದ್ ಮಾಡುವಂತಹ ಚಳುವಳಿಯನ್ನು ಮಾಡಲಾಗುವುದು ಎಂದು ಎಚ್ಚರಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಯು.ಬಸವರಾಜ ಆರ್ಥಿಕ ನೀತಿಗಳ ತಿದ್ದುಪಡಿಯ ಭಾಗವಾಗಿ ದೇಶ ದಿವಾಳಿ ಹಂತಕ್ಕೆ ತಲುಪಿದ್ದು ನಿರುದ್ಯೋಗ ಸಮಸ್ಯೆ ತೀವ್ರವಾಗಿ ಬೆಳೆಯತೊಡಗಿದೆ, ಆದ್ದರಿಂದ ಹೋರಾಟ ಅನಿವಾರ್ಯವಾಗಿದೆ ಎಂದು ಹೇಳಿದರು.

ಪ್ರತಿಭಟನೆ ಮೆರವಣಿಗೆ ನೇತೃತ್ವವನ್ನು ಸಿಐಟಿಯು ಮುಖಂಡರಾದ ಎಸ್.ಸುಬಾನ್, ಎ.ಕೆ.ಬಸವರಾಜ್, ಅಬ್ದುಲ್ ರಜಾಕ್, ಶ್ರೀನಿವಾಸ, ಕೈಲಾಶ್, ರತ್ನಮ್ಮ ಕೊಟ್ರಪ್ಪ, ರಾಜಮ್ಮ ಬಸವರಾಜ ಮಾಬು, ಇವರುಗಳು ವಹಿಸಿದ್ದರು. ಪ್ರತಿಭಟನೆ ಮೆರವಣಿಗೆಯ ನಿರ್ವಹಣೆಯನ್ನು ಕೆ.ಎಸ್.ಸುಭಾನ್ ಖಾನ್ ವಹಿಸಿದ್ದರು.



ಡೀಸಲ್ ಬೆಲೆ ಏರಿಕೆ ವಿರುದ್ಧ- ಸಿಪಿಐ(ಎಂ) ಪ್ರತಿಭಟನೆ

ಡೀಸಲ್ ಬೆಲೆಯನ್ನು ಏಕಾಏಕಿಯಾಗಿ ಏರಿಸಿರುವ ಕೇಂದ್ರ ಸರ್ಕಾರದ ಜನ ವಿರೋಧಿ ಕ್ರಮವನ್ನು ಪ್ರತಿಭಟಿಸಲು ಹಾಗೂ ಬೆಲೆ ಏರಿಕೆಯನ್ನು ವಾಪಸ್ಸು ಪಡೆಯುವಂತೆ ಸರ್ಕಾರವನ್ನು ಒತ್ತಾಯಿಸಲು ಸಿಪಿಐ(ಎಂ) ಪಕ್ಷ ನೀಡಿ ಅಖಿಲ ಭಾರತ ಕರೆಯನ್ನು ಅನುಸರಿಸಿ ಅಕ್ಟೋಬರ್ 22 ರಂದು ಬೆಂಗಳೂರಿನ ರಾಜಭವನದ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ರಾಜಭವನದ ಎದುರಿಗಿರುವ ಬಿಜೆಪಿ ಕಛೇರಿಯ ಮುಂದೆ ನೆರೆದಿದ್ದ ಸಿಪಿಐ(ಎಂ)ನ ನೂರಾರು ಕಾರ್ಯಕರ್ತರು ಡೀಸಲ್ ಬೆಲೆ ಏರಿಕೆ ವಿರುದ್ಧ ಘೋಷಣೆಗಳನ್ನು ಕೂಗಿ ಕೂಡಲೆ ಬೆಲೆ ಇಳಿಸುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದರು. ಈ ಸಂದರ್ಭದಲ್ಲಿ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಕಾಂ. ಬಾಲಕೃಷ್ಣ ಶೆಟ್ಟಿಯವರು, ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎಸ್.ವೈ.ಗುರುಶಾಂತ್ ರವರು, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಪ್ರಕಾಶ್, ಗೋಪಾಲಗೌಡರು ಮಾತನಾಡಿದರು.

ಬೆಲೆ ಇಳಿಸುವಂತೆ ಆಗ್ರಹಪಡಿಸುವ ಸಲುವಾಗಿ ನಿಯೋಗವೊಂದು ರಾಜಭವನಕ್ಕೆ ತೆರಳಿ ರಾಜ್ಯಪಾಲರಿಗೆ ಮನವಿ ನೀಡಲಾಯಿತು. ನಿಯೋಗದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಪಿ.ಕೆ.ಸುಬ್ರಮಣ್ಯ, ಕೆ.ಪ್ರಕಾಶ್, ಜಿಲ್ಲಾ ಸಮಿತಿ ಸದಸ್ಯೆ ಎನ್. ಪ್ರಭಾ ಪಾಲ್ಗೊಂಡಿದ್ದರು.

ಸರ್ಕಾರ ಸಾರಿಗೆ ದರಗಳನ್ನು ಏರಿಸಿದೆ, ಕೇಂದ್ರದ ಕ್ರಮವನ್ನು ವಿರೋಧಿಸಬೇಕು, ಮಾತ್ರವಲ್ಲ ಲಾರಿ ಮಾಲೀಕರ ಮುಷ್ಕರಕ್ಕೆ ಮಧ್ಯ ಪ್ರವೇಶ ಮಾಡಬೇಕೆಂದು ರಾಜ್ಯ ಪಾಲರಿಗೆ ಮನವಿ ನೀಡಲಾಯಿತು. ಮನವಿ ಸ್ವೀಕರಿಸಿದ ರಾಜ್ಯಪಾಲರು ಜನತೆಯ ಅನಿಸಿಕೆಗಳನ್ನು ಕೇಂದ್ರಕ್ಕೆ ರವಾನಿಸುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಟ್ರಕ್ ಮಾಲೀಕರ ಹೋರಾಟಕ್ಕೆ ಬೆಂಬಲ ಘೋಷಿಸಲಾಯಿತು.

ಸೆನೆಟ್ ಚುನಾವಣೆ

ಜಾತಿ Vs ವಿ.ವಿ. ಶಿಕ್ಷಣ ಸಮಸ್ಯೆಗಳ ಚರ್ಚೆಯಲ್ಲಿ ಪಡೆದ ಗೆಲವು

ಡಿಸೆಂಬರ್ ತಿಂಗಳಲ್ಲಿ ಬೆಂಗಳೂರು ವಿಶ್ವ ವಿದ್ಯಾಲಯವು ಕೋಲಾರ, ತುಮಕೂರು, ಬೆಂಗಳೂರು ನಗರ-ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಪದವೀಧರರನ್ನು ನೋಂದಾಯಿಸಲು ಪ್ರಕಟಣೆ ಹೊರಡಿಸಿತು. ಮತದಾರರ ನೋಂದಣಿ ಸೆನೆಟ್ ಚುನಾವಣೆಗೆ ಸಂಬಂಧಿಸಿದಂತೆ ಮಹತ್ತರವಾದ ಪ್ರಕ್ರಿಯೆ, ಹಾಗೆಯೇ ಹೆಚ್ಚು ಕಷ್ಟಕರವಾದದ್ದು.

ಸಾಮಾನ್ಯವಾಗಿ ಪದವೀಧರರು ವಿಶ್ವವಿದ್ಯಾಲಯದಿಂದ, 1 ರೂ ಶುಲ್ಕ ಸಲ್ಲಿಸಿ ಪದವೀಧರರ ನೊಂದಾಣಿಯ ಅರ್ಜಿ ಪಡೆದು, ಸಹಿ ಮಾಡಿದ ಭಾವಚಿತ್ರ, 10 ರೂ ಶುಲ್ಕ, ಪದವಿಯ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಗೂ ಕಳೆದ ಎರಡು ವರ್ಷಗಳಿಂದ ಬೆಂಗಳೂರು ವಿ.ವಿ. ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಕುರಿತು ಸರ್ಕಾರಿ ಅಧಿಕಾರಿಗಳಿಂದ ದೃಡೀಕರಿಸಿದ ಪ್ರಮಾಣ ಪತ್ರಗಳನ್ನು ಲಗತ್ತಿಸಿ ವಿ.ವಿ. ನಿಗಧಿ ಪಡಿಸಿದ ದಿನಾಂಕದೊಳಗೆ ಸಲ್ಲಿಸಬೇಕು.

ಇಲ್ಲಿಂದಲೇ ಶುರು ಸೆನೆಟ್ ಚುನಾವಣೆಗೆ ಸ್ಪರ್ಧಿಸಲಿರುವ ಅಭ್ಯರ್ಥಿಗಳ ಅಬ್ಬರ, ಅರ್ಭಟ. ಶೇಕಡ 2 ಪದವೀಧರರು ಕೂಡ ನೇರವಾಗಿ ನೋಂದಾಯಿಸಲ್ಪಡುವುದಿಲ್ಲ. ಸೆನೆಟ್ ಚುನಾವಣೆಯ ಅಭ್ಯರ್ಥಿಗಳೇ ಹಳ್ಳಿ, ತಾಲ್ಲೂಕುಗಳಲ್ಲಿ ನಿರುದ್ಯೋಗಿ ಯುವಕರನ್ನು ಏಜೆಂಟರಾಗಿ ಬಳಸಿ ಮನೆ ಮನೆಗಳಲ್ಲಿರುವ ಪದವೀಧರರನ್ನು ಜಾಲಾಡಿ ಸ್ಥಳದಲ್ಲೇ ಪದವೀಧರರ ಫೋಟೋ ತೆಗೆದು, 10 ರೂ ಶುಲ್ಕ, ಅವರೇ ಬರಿಸಿ ಪದವಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಅವರೇ ಸರ್ಕಾರಿ ನೌಕರರಿಂದ ಧೃಡೀಕರಿಸುತ್ತಾರೆ. ಯಾವುದೇ ಪದವೀಧರ ತಲೆ ಬಿಸಿ ಇಲ್ಲದೆ ಈ ಪ್ರಕ್ರಿಯೆಯಲ್ಲಿ ನೊಂದಾಯಿತನಾಗುತ್ತಾನೆ. ಈ ಸಮಯದಲ್ಲಿ ಲಕ್ಷ ಗಟ್ಟಲೇ ಹಣದ ವ್ಯವಹಾರಗಳೂ ನಡೆಯುತ್ತವೆ. ಮೊದಲಿಗೆ ಏಜೆಂಟರಿಗೆ ಕೊಡುವ ಹಣ ಪ್ರದೇಶ ಹಾಗೂ ಆತನ ಪ್ರಭಾವವನ್ನು ಆಧರಿಸಿ ನಿರ್ಧಾರವಾಗುತ್ತದೆ. 100 ಪದವೀಧರರನ್ನು ನೊಂದಾಯಿಸಿದರೆ 10,000 ದಿಂದ 50,000ದವರೆಗೆ ಏಜೆಂಟರಿಗೆ ಹಣ. 7500 ಪದವೀಧರರನ್ನು ನೊಂದಾಯಿಸಲು 7 ಲಕ್ಷ ಖರ್ಚಾಗಿದೆ ಎಂಬುದು ಗೆದ್ದ ಒಬ್ಬ ಅಭ್ಯರ್ಥಿಯ ಅಳಲು. ಏಜೆಂಟರಿಗೆ ಕೊಡುವ ಹಣವಲ್ಲದೆ ಅರ್ಜಿ ಶುಲ್ಕಗಳು, ನೋಂದಾಣಿ ಶುಲ್ಕಗಳನ್ನ ಅಭ್ಯರ್ಥಿಗಳೇ ಭರಿಸುತ್ತಾರೆ. ಸಾವಿರ ಪದವೀಧರರನ್ನು ನೊಂದಾಯಿಸಿದರೆ ಅರ್ಜಿ ಶುಲ್ಕ 1000, ನೊಂದಾಣಿ ಶುಲ್ಕ 10,000 ಮತದಾರರ ಭಾವ ಚಿತ್ರಗಳಿಗಾಗಿ ತಗಲುವ ವೆಚ್ಚ .... ವಾಸಸ್ಥಳ ಕುರಿತು ಧೃಡೀಕರಿಸುವ ಸರ್ಕಾರಿ ಅಧಿಕಾರಿ ವೆಚ್ಚ, 30 ತಾಲ್ಲೂಕು ಗಳಲ್ಲಿ ಓಡಾಡುವ ವಾಹನಗಳ ವೆಚ್ಚ, ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಅವರ ಹಿಂಬಾಲಕರಿಗೆ, ಏಜಂಟರಿಗೆ, ಕೊಡುವ ಪಾರ್ಟಿಗಳ ವೆಚ್ಚಗಳು ಸೇರಿ ಒಬ್ಬ ಅಭ್ಯರ್ಥಿಗೆ ಕನಿಷ್ಠ 5 ಲಕ್ಷ ವೆಂಬುದು ಸಾಮಾನ್ಯ ಮಾತಾಗಿದೆ.

ಶುಲ್ಕ ನೀವೇ ಭರಿಸಬೇಕಪ್ಪಾ!

ಇವುಗಳ ನಡುವೆ ನಾವು ಪದವೀಧರರನ್ನು ಬಹಳ ವಿಭಿನ್ನವಾಗಿ ನೊಂದಾಯಿಸಿದೆವು. ಬೆಂಗಳೂರು, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಪದವೀದರರ, ಸಾಮೂಹಿಕ ಸಂಘಟನೆಗಳ ಮುಖಂಡರ ಸಭೆಗಳನ್ನು ಕರೆದು ವಿಶ್ವ ವಿದ್ಯಾಲಯದ ಮಹತ್ವ, ಸೆನೆಟ್ ಚುನಾವಣೆಯ ಮಹತ್ವ ವಿಶ್ವ ವಿದ್ಯಾಲಯದ ಮುಂದಿರುವ ಸಮಸ್ಯೆ, ಸವಾಲುಗಳು, ಕುರಿತು ಸಭೆ ನಡೆಸಿ ಪದವೀಧರರಿಂದಲೇ ಅರ್ಜಿ ಶುಲ್ಕ, ನೋಂದಣಿ ಶುಲ್ಕ. ಭಾವಚಿತ್ರ ಸಂಗ್ರಹಿಸಬೇಕೆಂದು ತೀರ್ಮಾನಿಸಿದೆವು. ಬ್ಯಾಂಕ್, ಎಲ್.ಐ.ಸಿ ಹೈಸ್ಕೂಲ್ ಕಾಲೇಜ್, ಪೋಲೀಸ್ ಠಾಣೆ, ಆಸ್ಪತ್ರೆ, ಸರ್ಕಾರಿ ಕಛೇರಿಗಳು, ಮನೆಗಳ ಸುತ್ತ ಮುತ್ತ ಇರುವ ಪದವೀಧರರ ಮಧ್ಯೆ ನಾವು ನೊಂದಾಣಿ ಮಾಡಿಸುವಾಗ ನಮಗೆ ಕೆಲವು ಕಡೆ ಒಳ್ಳೆಯ ಪ್ರತಿಕ್ರಿಯೆ ದೊರೆತಿದ್ದು. ಕೆಲವು ಕಡೆ ಪದವೀಧರರಿಗೆ ಕಸಿವಿಸಿಯೂ ಆಗಿದೆ. ಹಲವಾರು ವರ್ಷಗಳಿಂದ ಮೇಲೆ ತಿಳಿಸಿದ ಅಭ್ಯರ್ಥಿಗಳ ಮೂಲಕ ನೋಂದಾಯಿಸಲ್ಪಡುತ್ತಿದ್ದವರಿಗೆ ಅರ್ಜಿ ಶುಲ್ಕ ಕೊಡೋದು, ನೋಂದಾಣಿ ಶುಲ್ಕ ಕೊಡೋದು ಅವರೇ ಫೋಟೊ ಕೊಡೋದು ಕಷ್ಟವೆನಿಸಿರಬೇಕು. ಕೆಲವು ಕಛೇರಿಗಳಲ್ಲಿ "ಏನ್ ಮೇಡಂ ಅರ್ಜಿ ಶುಲ್ಕ, ನೊಂದಾಣಿ ಶುಲ್ಕ ನಾವೇ ಕೊಡಬೇಕು ಅಂತೀರಿ, ಒಂದು ಸಲ ಸೆನೆಟ್ ಸದಸ್ಯರಾಗಿದ್ದೀರಿ ನೀವೇ ಭರಿಸಬೇಕಪ್ಪಾ, ಬೇರೆಯವರಾದರೆ ಎಲ್ಲವನ್ನು ಅವರೇ ಭರಿಸುತ್ತಾರೆ. ಎಂದಾಗ ಕಛೇರಿಯ ಸಿಬ್ಬಂದಿಯನ್ನು ಉದ್ದೇಶಿಸಿ 5 ನಿಮಿಷ ಮಾತಾಡುತ್ತಿದ್ದೆವು.

1000 ಪದವೀಧರರನ್ನ ನಾವೇ ನಮ್ಮ ವೆಚ್ಚದಲ್ಲಿ ನೊಂದಾಯಿಸಲು 50,000 ದಿಂದ 1 ಲಕ್ಷ ಖರ್ಚಾಗುತ್ತದೆ ಮುಂದೆ ಗೆದ್ದರೆ ಈ ಹಣ ವಾಪಸ್ ಪಡೆಯಲು ವಿಶ್ವ ವಿದ್ಯಾಲಯದಲ್ಲಿ corrept ಆಗಲೇ ಬೇಕಾಗುತ್ತದೆ. ನಾವು ಭ್ರಷ್ಠರಾಗೊದನ್ನು ನೀವೇ ಬೆಂಬಲಿಸಿದಂತಾಗುತ್ತದೆ. ಎಂತೆಲ್ಲಾ ಹೇಳಿದ ಮೇಲೆ ಅವರೇ ಶುಲ್ಕಗಳನ್ನು ಕೊಡುತ್ತಿದ್ದರು. ಈ ರೀತಿ ಎನ್ ರೋಲ್ ಮಾಡಿಸಿದ್ದರಿಂದಾಗಿ ಪದವೀಧರರೊಂದಿಗೆ ನಮಗೂ ಇತರ ಅಭ್ಯರ್ಥಿಗಳ ಎನ್‌ರೋಲ್‌ಮೆಂಟಿಗೂ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಲೂ, ಅವರು ಯೊಚಿಸಲು, ಚರ್ಚಿಸಲು ಸಾಧ್ಯವಾಯಿತು. ಈ ರೀತಿ ತಿಳುವಳಿಕೆ ನೀಡಿ ಹೆಚ್ಚು ಹೆಚ್ಚು ಪದವೀಧರರನ್ನು ತಲುಪಲು ಸಾಧ್ಯವಾದರೆ "ಅಬ್ಬರ ಆಡಂಬರದ ಸೆನೆಟ್ ಅಭ್ಯರ್ಥಿಗಳು ವಿಶ್ವ ವಿದ್ಯಾಲಯದಿಂದಲೇ ಕಾಲ್ತೆಗೆಯುವ ವಿಷಯವೂ ಬಹಳ ದೂರದಲ್ಲಿಲ್ಲವೆನಿಸಿತು.

ಸರಿ ಅಕ್ಟೋಬರ್ 15 ರಂದು ಸೆನೆಟ್ ಚುನಾವಣೆ ಯೆಂದಾದ ಮೇಲೆ ಮೂವರು ಅಭ್ಯರ್ಥಿಗಳಿಗೂ ಸೇರಿ ಒಂದು ಲಕ್ಷ ಅಂದಾಜು ವೆಚ್ಚದೊಂದಿಗೆ ಒಂದು ಕಡೆ ಚುನಾವಣಾ ನಿಧಿ ಸಂಗ್ರಹ ಮಾಡಬೇಕು. ಮತ್ತೊಂದು ಕಡೆ ಪೂರ್ವ ಭಾವಿ ತಯಾರಿ, ಪ್ರಚಾರಗಳನ್ನು ನಡೆಸಬೇಕಾಯಿತು. ಸಮಾನ್ಯವಾಗಿ ಸೆನೆಟ್ ಅಭ್ಯರ್ಥಿಗಳು ಕಾಲೇಜುಗಳ ಆಡಳಿತ ಮಂಡಳಿಗಳಿಂದ ರಾಜಕೀಯ ಪಕ್ಷಗಳಿಂದ ಹಣ ಪಡೆದು ಮುಂದೆ ಅವರಿಗೆ ಕೃತಜ್ಞರಾಗಿ, ತೃಪ್ತರನ್ನಾಗಿ ಮಾಡುವ ನೀತಿಗಳನ್ನು ಬೆಂಬಲಿಸುತ್ತಾರೆ. ನಾವು ವಿದ್ಯಾರ್ಥಿಗಳ ಮಧ್ಯೆ ಮತದಾರರ ಮಧ್ಯೆ, ಅಧ್ಯಾಪಕರ ಮಧ್ಯೆ, ಹಿತೈಷಿಗಳ ಮಧ್ಯೆ ನಿಧಿ ಸಂಗ್ರಹಿಸಿದೆವು... ಚುನಾವಣಾ ನಿಧಿ ಸಂಗ್ರಹಕ್ಕೆಂದ ಹೋದಾಗ ಒಬ್ಬ ವಿ.ವಿ. ಪ್ರಾಧ್ಯಾಪಕರ ಮಾತುಗಳು "ನೋಡಿದ್ಯಾ, ಮೂರುವರೆ ವರ್ಷ ಸೆನೆಟ್ ಸದಸ್ಯೆಯಾಗಿದ್ದೀ ಸಹಾಯಮಾಡಿ ಅಂತ ಕೇಳ್ತಿದ್ದೀ. ಏಕೆ ಬೇಕು ನಿನಗೆ Election. ನೀನು ಹಣ ಮಾಡ್ಕೊಳಲ್ಲ, ಮೊನ್ನೆ ರಾತ್ರಿ ಬಿ.ಟಿ.ಎಸ್. ಬಸ್‌ಗಾಗಿ ಕಾಯ್ತಿದ್ದೀಯಲ್ಲಾ. ಬಸ್‌ನಲ್ಲಿ ಓಡಾಡೋ ಸೆನೆಟ್ ಸದಸ್ಯೆ ನಿನೊಬ್ಬಳೇ ನೋಡು" ಎಂದು ಮೆಚ್ಚುಗೆಯೊಂದಿಗೆ ಸಹಾಯವನ್ನು ಮಾಡಿದರು.

SFI ಅಭ್ಯರ್ಥಿಗಳಿಗೆ ಬೆಂಬಲ!

ಇತರ ಅಭ್ಯರ್ಥಿಗಳು, ಸ್ಟಾರ್ ಹೊಟೆಲ್ ಗಳಲ್ಲಿ ಪಾರ್ಟಿಗಳನ್ನು ಏರ್ಪಡಿಸಿದರೆ, ನಾವು ಕೋಲಾರ, ಚಿಕ್ಕಬಳ್ಳಾಪುರ, ಬಂಗಾರಪೇಟೆ, ಚಿಂತಾಮಣಿ, ತುಮಕೂರು, ಬೆಂಗಳೂರು, ದೊಡ್ಡಬಳ್ಳಾಪುರ, ಚನ್ನಪಟ್ಟಣಗಳಲ್ಲಿ ಮತದಾರರ , ಹಿತೈಷಿಗಳ ಸಭೆ ಕರೆದು ವಿಶ್ವ ವಿದ್ಯಾಲಯದ ಸಮಸ್ಯೆಗಳ ಕುರಿತು, self Financing of Education ಕಳೆದ 4 ವರ್ಷಗಳಲ್ಲಿ ಎಸ್.ಎಫ್.ಐ ಅಭ್ಯರ್ಥಿಯಾಗಿ ಸೆನೆಟ್ ಸದಸ್ಯಳಾಗಿ ಏನು ಮಾಡಲಿಕ್ಕೆ ಸಾಧ್ಯವಾಗಿದೆ ಎಂಬುದರ ಕುರಿತು ಚರ್ಚಿಸಿ "ಜನರ ಅಭಿವೃದ್ಧಿಗಾಗಿ ವಿ.ವಿ, ವಿ.ವಿ ಸುಧಾರಣೆಗಾಗಿ ಮತ ನೀಡಿ ಎಂಬ ಘೋಷಣೆಯಡಿ ಪ್ರಚಾರ ಪ್ರಾರಂಭಿಸಿದೆವು.

ಹೀಗೆಯೇ ಚಿಕ್ಕನಾಯಕನ ಹಳ್ಳಿಯಲ್ಲಿ ಪ್ರಚಾರದಲ್ಲಿರುವಾಗ ಅಲ್ಲಿಯ ಉಪನ್ಯಾಸಕರು ಹೇಳ್ತಿದ್ರು, "ಪೇಪರ್ ನೋಡಿ SFI ಅಭ್ಯರ್ಥಿಗಳು ಸೆನೆಟ್‌ಗೆ ಸ್ಪರ್ಧಿಸುತ್ತಿದ್ದಾರೆಂದು ತಿಳೀತು. ನೀವು ಹೋರಾಟ ಬೆಂಬಲಿಸಿ ಶಿಕ್ಷಕರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೀರಿ. ನಮ್ಮ ಸಿಬ್ಬಂದಿ ಮಧ್ಯೆ ಚರ್ಚೆ ನಡೆದು. ನಾವೆಲ್ಲಾ ನಿಮಗೆ ಮತಚಲಾಯಿಸಲು ಅದೇ ರೀತಿ ಶಿಕ್ಷಕರ ವಿರೋಧಿ ABVP ಅಭ್ಯರ್ಥಿಗಳನ್ನು ಸೋಲಿಸಲು ತೀರ್ಮಾನಿಸಿ ದ್ದೇವೆಂದರು. ಅದೇ ರೀತಿ ಪಾವಗಡದಲ್ಲಿ ಜೆಓಸಿ ಉಪನ್ಯಾಸಕರು ಹೇಳಿದ್ದು" ನಾವೆಲ್ಲಾ ತಿಂಗಳುಗಟ್ಟಲೆ ನಮ್ಮ ಸಮಸ್ಯೆಗಳಿಗಾಗಿ ಹೋರಾಟ ಮಾಡುವಾಗ ನೀವು ಬೆಂಬಲಿಸಿ ನಮ್ಮ ಪರ ಪ್ರತಿಭಟನೆಗಳನ್ನು ನಡೆಸಿದಿರಿ ಶಿಕ್ಷಕರ ಸಮಸ್ಯೆಗಳ ಬಗ್ಗೆ ಒಳ್ಳೆಯ ಕಣ್ಣೋಟವಿರುವ SFI ಅಭ್ಯರ್ಥಿಗಳನ್ನು ಬೆಂಬಲಿಸುತ್ತೇವೆಂದರು. ಬೆಂಗಳೂರಿನ ವಿವಿಪುರಂ ಕಾಲೇಜಿನ ಉಪನ್ಯಾಸಕರು ಹೇಳ್ತಿದ್ರು. "ABVP ಯವರನ್ನು ಕಾಲೇಜ್ ಒಳಗೆ ಸೇರಿಸೊಲ್ಲ. ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತು ಹೋರಾಟ ಮಾಡೋದು ಬಿಟ್ಟು ಉಪನ್ಯಾಸಕರು ಅವರ ಬೇಡಿಕೆಗಳಿಗಾಗಿ ಹೋರಾಟ ಮಾಡುವಾಗ ಉಪನ್ಯಾಸಕರ ವಿರುದ್ಧ ಪ್ರತಿಭಟನೆ ಮಾಡಿದ್ದಾರೆ. ಅವರನ್ನು ನಾವು ಬೆಂಬಲಿಸುವುದಿಲ್ಲ. SFI ಸಂಘಟನೆಯನ್ನು ಅಭ್ಯರ್ಥಿಗಳನ್ನು ಬೆಂಬಲಿಸ್ತೀವಿ "ಎಂದರು. ಹೀಗೆ ಪ್ರಚಾರದುದ್ದಕ್ಕೂ SFI ಸಂಘಟನೆಯ ವಿಚಾರಗಳ ಕುರಿತು, SFI ಮತ್ತು ABVP ವಿದ್ಯಾರ್ಥಿ ಸಂಘಟನೆಗಳ ನಡುವಿನ ವ್ಯತ್ಯಾಸ ಕುರಿತು ಚರ್ಚೆಗಳು ನಡೆಯುತ್ತಿದ್ದು ABVP ವಿರೋಧಿ ಅಲೆ ಬಹಳ ಕಡೆ ಕಂಡು ಬಂತು. SFI ಅಭ್ಯರ್ಥಿಗಳಾಗಿ ಸೆನೆಟ್ ಚುನಾವಣೆಯಲ್ಲಿ ಸ್ಪರ್ದಿಸಿದ್ದು ಸಂಘಟನೆಯ ಸೈದ್ಧಾಂತಿಕ ವಿಷಯಗಳನ್ನ, ವಿಶ್ವ ವಿದ್ಯಾಲಯದ ಬಗ್ಗೆ SFI ಕಣ್ಣೋಟವನ್ನು ಮತದಾರರು ಚರ್ಚಿಸಲು, ಬೆಂಬಲಿಸಲು ಸಾಧ್ಯವಾಯಿತು.

ಸೆನೆಟ್ ಸದಸ್ಯರೆಂದರೆ ಫೇಲ್ ಆದವರನ್ನು ಪಾಸ್ ಮಾಡಿಸೋದು ಮಾರ್ಕ್ಸ್ ಕಡಿಮೆ ಇದ್ದವರಿಗೆ ಮಾರ್ಕ್ಸ್ ಕೊಡಿಸೋದು, ಏನಾದರೂ ಮಾಡಿ ಕಾಲೇಜುಗಳಲ್ಲಿ ಸೀಟ್ ಕೊಡಿಸೋದು ಎಂದಷ್ಟೇ ತಿಳಿದಿದ್ದ ಬಹುಸಂಖ್ಯಾತ ಮತದಾರರ ಮಧ್ಯ ಸೆನೆಟ್ ಕಮಿಟಿಯ ಜವಾಬ್ದಾರಿ. ಪ್ರವೇಶದ ಸರ್ವತೋಮುಖ ಅಭಿವೃದ್ಧಿಗಾಗಿ ವಿಶ್ವವಿದ್ಯಾಲಯದ ಪಾತ್ರ. ಪ್ರತಿ ಕುಟುಂಬಕ್ಕೂ ವಿಶ್ವ ವಿದ್ಯಾಲಯಕ್ಕೂ ಇರುವ ಸಂಬಂಧ ಮತದಾರರ ಜವಾಬ್ದಾರಿಗಳ ಗಂಭೀರತೆಯನ್ನು ಕೊಂಡೊಯ್ಯಲು ಸಾಧ್ಯವಾಯಿತು.

ಸರಳತೆ, ಪ್ರಾಮಾಣಿಕತೆ, ಹೋರಾಟಗಳಿಂದ ಏನೂ ಮಾಡಲಿಕ್ಕೆ ಸಾಧ್ಯವಾಗೋದಿಲ್ಲ ಎನ್ನುವಂತ ವ್ಯವಸ್ಥೆಯಲ್ಲಿ ಇವುಗಳನ್ನು ಬೆಂಬಲಿಸಿ ಮಾತನಾಡುವ ಮತದಾರರು ಇನ್ನೂ ಹೆಚ್ಚಿಗೆ ನಿರೀಕ್ಷಿಸುವ ಮತದಾರರೂ ಕಂಡು ಬಂದದು. ಈ ಕ್ಷೇತ್ರದಲ್ಲಿ ಇನ್ನು ಹೆಚ್ಚಿಗೆ ಶ್ರಮವಹಿಸಲು ಪ್ರೇರೇಪಿಸಿತು.

ಅಕ್ಟೋಬರ್ 15 ಚುನಾವಣೆಯ ದಿನ ಬೆಂಗಳೂರಿನ ಸೆಂಟ್ರಲ್ ಕಾಲೇಜ್, ಸುತ್ತ ಮುತ್ತ ಕಾಲೇಜ್‌ಗಳ ಮುಂದೆ, ಸಾವಿರಾರು ಬ್ಯಾನರ್ ಗಳು, ಬಣ್ಣ ಬಣ್ಣದ ಪೋಸ್ಟರ್ ಗಳಿಂದ ತುಂಬಿದ ಗೋಡೆಗಳು, ಒಂದೆಡೆಯಾದರೆ ಮತದಾರರನ್ನು ಕರೆತರಲು ಅಭ್ಯರ್ಥಿಗಳು ವ್ಯವಸ್ಥೆಮಾಡಿದ ನೂರಾರು ವ್ಯಾನ್‌ಗಳು, ಕಾರುಗಳು, ಬಸ್ ಗಳು, ಟಾಟಾ ಸುಮೋಗಳು ಜನರು ನಡೆದಾಡಲು ಸಾಧ್ಯವಾಗದ ರೀತಿಯಲ್ಲಿ ನಿಂತು ಬಿಟ್ಟಿದ್ದವು. ಈ ಅಬ್ಬರ ವೆಚ್ಚಗಳನ್ನು ಗಮನಿಸಿದ ಬೆಂಗಳೂರಿನ ಖ್ಯಾತ ವಕೀಲರಾದ ವೆಂಕಟೇಶ ಗೌಡ್ರು ಹೇಳ್ತಿದ್ರು" ಸೆನೆಟ್ ಚುನಾವಣೆ ಅಂದ್ರೆ ಏನೋ ಅಂದ್ಕೊಂಡಿದ್ದೆ, ಇಷ್ಟು ಸ್ಪರ್ಧೆ ಇರ್ತದೆ ಅಂತ ಅಂದ್ಕೊಂಡಿರಲಿಲ್ಲ. ಅಬ್ಬಬ್ಬಾ ಆ ಬ್ಯಾನರ್ಸ್, ವಾಹನಗಳನ್ನು ನೋಡಿ ನಾನು ಅಂದ್ಕೊಂಡೆ ನಮ್ಮ SFI ಅಭ್ಯರ್ಥಿಗಳು ಗೆಲ್ಲಲಿಕ್ಕೆ ಸಾಧ್ಯತೆಗಳೇ ಇಲ್ಲವೆಂದು ತೀರ್ಮಾನಿಸಿದೆ. ಮಾರನೆದಿನ ವಿಷಯ ಕೇಳಿ ತುಂಬಾ ಸಂತೋಷ ಆಯ್ತು. ಒಳ್ಳೆಯದನ್ನ ಮತದಾರರು ಗುರುತಿಸಿ, ಬೆಂಬಲಿಸುತ್ತಾರೆ ಎಂಬುದಕ್ಕೆ ನಮ್ಮ ಅಭ್ಯರ್ಥಿ ಉದಾಹರಣೆ" ಎಂದರು. ಹಿಂದಿನ ಸೆನೆಟ್ ಚುನಾವಣೆಗಳಿಗೆ ಹೋಲಿಸಿ ನೋಡಿದಾಗ ಪ್ರಸ್ತುತ ನಡೆದ ಚುನಾವಣೆಗಳಲ್ಲಿ ಜಾತಿ ರಾಜಕೀಯ ಎಲ್ಲದಕ್ಕಿಂತ ಮುಂದಿತ್ತು. ಹೆಂಗಾರ ಗೆಲ್ಲ ಬೇಕೆಂ ಆಕಾಂಕ್ಷೆ ಅಭ್ಯರ್ಥಿಗಳು ಲಕ್ಷಗಟ್ಟಲೇ ಖರ್ಚುಮಾಡಿದುದೇ ಅಲ್ಲದೇ ಜಾತಿ ಮತದಾರರನ್ನು ಪ್ರತ್ಯೇಕಿಸಿ ಯಾದವರು ಒಂದುಕಡೆ, ಗೌಡರು ಒಂದೆಡೆ, ಲಿಂಗಾಯಿತರು ಒಂದೆಡೆ, ಪರಿಶಿಷ್ಟ ಜಾತಿಯವರು ಒಂದೆಡೆ ಆಯಾ ಜಾತಿಯ ಮತದಾರರನ್ನು ಕೇಂದ್ರೀಕರಿಸಿದುದು ಗಂಭೀರ ವಿಷಯವೇ ಆಗಿದೆ. ವಿದ್ಯಾ ವಂತ, ವಿಚಾರವಂತ "ಪದವೀಧರ"ರ ಈ ಚುನಾವಣೆಯ ಜಾತಿ ರಾಜಕೀಯದಿಂದ ಬೇಸತ್ತ ಕೆಲ ಮತದಾರರು ಮತ ಚಲಾಯಿಸಬಾರದೆಂದು ತೀರ್ಮಾನಿಸಿದ್ದು ಕಂಡು ಬಂತು.

ಇವೆಲ್ಲದರ ನಡುವೆ ಪ್ರಕಾಶ್‌ರವರು ಸ್ಪರ್ಧಿಸಿದ್ದ, 27 ಅಭ್ಯರ್ಥಿಗಳುಳ್ಳ ಸಾಮಾನ್ಯ ಪದವೀಧರ ಕ್ಷೇತ್ರ, ನಾರಾಯಣ ಸ್ವಾಮಿಯವರು ಸ್ಪರ್ಧಿಸಿದ್ದ ಕಾನೂನು ಪದವೀಧರ ಕ್ಷೇತ್ರದಲ್ಲಿ ಸ್ಪರ್ಧೆ ತೀವ್ರವಾಗಿ ಸಾಗಿತ್ತು. ಏನಾರ ಮಾಡಿ SFI ನ ಲಕ್ಷ್ಮಿಯನ್ನು ಸೋಲಿಸಲೇ ಬೇಕೆಂದು ಬೆಂಗಳೂರು ಜಿಲ್ಲಾ ಬಿ.ಜೆ.ಪಿ ಪಕ್ಷ, ABVP ಗಳು ಬಹಳ ವ್ಯವಸ್ಥಿತವಾಗಿ ಕಳೆದ ಭಾರಿ ನನ್ನ ಇನ್ನೊಬ್ಬ ಪ್ರತಿಸ್ಪರ್ಧಿಯಾಗಿದ್ದ ಅನುಸೂಯರನ್ನು ಬೆಂಬಲಿಸಿ ಸಾಕಷ್ಟು ತೆರೆ ಮರೆಯ ಪ್ರಯತ್ನಗಳನ್ನು ನಡೆಸಿತ್ತು. ಅವರ ಈ ಎಲ್ಲಾ ಪ್ರಯತ್ನಗಳ ನಡುವೆ ವಿಶ್ವವಿದ್ಯಾಲಯದ ಸಮಸ್ಯೆಗಳಿಗಾಗಿ ನಾವು ಹೋರಾಡಿದ್ದು, ವಿದ್ಯಾರ್ಥಿ- ಶಿಕ್ಷಕರ ಪರವಾಗಿ ಸೆನೆಟ್ ಸಭೆಗಳಲ್ಲಿ ನಿರಂತರವಾಗಿ ದನಿಎತ್ತುತ್ತಿದುದು ಲಕ್ಷ್ಮಿ ಎಲ್ಲರಿಗೂ ಸಿಗುತ್ತಾರೆ, ಪ್ರಾಮಾಣಿಕರು ಎಂಬುದನ್ನು ಗುರುತಿಸಿ ಬೆಂಬಲಿಸಿದ ಮತದಾರರಿಂದಾಗಿ 5757 ಮತಗಳನ್ನು ಪಡೆದು ಪ್ರತಿಸ್ಪರ್ಧಿ ABVP ಅನುಸೂಯರನ್ನು ಸೋಲಿಸಲು ಸಾಧ್ಯವಾಯಿತು. SFI ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನನಗೆ ಮೇಲಿನ ಅನುಭವಗಳು ಅನಿಸಿಕೆಗಳು, ವಿಮರ್ಶೆಗಳು ಇನ್ನೂ ಹೆಚ್ಚಿಗೆ ದುಡಿಯಲು ಪ್ರೇರಣೆಯನ್ನು ನೀಡಿವೆ. SFI ಅಭ್ಯರ್ಥಿಗಳನ್ನು ಗೆಲ್ಲಿಸುವಲ್ಲಿ ಸಾಕಷ್ಟು ಶ್ರಮವಹಿಸಿದ ಎಲ್ಲಾ ಸಾಮೂಹಿಕ ಸಂಘಟನೆಗಳ ಸಂಗಾತಿಗಳಿಗೆ ಹಿತೈಷಿಗಳಿಗೆ, ಮತದಾರರಿಗೆ SFI ರಾಜ್ಯ ಸಮಿತಿಯು ಅಭಿನಂದಿಸುತ್ತದೆ.



ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯೆಯಾಗಿದ್ದು ಈ ಬಾರಿ ಮತ್ತೆ ಆರಿಸಿಬಂದಿರುವ ಎಸ್.ಎಫ್.ಐ ರಾಜ್ಯ ಉಪಾಧ್ಯಕ್ಷೆ

ಕೆ.ಎಸ್.ಲಕ್ಷ್ಮಿ

ಇತ್ತೀಚಿನ ಸೆನೆಟ್ ಚುನಾವಣೆಯ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಆಂಧ್ರ: ಜಾತಿಭೇದದ ವಿರುದ್ಧ ಪ್ರತಿಭಟನಾ ಸಮಾವೇಶಗಳು

ಆಂಧ್ರಪ್ರದೇಶದ ಚುನಾವಣಾ ಪ್ರಚಾರದ ನಡುವೆಯೂ ರಾಜ್ಯಾದ್ಯಂತ ಜಾತಿಭೇದದ ಮತ್ತು ದಲಿತರ ಮೇಲೆ ಹೆಚ್ಚುತ್ತಿರುವ ಧಾಳಿಗಳ ವಿರುದ್ಧ ಪ್ರತಿಭಟನಾ ಸಮಾವೇಶಗಳು ನಡೆದವು. ಸುಮಾರಾಗಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಇತರ ಕೆಲವು ಪ್ರಮುಖ ನಗರಗಳಲ್ಲಿ ಇವು ನಡೆದಿವೆ. 'ಜಾತಿಭೇದ-ವಿರೋಧಿ ಹೋರಾಟ ಸಮಿತಿ' ಯ ರಾಜ್ಯ ಮತ್ತು ಜಿಲ್ಲಾ ಮುಖಂಡರುಗಳು ಹಾಗೂ ದಲಿತ ಸಂಘಟನೆಗಳ, ಸಾಮಾಜಿಕ ಸಂಘಟನೆಗಳ ಮುಖಂಡರು ಇದರಲ್ಲಿ ಭಾಗವಹಿಸಿದರು.

ಹೈದರಾಬಾದಿನ ಸುಂದರಯ್ಯ ವಿಜ್ಞಾನ ಕೇಂದ್ರದಲ್ಲಿ ಈ ರಾಜ್ಯ ವ್ಯಾಪಿ ಕಾರ್ಯಕ್ರಮದ ಉದ್ಘಾಟನೆ ನಡೆಯಿತು. ಹೋರಾಟ ಸಮಿತಿಯ ಸಂಚಾಲಕ ಹಾಗೂ ಹಿಂದಿನ ರಾಜ್ಯ ವಿಧಾನಸಭೆಯಲ್ಲಿ ಸಿಪಿಐ(ಎಂ) ಮುಖಂಡ ಪಿ.ರಾಮಯ್ಯ ಸಮಾವೇಶವನ್ನು ಉದ್ಘಾಟಿಸಿದರು. ಅವರು ಸಾಮಾಜಿಕ ದಮನ ಮತ್ತು ಆರ್ಥಿಕ ಶೋಷಣೆಯ ವಿರುದ್ಧ ಹೋರಾಟಗಳನ್ನು ಬೆಸೆಯುವ ಮಹತ್ವದ ಬಗ್ಗೆ ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು. ಉರ್ದು ಪತ್ರಿಕೆ 'ಸಿಯಾಸತ್'(ರಾಜಕೀಯ)ನ ಸಂಪಾದಕ ಝಹೀದ್ ಅಲಿ ಖಾನ್ ಮಾತನಾಡಿ ಹೆಚ್ಚುತ್ತಿರುವ ಜಾತಿವಾದಿ, ಕೋಮುವಾದಿ ಶಕ್ತಿಗಳ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ರಕ್ಷಣಾ ಸಂಘದ ಅಧ್ಯಕ್ಷ ಇ.ಬಾಲಾನಂದಂ, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ನೌಕರರ ಸಂಘದ ಅಧ್ಯಕ್ಷ ಎ.ಎಂ.ಆಂಧ್ರಯ್ಯ ಮತ್ತಿತರರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ರಾಜ್ಯ ಸರಕಾರ ಜಾತಿಭೇದದ ಕುರಿತು ಪರಿಶೀಲಿಸಲು ನೇಮಿಸಿರುವ ಕೆ.ಪುನ್ನಯ್ಯ ಆಯೋಗದ ಕಾರ್ಯವಧಿಯನ್ನು ವಿಸ್ತರಿಸಬೇಕು ಎಂದು ಸಮಾವೇಶ ಆಗ್ರಹಪಡಿಸಿತು.

ರಾಜ್ಯಾದ್ಯಂತ ಇಂತಹ ಸಮಾವೇಶಗಳು ನಡೆದ ವರದಿಗಳು ಬಂದಿವೆ. ಒಂದು ತಿಂಗಳ ಚುನಾವಣಾ ಪ್ರಚಾರದ ವೇಳೆಯಲ್ಲೇ ರಾಜ್ಯದಲ್ಲಿ ದಲಿತರ ಮೇಲೆ ಅತ್ಯಾಚಾರಗಳ 35 ಘಟನೆಗಳು ವರದಿಯಾಗಿವೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರ ಜಿಲ್ಲೆ ಚಿತ್ತೂರಿನಲ್ಲೇ ಆಳುವ ಪಕ್ಷಗಳ ಮೇಲ್ಜಾತಿ ಭೂಮಾಲಕರು ದಲಿತರು ಮತದಾನ ಮಾಡದಂತೆ ತಡೆದ ಘಟನೆ ವರದಿಯಾಗಿದೆ. ಇದನ್ನು ಪ್ರತಿರೋಧಿಸಿದ ದಲಿತರ ಮೇಲೆ ಹಲ್ಲೆಗಳು ನಡೆದಿವೆ.

ಪಂಜಾಬ್: ಸಿಪಿಐ(ಎಂ) ಜಿಲ್ಲಾ ಕಚೇರಿ ಮೇಲೆ ಧಾಳಿ

ಸೆಪ್ಟೆಂಬರ್ 30 ರಂದು ಪಂಜಾಬಿನ ಹೋಶಿಯರ್‌ಪುರ್ ಜಿಲ್ಲಾ ಸಿಪಿಐ(ಎಂ) ಕಚೇರಿಯ ಮೇಲೆ ಪೋಲೀಸರು ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗ ನಡೆಸಿದರು. ಸೊನಾಲಿಕಾ ಇಂಟರ್‌ನ್ಯಾಶನಲ್ ಟ್ರಾಕ್ಟರ್ಸ್ ಲಿಮಿಟೆಡ್‌ನ ಕಾರ್ಮಿಕರ ಹೋರಾಟವನ್ನು ಬಗ್ಗುಬಡಿಯಲು ಈ ಧಾಳಿ ನಡೆಸಲಾಯಿತು. ಇದು ಇತ್ತೀಚೆಗೆ ಅಕಾಲಿದಳ-ಬಿಜೆಪಿ ಸಮ್ಮಿಶ್ರ ಸರಕಾರದ ಹೆಚ್ಚುತ್ತಿರುವ ಸರ್ವಾಧಿಕಾರಿ ಪ್ರವೃತ್ತಿಯ ಸಂಕೇತ ಎಂದು ಸಿಪಿಐ(ಎಂ)ನ ಪಂಜಾಬಿ ರಾಜ್ಯ ಕಾರ್ಯದರ್ಶಿ ಬಲವಂತ್ ಸಿಂಗ್ ಹೇಳಿದ್ದಾರೆ.

ಆದಿನ ಮೇಲೆ ಹೇಳಿದ ಕಾರ್ಖಾನೆಯ ಕಾರ್ಮಿಕರು ಸಿಂಗ್ರಿವಾಲಾ ಗ್ರಾಮದಲ್ಲಿರುವ ಕಾರ್ಖಾನೆಯ ಆವರಣದಲ್ಲಿ ಪ್ರತಿಭಟನಾ ಮತಪ್ರದರ್ಶನ ಯೋಜಿಸಿದ್ದರು. ಇದಕ್ಕೆ ಪೋಲೀಸ್ ಅನುಮತಿಯನ್ನೂ ಪಡೆದಿದ್ದರು. ಸಿಐಟಿಯು ಹಾಗೂ ಸಿಪಿಐ(ಎಂ) ನೇತೃತ್ವದಲ್ಲಿ ಈ ಹೋರಾಟ ನಡೆದಿತ್ತು. ಆದರೆ ಕೊನೆಗಳಿಗೆಯಲ್ಲಿ ಪೋಲೀಸರು ತಾವೇ ನೀಡಿದ ಅನುಮತಿಯನ್ನು ರದ್ದು ಪಡಿಸಿ, ರ್‍ಯಾಲಿಯನ್ನು ಮುರಿದು ಮುಖಂಡರನ್ನು ಬಂಧಿಸಿದರು.

ಇದರಿಂದ ಕುಪಿತಗೊಂಡ ಕಾರ್ಮಿಕರು ಸಿಪಿಐ(ಎಂ) ಜಿಲ್ಲಾ ಕಚೇರಿಯೆದುರು ನೆರೆದು ಅಲ್ಲಿಂದ ಜಿಲ್ಲಾ ಕಲೆಕ್ಟರ್ ಕಚೇರಿಗೆ ಮೆರವಣಿಗೆಯಲ್ಲಿ ಹೊರಡಲು ನಿರ್ಧರಿಸಿದರು. ಅಲ್ಲಿ ಕಲೆಕ್ಟರಿಗೆ ಮನವಿ ಪತ್ರ ಸಲ್ಲಿಸುವ ಯೋಜನೆ ಹಾಕಲಾಗಿತ್ತು. ಆದರೆ ಮೆರವಣಿಗೆ ಹೊರಡುತ್ತಿದ್ದಂತೆ ಜಿಲ್ಲಾ ಪೋಲೀಸ್ ಸೂಪರಿಟೆಂಡೆಂಟ್ ನೇತೃತ್ವದಲ್ಲಿ 250 ಪೋಲೀಸರ ಪಡೆ ಪಕ್ಷದ ಕಚೇರಿಯನ್ನು ಸುತ್ತುವರಿದರು. ಜಿಲ್ಲಾ ಮ್ಯಾಜಿಸ್ಟ್ರೇಟ್ ಕೂಡಾ ಹಾಜರಿದ್ದರು. ಸೆಕ್ಷನ್ 144 ಹಾಕಿರುವುದರಿಂದ ಎಲ್ಲರನ್ನು ಬಂಧಿಸುವುದಾಗಿ ಎಸ್.ಪಿ. ಬೆದರಿಸಿದರು. ಇದ್ದಕ್ಕಿದ್ದಂತೆ ಎಸ್.ಪಿ. ಲಾಠಿ ಪ್ರಹಾರಕ್ಕೆ ಆದೇಶ ನೀಡಿದರು. ಅಶ್ರುವಾಯು ಸಿಡಿಸಿ ಕಚೇರಿಯೊಳಗೆ ಇದ್ದವರು ಉಸಿರುಕಟ್ಟುವಂತೆ ಮಾಡಲಾಯಿತು. ಅಕ್ಕಪಕ್ಕದವರು ನೀರು ತಂದುದರಿಂದ ಉಸಿರುಕಟ್ಟಿ ಸಾಯುವ ಪರಿಸ್ಥಿತಿ ಬರಲಿಲ್ಲ. ಮಹಿಳೆಯರು, ಮಕ್ಕಳ ಮೇಲೂ ಲಾಠೀ ಪ್ರಹಾರ ನಡೆಸಲಾಯಿತು. 12 ಮಂದಿಗೆ ಗಂಭೀರ ಗಾಯಗಳಾಗಿವೆ.

ಟ್ರಾಕ್ಟರ್ ಕಂಪನಿಯ ಮಾಲಕರು ನೀಡಿದ ಲಂಚ ಹಾಗೂ ಹಣದಿಂದಾಗಿ ಈ ಲಾಠಿ ಪ್ರಹಾರ ಹಾಗೂ ಅಶ್ರುವಾಯು ಪ್ರಯೋಗ ನಡೆಯಿತು ಎಂದು ತಿಳಿದು ಬಂದಿದೆ. ಲಂಚಕ್ಕೆ ಕೈಯೊಡ್ಡಿ ಕಾನೂನು-ವ್ಯವಸ್ಥೆಯನ್ನು ತಾವೇ ಬಹಿರಂಗವಾಗಿ ಉಲ್ಲಂಘಿಸುತ್ತಿರುವ ಈ ಪೋಲೀಸ್ ಅಧಿಕಾರಿಗಳನ್ನು ಹಾಗೂ ಜಿಲ್ಲಾಧಿಕಾರಿಗಳನ್ನು ವರ್ಗಮಾಡಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು, ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ) ನ ಪಂಜಾಬ್ ರಾಜ್ಯ ಸಮಿತಿ ಆಗ್ರಹಪಡಿಸಿದೆ.

ಈ ಟ್ರಾಕ್ಟರ್ ಕಾರ್ಮಿಕರು 1926 ರ ಟ್ರೇಡ್ ಯೂನಿಯನ್ ಕಾನೂನಿನ ಪ್ರಕಾರ ತಮ್ಮ ಸಂಘವನ್ನು ನೊಂದಾಯಿಸುವ 'ಧೈರ್ಯ' ತೋರಿಸಿದ್ದೇ ಈ ಕಾರ್ಮಿಕರ ಅಪರಾಧ! ಇದಕ್ಕಾಗಿ ತಮಗೆ ನೆರವು ನೀಡಿದ ಮಾಲಕನ ಪ್ರಚೋದನೆಯಿಂದ ಕಾನೂನು ಪಾಲಕರೇ ಧಾಳಿಗಿಳಿದರು! ಜುಲೈ 23 ರಿಂದ ಈ ಮಾಲಕ ಕಾರ್ಖಾನೆಯಲ್ಲಿ ಕಾನೂನು ಬಾಹಿರ ಲಾಕೌಟ್ ಹಾಕಿದ್ದಾನೆ.

ಕಾರ್ಮಿಕ ಮತ್ತು ರಾಜಕೀಯ ಸ್ವಾತಂತ್ರ್ಯದ ಮೇಲೆ ಇಂತಹ ಹಲ್ಲೆಗಳ ವಿರುದ್ಧ ರಾಜ್ಯ ಸರಕಾರವನ್ನು ಎಚ್ಚರಿಸಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಹೋಶಿಯಾರ್‌ಪುರ್‌ನಲ್ಲಿ ಸಮಾನಮನಸ್ಕ ರಾಜಕೀಯ ಶಕ್ತಿಗಳೊಗೂಡಿ ಒಂದು ಬೃಹತ್ ರ್‍ಯಾಲಿ ನಡೆಸಲು ನಿರ್ಧರಿಸಿದೆ.

ಕೇರಳ: ಬಿಜೆಪಿ-ಕಾಂಗ್ರೆಸ್ ಶಾಮೀಲು ಈಗ ಬಯಲು

1991 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಯು.ಡಿ.ಎಫ್. ಮುಖಂಡರ ನಡುವೆ ಗುಪ್ತ ಒಪ್ಪಂದ ನಡೆದಿತ್ತು. ಇದರಿಂದಾಗಿ ಯು.ಡಿ.ಎಫ್. ಅಧಿಕಾರಕ್ಕೆ ಬರಲು ಸಾಧ್ಯವಾಯಿತು ಎಂದು ಸಿಪಿಐ(ಎಂ) ಆಪಾದಿಸಿದ್ದು ನಿಮಗೆ ನೆನಪಿರಬಹುದು. ಅದನ್ನೀಗ ಬಿಜೆಪಿ ಮುಖಂಡರೇ ಒಪ್ಪಿಕೊಂಡಿದ್ದಾರೆ.

ಇತ್ತೀಚೆಗೆ ಕೇರಳದ ಬಿಜೆಪಿ ಮುಖಂಡ ದಿವಂಗತ ಕೆ.ಜಿ.ಮಾರಾರ್ ರವರ ಅಧಿಕೃತ ಜೀವನವೃತ್ತಾಂತ ಪ್ರಕಟವಾಗಿದೆ. ಬಿಜೆಪಿಯ ರಾಜ್ಯ ಕಾರ್ಯಕಾರೀ ಸಮಿತಿಯ ಸದಸ್ಯ ಹಾಗೂ 'ಜನ್ಮಭೂಮಿ' ಪತ್ರಿಕೆಯ ಪ್ರಮುಖ ಪತ್ರಕರ್ತ ಕೆ.ಕುಂಞಕಣ್ಣನ್ ಬರೆದ ಈ ಜೀವನ ಚರಿತ್ರೆಯಲ್ಲಿ ಈ ಅಂಶವನ್ನು ಹೇಳಲಾಗಿದೆ. 1991 ರ ಚುನಾವಣೆಯಲ್ಲಿ ಆಯ್ದು ಕೆಲವು ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಪರಸ್ಪರ ಬೆಂಬಲಿಸಲು ಹಾಗೂ ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ 'ಸಮಾನ ಅಭ್ಯರ್ಥಿ'ಗಳನ್ನು ನಿಲ್ಲಿಸಲು ಗುಪ್ತ ಒಪ್ಪಂದವಾಯಿತು. ಇದರಿಂದಾಗಿ 1991 ರಲ್ಲಿ ಯು.ಡಿ.ಎಫ್. ಅಧಿಕಾರಕ್ಕೆ ಬರಲು ಸಾಧ್ಯವಾಯಿತು ಎಂದು ಈ ಪತ್ರಕರ್ತ ಹಾಗೂ ಬಿಜೆಪಿ ಮುಖಂಡ ತಮ್ಮ ಪುಸ್ತಕದಲ್ಲಿ ಒಪ್ಪಿಕೊಂಡಿದ್ದಾರೆ.

ಇಷ್ಟೇ ಅಲ್ಲ ಬಿಜೆಪಿ ಮತ್ತು ಮುಸ್ಲಿಂಲೀಗ್ ನಡುವೆಯೂ ಒಪ್ಪಂದ ನಡೆಯಿತಂತೆ. ಈ ಬಗ್ಗೆ ಕುಂಞಕಣ್ಣನ್ ಹೀಗೆ ಬರೆದಿದ್ದಾರೆ - "ಕೆಲವು ಜನರಿಗೆ ಮೊದಮೊದಲು ಲೀಗ್ ಮತ್ತು ಬಿಜೆಪಿ ಒಟ್ಟು ಸೇರುವ ಸಾಧ್ಯತೆಯ ಬಗ್ಗೆ ಸಂದೇಹವಿತ್ತು. ಆದರೆ ಲೀಗ್ ಮುಖಂಡರು ಬಿಜೆಪಿ ಮುಖಂಡರನ್ನು ಹಲವು ಬಾರಿ ಭೇಟಿಯಾಗಿ ಮೈತ್ರಿಯ ಬಗ್ಗೆ ಚರ್ಚಿಸಿದರು. ಅವರು (ಲೀಗ್‌ನವರು) ಸಹಕರಿಸುವಲ್ಲಿ ಬೇರೆಲ್ಲಾ ಪಕ್ಷಗಳಿಗಿಂತಲೂ ಹೆಚ್ಚಿನ ಕಾತುರ ತೋರಿದರು"!

ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಗುಪ್ತ ಒಪ್ಪಂದದ ಪ್ರಕಾರ ಕೇರಳ ಬಿಜೆಪಿಯ ಹಿರಿಯ ಮುಖಂಡ ಕೆ.ಜಿ. ಮರಾರ್‌ರವರಿಗೆ ಮಂಜೇಶ್ವರ ಕ್ಷೇತ್ರದಲ್ಲಿ ಯು.ಡಿ.ಎಫ್. ಬೆಂಬಲ ನೀಡಬೇಕು, ಅದೇ ರೀತಿ ತಿರುವನಂತಪುರ ಪೂರ್ವ ಕ್ಷೇತ್ರದಲ್ಲಿ ಕೆ.ರಾಮನ್ ಪಿಳ್ಳೆ ಹಾಗೂ ತಿರುವನಂತಪುರ ಲೋಕಸಭಾ ಕ್ಷೇತ್ರಗಳಲ್ಲಿ ಒ.ರಾಜಗೋಪಾಲನ್‌ರನ್ನು ಗೆಲ್ಲಿಸುವಷ್ಟು ಮತಗಳನ್ನು ಯು.ಡಿ.ಎಫ್. ಕೊಡಿಸಬೇಕು, ಅಷ್ಟೇ ಮತಗಳನ್ನು ಬಿಜೆಪಿ ಇತರ ಕ್ಷೇತ್ರಗಳಲ್ಲಿ ಯು.ಡಿ.ಎಫ್. ಅಭ್ಯರ್ಥಿಗಳ ಗೆಲುವಿಗೆ ಕೊಡಿಸಬೇಕು. ಈ ಪ್ರಕಾರ ಕ್ಷೇತ್ರಗಳ ಒಂದು ಪಟ್ಟಿಯನ್ನು ವಿನಿಮಯ ಮಾಡಿಕೊಳ್ಳಲಾಯಿತು. ಆದರೆ ಈ ಮೂರೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋತರು. ಇದರಿಂದ ಕೆ.ಜಿ.ಮರಾರ್ ಬಹಳಷ್ಟು ಕುಪಿತರಾದರಂತೆ. ಕಾಂಗ್ರೆಸ್‌ನ ಒಂದು ವಿಭಾಗ ಈ ಗುಪ್ತ ಒಪ್ಪಂದದ ಪ್ರಕಾರ ನಡೆಯದೆ 'ವಿಶ್ವಾಸಘಾತ' ಮಾಡಿದರು ಎಂಬುದು ಬಿಜೆಪಿ ದೂರು. ಇದರ ನಿಜವಾದ ಅರ್ಥ ಇಷ್ಟೇ - ಅದರ ಸೋಲಿಗೆ ನಿಜವಾದ ಕಾರಣ ಕಾಂಗ್ರೆಸ್ಸಿಗರಲ್ಲಿ ಹಲವರು ಒಂದು ಕೋಮುವಾದಿ ಸಂಘಟನೆಗೆ ಮತ ನೀಡಲು ನಿರಾಕರಿಸಿದರು.

ಈ ಪುಸ್ತಕ ಪ್ರಕಟಣೆ ರಾಜ್ಯ ಬಿಜೆಪಿ ಮುಖಂಡರನ್ನು ಗೊಂದಲದಲ್ಲಿ ಬೀಳಿಸಿದೆ. ಈಗ ಕೇಂದ್ರಮಂತ್ರಿಯೂ ಆಗಿರುವ ಒ.ರಾಜಗೋಪಾಲ್ ತಮ್ಮ ಮುಖಂಡ ಮರಾರ್‌ರ ಸತ್ಯವಚನದಿಂದ ತನಗೆ ಹೆಮ್ಮೆಯೆನಿಸುತ್ತದೆ ಎಂದರೆ, ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯ ಕೆ.ರಾಮನ್ ಪಿಳ್ಳೆ ಈ ಪುಸ್ತಕದ ಮುಂದಿನ ಆವೃತ್ತಿಯಲ್ಲಿ ಈ ಅಂಶಗಳನ್ನು ಕೈಬಿಡಲಾಗುವುದು ಎಂದಿದ್ದಾರೆ. ಬಿಜೆಪಿ ರಾಜ್ಯ ಕಾರ್ಯದರ್ಶಿ ಪಿ.ಪಿ.ಮುಕುಂದನ್ ಈ ವಿವಾದದ ಬಗ್ಗೆ ಟಿಪ್ಪಣಿ ಮಾಡಲು ಕೂಡಾ ಹಿಂಜರಿದಿದ್ದಾರೆ. ಇದು ಬಿಜೆಪಿಯ ಕಾಂಗ್ರೆಸ್-ವಿರೋಧದ ಪರಿ!

ಕೋಮುವಾದಿ ಶಕ್ತಿಗಳ ವಿರುದ್ಧ ಜನಗಳ ಸಂಘಟನೆ

ಪಶ್ಚಿಮ ಬಂಗಾಳ ಸಿಪಿಐ(ಎಂ) ನಿರ್ಧಾರ

ಅಕ್ಟೋಬರ್ 14 ರಂದು ಸಭೆ ಸೇರಿದ ಸಿಪಿಐ(ಎಂ)ನ ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಹೊಸದಾಗಿ ಅಧಿಕಾರದ ಪ್ರತಿಜ್ಞೆ ಸ್ವೀಕರಿಸಿದ ಬಿಜೆಪಿ ನೇತೃತ್ವದ ಸರಕಾರ ಆಗಲೇ ತೋರಲಾರಂಭಿಸಿರುವ ಪ್ರಜಾಪ್ರಭುತ್ವ-ವಿರೋಧಿ ಪ್ರವೃತ್ತಿಗಳ ವಿರುದ್ಧ ಜನಗಳನ್ನು ಸಂಘಟಿಸಲು ನಿರ್ಧರಿಸಿದೆ. ಏನೇ ಬರಲಿ, ದೇಶದ ಪ್ರಜಾಪ್ರಭುತ್ವ ಹಂದರದ ಮೇಲೆ ಬರಲಿರುವ ಧಾಳಿಯನ್ನು ಎದುರಿಸಬೇಕು ಎಂದು ಸಭೆ ನಿರ್ಧರಿಸಿತು.

ನಂತರ ಒಂದು ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡುತ್ತಾ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್‌ರವರು ಲೋಕಸಭಾ ಚುನಾವಣೆಗಳ ಫಲಿತಾಂಶಗಳ ಬಗ್ಗೆ ತೀವ್ರ ಹಾಗೂ ವ್ಯಾಪಕ ವಿಮರ್ಶೆ ನಡೆಸಬೇಕು ಎಂದರು.

ಶೈಲೆನ್ ದಾಸ್‌ಗುಪ್ತಾರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ರಾಷ್ಟ್ರೀಯ ಮಟ್ಟದಲ್ಲಿ ಒಂದು ಪರ್ಯಾಯ ರಾಜಕೀಯ ರಚನೆಯನ್ನು ರೂಪಿಸುವಲ್ಲಿನ ವಿಫಲತೆಯ ಪೂರ್ಣ ಪ್ರಯೋಜನ ಪಡೆದಿದೆ ಎಂದು ಗಮನಿಸಿತು. ಚುನಾವಣೆಗಳ ಮೊದಲು ಎರಡು ತಿಂಗಳ ಅವಧಿಯಲ್ಲಿ ಬಿಜೆಪಿ ನೇತೃತ್ವದ ಸರಕಾರದ ಜನ-ವಿರೋಧಿ ಮುಖವನ್ನು ಜನರೆದುರು ತೆರೆದಿಡುವುದು ನಮಗೆ ಸಾಧ್ಯವಾಗಲಿಲ್ಲ ಎಂದು ಒಪ್ಪಿಕೊಳ್ಳಬೇಕಾಗುತ್ತದೆ ಎಂದು ಗಮನಿಸಿದ ಸಭೆ ಕಾರ್ಗಿಲ್ ಪ್ರಶ್ನೆಯ ಮೇಲೆ ಭಾವೋದ್ವೇಗ ಎಬ್ಬಿಸಲು ಕೂಡಾ ಬಿಜೆಪಿ ಪ್ರಯತ್ನಿಸಿತು ಎಂದಿತು.

ಅಖಿಲ ಭಾರತ ಮಟ್ಟದಲ್ಲಿ ಮೂರನೇ ರಂಗವನ್ನು ಉಚಿತವಾಗಿ ಪ್ರತಿನಿಧಿಸುವಲ್ಲಿನ ವಿಫಲತೆಯಿಂದಾಗಿ ಬಿಜೆಪಿಗೆ ಹೆಚ್ಚಿನ ಸೀಟುಗಳು ಹೋಗುವಂತಾಯಿತು. ಅಲ್ಲದೆ ಮಾಧ್ಯಮದ ಬಹು ದೊಡ್ಡ ವಿಭಾಗ ಕೂಡಾ ನವದೆಹಲಿಯಲ್ಲಿ ಅಧಿಕಾರ ಪಡೆಯಲು ಬಿಜೆಪಿ ಕೂಟ ಮಾತ್ರವೇ ಅರ್ಹ ಎಂದು ಪ್ರಚಾರ ನಡೆಸಿತು. ಜತೆಗೆ ಚುನಾವಣೆ ಸಮೀಪಿಸುತ್ತಿದ್ದಂತೆ ಎಡ ಪಕ್ಷಗಳ ಮೇಲೆ, ಅದರಲ್ಲೂ ಸಿಪಿಐ(ಎಂ) ಮೇಲೆ ಸುಳ್ಳು ಪ್ರಚಾರಕ್ಕಿಳಿಯಿತು.

ನಜ್ಜುಗುಜ್ಜಾಗಿರುವ ಕಾಂಗ್ರೆಸ್ ಬೇರೆಡೆಗಳಂತೆ ಪಶ್ಚಿಮ ಬಂಗಾಳದಲ್ಲೂ ಕೋಮುವಾದಿ ಮತ್ತು ಪ್ರಜಾಪ್ರಭುತ್ವ-ವಿರೋಧಿ ಶಕ್ತಿಗಳನ್ನು ಎದುರಿಸುವಲ್ಲಿ ಪರಿಣಾಮಕಾರಿ ರಾಜಕೀಯ ಪಾತ್ರ ವಹಿಸುವಲ್ಲಿ ಸೋತಿತು. ತಮ್ಮ ಜನ-ವಿರೋಧಿ ಪರಂಪರೆಯನ್ನು ಬಿಡದೆ ಏಕಪಕ್ಷ ಸರಕಾರ ರಚಿಸುವ ಬೇಜವಾಬ್ದಾರಿ ಹಾಗೂ ಈಡೇರಿಸಲಾಗದ ಘೋಷಣೆಗೇ ಅಂಟಿಕೊಂಡಿತು. ಇದೊಂದು ಮುಟ್ಟಲಾಗದ ಗುರಿಯೆಂಬುದು ಅದರ ಸಂಖ್ಯಾಬಲದಲ್ಲಿ ತೀವ್ರ ಇಳಿಕೆಯಿಂದ ಸ್ಪಷ್ಟವಾಗುತ್ತದೆ ಎಂದು ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ನಿಜ, ಪಶ್ಚಿಮ ಬಂಗಾಳದಲ್ಲಿ ನಮ್ಮ ಮತಗಳಿಕೆ ಇಳಿದಿದೆ. ಆದರೆ ಇಲ್ಲಿ ಸಿಪಿಐ(ಎಂ) ಹಲವು ಶತ್ರುಗಳ ವಿರುದ್ಧ ಹೋರಾಡಬೇಕಾಗಿತ್ತು ಎಂಬುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಎಡರಂಗ ಸಾಧನೆಯನ್ನು ಹೀಗಳೆಯುವುದು ಸರಿಯಲ್ಲ ಎಂದು ಅನಿಲ್ ಬಿಸ್ವಾಸ್ ಐಎನ್‌ಎಸ್ ನೊಂದಿಗೆ ಮಾತನಾಡುತ್ತಾ ಹೇಳಿದರು.

ಇಂತಹ ಸಂದರ್ಭದಲ್ಲಿ ಜನಗಳ ನಡುವೆ ಹೋಗಿ ರಾಜಕೀಯ ಪ್ರಚಾರ ಕಾರ್ಯ ನಡೆಸಬೇಕಾಗಿದೆ ಎಂದು ಅವರು ಹೇಳಿದರು. ಎಲ್ಲಾ ಜಿಲ್ಲಾ ಸಮಿತಿಗಳು ಈ ಬಗ್ಗೆ ವಿಮರ್ಶೆ ನಡೆಸುತ್ತಿದ್ದು ಅಕ್ಟೋಬರ್ 31-ನವೆಂಬರ್ 1 ರಂದು ನಡೆಯುವ ರಾಜ್ಯ ಸಮಿತಿಯ ಸಭೆ ಈ ಬಗ್ಗೆ ಆಮೂಲಾಗ್ರ ಚರ್ಚೆ ನಡೆಸಲಿದೆ ಎಂದು ಅನಿಲ್ ಬಿಸ್ವಾಸ್ ಹೇಳಿದರು.

(ಐಎನ್‌ಎಸ್)

ಮಹಾರಾಷ್ಟ್ರದಲ್ಲಿ ಜಾತ್ಯಾತೀತ ಸರಕಾರ

ಕಾಂಗ್ರೆಸ್ ಇಬ್ಭಾಗವಾದ್ದರಿಂದಾದರೂ, ತಾವು ಮಹಾರಾಷ್ಟ್ರದಲ್ಲಿ ಮತ್ತೆ ಅಧಿಕಾರ ಪಡೆಯಬಹುದು ಎಂಬ ಶಿವಸೇನಾ-ಬಿಜೆಪಿ ಕೋಮುವಾದಿ ಕೂಟದ ಕನಸು ಕೊನೆಗೂ ಈಡೇರಲಿಲ್ಲ. ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್, ಎನ್.ಸಿ.ಪಿ. ಗೆ ಬಲವಾದ ಏಟು ನೀಡಿದ ಮಹಾರಾಷ್ಟ್ರದ ಮತದಾರರು ತಮ್ಮ ರಾಜ್ಯದಲ್ಲಿ ಶಿವಸೇನೆ-ಬಿಜೆಪಿ ಕೂಟಕ್ಕೆ ಬಹುಮತ ನೀಡಲು ನಿರಾಕರಿಸಿದ್ದಾರೆ. ಈ ಕೂಟದ ದುರಾಡಳಿತದಿಂದ ಜನ ಎಷ್ಟು ಬೇಸತ್ತುಹೋಗಿದ್ದರು ಎಂಬುದನ್ನು ಇದು ತೋರಿಸುತ್ತದೆ. ಬಹಳಷ್ಟು ಕಿತ್ತಾಟ-ಜಗ್ಗಾಟಗಳ ನಂತರ ಕಾಂಗ್ರೆಸ್‌ನ ವಿನಾಯಕ ರಾವ್ ದೇಶಮುಖ್ ಮುಖ್ಯಮಂತ್ರಿಯಾಗಿ, ಎನ್‌ಸಿಪಿ ಯ ಭಗುತ್ ಭಜ್ಬಾತ್ ಉಪಮುಖ್ಯಮಂತ್ರಿ ಯಾಗಿರುವ ಹೊಸ ಜಾತ್ಯಾತೀತ ಮಂತ್ರಿಮಂಡಳ ಅಧಿಕಾರ ಸ್ವೀಕರಿಸಿದೆ.

1998ರ ಲೋಕಸಭಾ ಚುನಾವಣೆಗಳಲ್ಲಿ 48 ರಲ್ಲಿ ಕೇವಲ 10 ಸ್ಥಾನಗಳಿಸಿದ್ದ ಈ ಕೂಟ ಈ ಬಾರಿ 28 ಸ್ಥಾನಗಳನ್ನು (ಶಿವಸೇನಾ-15, ಬಿಜೆಪಿ-13) ಗೆಲ್ಲಲು ಶರದ್ ಪವಾರ್‌ರವರ ಬಂಡಾಯ ಅವಕಾಶ ಮಾಡಿಕೊಟ್ಟಿತು. ಕಾಂಗ್ರೆಸ್‌ನ ಬಲ 33 ರಿಂದ 10 ಕ್ಕಿಳಿಯಿತು. (ಅವರೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಆರ್.ಪಿ.ಐ. ಬಣ ಒಂದು ಸ್ಥಾನ ಪಡೆದಿದೆ) ಶರದ್ ಪವಾರ್ ಏನೇ ಅರ್ಭಟ ನಡೆಸಿದರೂ ಎನ್.ಸಿ.ಪಿ. ಗೆ ದೊರೆತ ಸ್ಥಾನ ಕೇವಲ 7. ಅದರೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಆರ್.ಪಿ.ಐ. ಬಣ, ಜನತಾದಳ (ಎಸ್) ಮತ್ತು ಪಿ.ಡಬ್ಲ್ಯು.ಪಿ. ತಲಾ ಒಂದೊಂದು ಸ್ಥಾನ ಗಳಿಸಿದವು. ಈ ಮೂಲಕ ಶರದ್ ಪವಾರ್ ಎತ್ತಿದ 'ವಿದೇಶಿ ಮೂಲ'ದ ಅರ್ಥಹೀನ ತಕರಾರು ಕೇಂದ್ರದಲ್ಲಿ ವಾಜಪೇಯಿ ಸರಕಾರ ಮತ್ತೆ ಅಧಿಕಾರಕ್ಕೆ ಬರಲು ಅವಕಾಶ ಮಾಡಿಕೊಟ್ಟಿತು.

ಜನರ ನಿರಾಕರಣೆ

ಆದರೆ ರಾಜ್ಯದಲ್ಲಿ ಮಾತ್ರ ಈ ಕೂಟಕ್ಕೆ ಅಧಿಕಾರ ನೀಡಲು ಜನ ಸುತಾರಾಂ ಒಪ್ಪಿಲ್ಲ. ಶರದ್ ಪವಾರ್ ಬಂಡಾಯದ ಪ್ರಯೋಜನ ಪಡೆಯಲು ವಿಧಾನಸಭಾ ಚುನಾವಣೆಗಳನ್ನು ಅವಧಿಗಿಂತ ಮೊದಲೇ ನಡೆಸುವ ಈ ಕೋಮುವಾದಿ ಕೂಟದ ಹುನ್ನಾರ ಈಡೇರಲಿಲ್ಲ. ಹಿಂದಿನ ವಿಧಾನಸಭೆಯಲ್ಲಿ 138 ಸ್ಥಾನಗಳನ್ನು ಪಡೆದು ಪಕ್ಷೇತರರಿಗೆ ಹಲವು ಹುದ್ದೆಗಳ ಆಮಿಷ ತೋರಿಸಿ ಈ ಕೂಟ ಸರಕಾರ ರಚಿಸಿತ್ತು. ಕಾಂಗ್ರೆಸ್ಸಿಗೆ 80 ಸ್ಥಾನಗಳು ದೊರಕಿದ್ದವು. ಆದರೆ ಈ ಬಾರಿ ವಿಭಜನೆಯ ನಂತರವೂ ಕಾಂಗ್ರೆಸ್‌ಗೆ 75, ಎನ್.ಸಿ.ಪಿ. ಗೆ 58 ಸ್ಥಾನಗಳು ದೊರೆತವು. ಶಿವಸೇನೆಗೆ 69, ಬಿಜೆಪಿಗೆ 56 ಸ್ಥಾನಗಳು ದೊರೆತವು. ಕಾಂಗ್ರೆಸ್ ಎಲ್ಲಕ್ಕಿಂತ ದೊಡ್ಡ ಪಕ್ಷವಾಗಿ ಹೊಮ್ಮಿಬಂತು. ಬಹುಶಃ ಕಾಂಗ್ರೆಸ್ ವಿಭಜನೆಯಾಗಿರದಿದ್ದರೆ ಕೋಮುವಾದಿ ಕೂಟಕ್ಕೆ ತನ್ನ ಕಳೆದ ಬಾರಿಯ 10 ಸ್ಥಾನಗಳನ್ನು ಉಳಿಸಿಕೊಳ್ಳಲಾಗುತ್ತಿರಲಿಲ್ಲ. ವಿಧಾನಸಭೆಯಲ್ಲಿ ಈ ಕೂಟದ ಬಲ ಬಹುಶಃ 50ಕ್ಕೆ ಇಳಿಯುತ್ತಿತ್ತು. ಏಕೆಂದರೆ ಅದರ ಪಾಲಿಗೆ ಮತಗಳು 42% ರಿಂದ 36% ಕ್ಕಿಳಿದವು. ಕಳೆದ ಬಾರಿಯಂತೆ ಪಕ್ಷೇತರರನ್ನು ಹೊಂಚಿಕೊಂಡು ಸರಕಾರ ರಚಿಸುವ ಸಾಧ್ಯತೆಯೂ ಈ ಬಾರಿ ಇಲ್ಲದ ಸಂದರ್ಭದಲ್ಲೂ ಈ ಕೂಟ ಸರಕಾರ ರಚಿಸಲು ಶತಪ್ರಯತ್ನ ಪಟ್ಟಿತು. ಅದು ಫಲಿಸಲಿಲ್ಲ. ಬಿಜೆಪಿ ಮುಖಂಡರು ಬೇರೆಡೆ ನಡೆಸಿದ ತಮ್ಮ ತಂತ್ರಗಳನ್ನು ಪ್ರಯೋಗಿಸಿ ಎನ್.ಸಿ.ಪಿ.ಯನ್ನು ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಬಹುದೇನೋ ಎಂಬ ಸಂದೇಹ ಒಂದು ಹಂತದಲ್ಲಿ ಮೂಡಿದ್ದರೂ ಅಡ್ವಾಣಿ-ಪವಾರ್ ಮಾತುಕತೆಯ ಸುದ್ದಿ ಹರಡಿದ್ದರೂ ಸಹಜವಾಗಿಯೇ ಆ ತಂತ್ರ ಫಲಿಸಲಿಲ್ಲ. ಈ ನಡುವೆ ಕೋಮುವಾದಿ ಕೂಟದೊಳಗೇ ಜಗ್ಗಾಟ ನಡೆಯಿತು. ಸರಕಾರ ರಚಿಸುವ ಸಾಧ್ಯತೆಯ ಬಗ್ಗೆಯೇ ಸಂದೇಹವಿದ್ದರೂ ಕಳೆದ ಬಾರಿಯ ಉಪಮುಖ್ಯಮಂತ್ರಿ ಬಿಜೆಪಿಯ ಗೋಪಿನಾಥ್ ಮುಂಡೆಯವರು ಮುಖ್ಯಮಂತ್ರಿಯಾಗ ಬೇಕೆಂಬ ಪ್ರಯತ್ನವೂ ನಡೆಯಿತು.

ಇತ್ತ ಕಾಂಗ್ರೆಸ್ ಎನ್.ಸಿ.ಪಿ.ಗಳ ನಡುವೆಯೂ ಜಗ್ಗಾಟ ನಡೆಯಿತು. ತಮ್ಮ ಭಿನ್ನಾಭಿಪ್ರಾಯಗಳನ್ನು, ಒಣ ಪ್ರತಿಷ್ಠೆಗಳನ್ನು ಬದಿಗಿಟ್ಟು ಜಾತ್ಯಾತೀತ ಸರಕಾರ ರಚಿಸಿ, ಇಲ್ಲವಾದರೆ ಕೋಮುವಾದಿ ಕೂಟಕ್ಕೆ ಮತ್ತೆ ಅಧಿಕಾರ ಕಸಿಯಲು ಅವಕಾಶ ಮಾಡಿಕೊಟ್ಟರೆ ಮಹಾರಾಷ್ಟ್ರದ ಜನತೆ ನಿಮ್ಮನ್ನು ಕ್ಷಮಿಸುವುದಿಲ್ಲ ಎಂದು ಸಿಪಿಐ(ಎಂ) ಮತ್ತು ಇತರ ಜಾತ್ಯಾತೀತ ಪಕ್ಷಗಳು ಎಚ್ಚರಿಸಿದವು. ಕೊನೆಗೂ ಅತಿ ಹೆಚ್ಚು ಸೀಟು ಪಡೆದ ಕಾಂಗ್ರೆಸ್‌ನವರು ಮುಖ್ಯಮಂತ್ರಿಯಾಗಬೇಕು ಎಂದು ಎನ್.ಸಿ.ಪಿ., ಎನ್.ಸಿ.ಪಿ.ಯವರು ಉಪಮುಖ್ಯಮಂತ್ರಿಯಾಗಬೇಕು ಎಂಬುದನ್ನು ಕಾಂಗ್ರೆಸ್ ಒಪ್ಪಿಕೊಂಡವು.

ಮೂರನೇ ರಂಗ

ಮೂರನೇ ರಂಗಕ್ಕೆ ಸೇರಿದವು ಎಂದು ವರ್ಣಿಸಬಹುದಾದ ಪಕ್ಷಗಳಿಗೆ ಈ ಚುನಾವಣೆಗಳಲ್ಲಿ ಭಾರಿ ಸೋಲು ಬಂದಿದೆ. ಇವಕ್ಕೆ ಕಾರಣ ಈ ಚುನಾವಣೆಗಳಲ್ಲಿ ಇದ್ದ ಮುಖ್ಯ ಪ್ರಶ್ನೆಯೆಂದರೆ ಕಾಂಗ್ರೆಸ್‌ನ ವಿಭಜನೆಯಿಂದ ಕೋಮುವಾದಿ ಕೂಟ ಮತ್ತೆ ಅಧಿಕಾರ ಗಳಿಸುತ್ತದೆಯೇ ಎಂಬುದು. ಜನ ಈ ಕೂಟಕ್ಕೆ ಮತ್ತೆ ಅಧಿಕಾರ ಕೊಡಬಾರದು ಎಂದು ನಿರ್ಧರಿಸಿದಂತಿತ್ತು. ಇದರಿಂದ ಮತಗಳು ಈ ಕೂಟದ ಪರ ಮತ್ತು ವಿರುದ್ಧವಾಗಿ ಧ್ರುವೀಕರಣಗೊಂಡವು. ಇದರಿಂದಾಗಿ ಸಣ್ಣ ಪಕ್ಷಗಳು ಮೂಲೆಗುಂಪಾದವು. ಜನತಾದಳ (ಎಸ್)ನ ಪಾಲು 11 ರಿಂದ 2 ಕ್ಕೆ ಇಳಿಯಿತು. ಪಿ.ಡಬ್ಲ್ಯು.ಪಿ.-6 ರಿಂದ 5ಕ್ಕೆ, ಸಮಾಜವಾದಿ ಪಕ್ಷದ್ದು 4 ರಿಂದ 2 ಕ್ಕೆ ಹಾಗೂ ಸಿಪಿಐ(ಎಂ) ನ ಸೀಟುಗಳು 3 ರಿಂದ 2 ಕ್ಕೆ ಇಳಿದವು. ಜನತಾದಳ, ಸಮಾಜವಾದಿ ಪಕ್ಷ ಮತ್ತು ಪಿ.ಡಬ್ಲ್ಯು.ಪಿ. ಪಕ್ಷಗಳು ಶರದ್ ಪವಾರರ ಎನ.ಸಿ.ಪಿ. ಯೊಂದಿಗೆ ಮೈತ್ರಿ ಮಾಡಿಕೊಂಡಿದ್ದವು. ರಿಪಬ್ಲಿಕನ್ ಪಾರ್ಟಿಯ ಒಂದು ಬಣವೂ ಎನ್.ಸಿ.ಪಿ.ಯೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಅದಕ್ಕೆ 3 ಸ್ಥಾನಗಳು ದೊರೆತಿವೆ. ಎನ್.ಸಿ.ಪಿ. ಯೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಇನ್ನೊಂದು ಪಕ್ಷ ಶರದ್ ಜೋಶಿಯ ನೇತೃತ್ವದ ಸ್ವಾತಂತ್ರ್ಯ ಭಾರತ್ ಪಾರ್ಟಿಗೆ ಒಂದೂ ಸ್ಥಾನವೂ ದೊರೆತಿಲ್ಲ. ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದ ರಿಪಬ್ಲಿಕನ್ ಪಕ್ಷದ ಮತ್ತೊಂದು ಬಣ 3 ಸ್ಥಾನಗಳನ್ನು ಪಡೆದಿದೆ. ಹೀಗೆ ಮೂರನೇ ರಂಗ ಎನ್ನಬಹುದಾದ ಪಕ್ಷಗಳಿಗೆ ಒಟ್ಟು 17 ಸ್ಥಾನಗಳಷ್ಟೇ ದೊರೆತಿವೆ. ಆದರೆ ಈಗ ಈ ಪಕ್ಷಗಳ ಬೆಂಬಲದಿಂದ ಅಲ್ಲಿ ಜಾತ್ಯಾತೀತ ಸರಕಾರವೊಂದು ಅಧಿಕಾರಕ್ಕೆ ಬಂದಿದೆ.

ಬಾಳಾಠಾಕ್ರೆ ಬೆದರಿಕೆ

ಈ ಚುನಾವಣೆಗಳಲ್ಲಿ ಶ್ರೀಕೃಷ್ಣ ಆಯೋಗದ ವರದಿಯ ಜಾರಿ ಒಂದು ಪ್ರಮುಖ ಪ್ರಶ್ನೆಯಾಗಿತ್ತು. ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಎನ್.ಸಿ.ಪಿ. ಗಳೆರಡೂ ಈ ಬಗ್ಗೆ ಭರವಸೆ ನೀಡಿವೆ. ಇದೀಗ ಅದನ್ನು ಪಾಲಿಸಬೇಕಾದ ಒತ್ತಡವಿದೆ. ಶಿವಸೇನೆಯ ಪ್ರಮುಖರು ಇದರಿಂದ ಭಯಭೀತರಾದ್ದರಿಂದಲೇ ಬಾಳಾಠಾಕ್ರೆ ಹೇಗಾದರೂ ತಮ್ಮ ಸರಕಾರ ರಚಿಸಲು ಹೆಣಗಿದರು. ತನ್ನ ವಿಜಯದಶಮಿಯ ದಿನದ ಭಾಷಣದಲ್ಲೂ ಇನ್ನೂ ಕೂಡಾ ಹೇಗಾದರೂ ತಮ್ಮ ಕೂಟದ ಸರಕಾರ ಬರುವುದಾಗಿ ಹೇಳಿರುವುದಲ್ಲದೆ. ಶ್ರೀಕೃಷ್ಣ ಆಯೋಗದ ವರದಿಯನ್ನು ಜಾರಿಗೆ ತಂದರೆ ಗಲಭೆಯಾದೀತು ಎಂದು ಹೆದರಿಸಿದ್ದಾರೆ. ಬಿಜೆಪಿ ಮುಖಂಡರೂ ಇವಕ್ಕೆಲ್ಲಾ ದನಿಗೂಡಿಸಿದ್ದಾರೆ. ಆದರೆ ಮಹಾರಾಷ್ಟ್ರದ ಮತದಾರನ ತೀರ್ಪು ಸ್ಪಷ್ಟವಾಗಿ ತದ್ವಿರುದ್ಧವಾಗಿದ್ದು ಕಾಂಗ್ರೆಸ್-ಎನ್‌ಸಿಪಿ ಸರ್ಕಾರ ತನ್ನ ವಚನ ಈಡೇರಿಸುತ್ತದೆ ಎಂದು ನಿರೀಕ್ಷಿಸುತ್ತಿದ್ದಾರೆ.

ತ್ರಿಪುರಾ : ಇನ್ನಷ್ಟು ಅಂಕಿ ಅಂಶಗಳು

ಸಿಪಿಐ(ಎಂ) ಇಲ್ಲಿ ಎರಡೂ ಸ್ಥಾನಗಳಲ್ಲಿ 50% ಕ್ಕಿಂತಲೂ ಹೆಚ್ಚು ಮತಗಳಿಸಿ ಗೆದ್ದಿರುವ ಮಾಹಿತಿ ನಿಮಗೆ ಈಗಾಗಲೇ ತಿಳಿದಿದೆ. ಇನ್ನೂ ಕೆಲವು ಅಂಕಿ-ಅಂಶಗಳು

ಒಟ್ಟು ಮತದಾನ	68%
ಸಿಪಿಐ(ಎಂ) ಪಡೆದ ಮತಗಳು	56%
ಕಾಂಗ್ರೆಸ್	14%
ತೃಣಮೂಲ-ಬಿಜೆಪಿ-ಟಿ.ಯು.ಜೆ.ಎಸ್.	27.5%
ಅಸೆಂಬ್ಲಿ ಕ್ಷೇತ್ರವಾರು ವಿಂಗಡಣೆ	
ಒಟ್ಟು ಅಸೆಂಬ್ಲಿ ವಿಭಾಗಗಳು	60
ಎಡರಂಗ 60% ಕ್ಕಿಂತ ಹೆಚ್ಚು ಮತ ಪಡೆದ ಭಾಗಗಳು	22
50-60 ಶೇ ಮತ ಪಡೆದ ವಿಭಾಗಗಳು	22
50% ಕ್ಕಿಂತ ಕಮ್ಮಿ ಪಡೆದ ವಿಭಾಗಗಳ	16
ಬಿಜೆಪಿ-ತೃಣಮೂಲ-ಟಿಯುಜೆಎಸ್ ಮುನ್ನಡೆ ವಿಭಾಗಗಳು	3

1998 ರಲ್ಲಿ ನಡೆದ ವಿಧಾನ ಸಭಾ ಚುನಾವಣೆಗಳಲ್ಲಿ ಎಡರಂಗ 41 ಸ್ಥಾನಗಳನ್ನು ಪಡೆದಿತ್ತು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು.

ಸಿಪಿಐ(ಎಂ) ಗಳಿಕೆ

ಸಿಪಿಐ(ಎಂ) ಈ ಬಾರಿಯೂ 23 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. 1995 ರಲ್ಲಿ ಚೌಹರ್(ಮೀಸಲು), ಸೋಲಾಪುರ ದಕ್ಷಿಣ ಮತ್ತು ಕಲಮ್ನುರಿ ಸ್ಥಾನಗಳಲ್ಲಿ ಗೆದ್ದಿತು. ಈ ಬಾರಿ ಠಾಣೆ ಜಿಲ್ಲೆಯ ಚೌಹಾರ್‌ನಲ್ಲಿ ಸಿಪಿಐ(ಎಂ) ಮತ್ತೆ ಗೆದ್ದಿದೆ. 1978 ರಿಂದ ಸತತವಾಗಿ ಈ ಸೀಟು ಸಿಪಿಐ(ಎಂ) ಕೈಯಲ್ಲಿದೆ. 1978 ರಿಂದ ಸತತವಾಗಿ ಗೆಲ್ಲುತ್ತಿದ್ದ, ಆದರೆ 1995 ರಲ್ಲಿ ಕಳಕೊಂಡ ನಾಸಿಕ್ ಜಿಲ್ಲೆಯ ಸುರ್ಗಾಣರನ್ನು ಸಿಪಿಐ(ಎಂ) ಈ ಬಾರಿ ಮತ್ತೆ ಗೆದ್ದಿದೆ. ಸೋಲಾಪುರ ಸೀಟು ಉಳಿಯಬಹುದೆಂಬ ನಿರೀಕ್ಷೆ ಇದ್ದರೂ 4500 ಮತಗಳಿಂದ ಅದನ್ನು ಕಳಕೊಂಡಿದೆ.

ಬಿಜೆಪಿ ಕೂಟಕ್ಕೆ ಪಂಜಾಬಿನಲ್ಲಿ ತೀವ್ರ ಹಿನ್ನಡೆ

ಪಂಜಾಬಿನಲ್ಲಿ ಬಿಜೆಪಿಯ ತಂತ್ರಕ್ಕೆ ಭಾರಿ ಧಕ್ಕೆ ಬಂದಂತೆ ಕಾಣುತ್ತಿದೆ. ಹಿಂದೂ ಹಾಗೂ ಸಿಖ್ ಸಂಕುಚಿತವಾದಿಗಳ ಕೂಟ ಕಳೆದ ಬಾರಿ ಯಶಸ್ವಿಯಾಗಿತ್ತು. 1997 ರ ವಿಧಾನಸಭಾ ಚುನಾವಣೆಗಳಲ್ಲಿ ಈ ಕೂಟಕ್ಕೆ 46% ಮತ ದೊರೆತಿತ್ತು; 1998 ರ ಲೋಕಸಭಾ ಚುನಾವಣೆಗಳಲ್ಲಿ 44.6% ಮತ ಪಡೆದು ಭಾರಿ ಗೆಲುವು ಪಡೆದಿತ್ತು. ಆದರೆ ಈ ಬಾರಿ ಕೂಟದ ಮತಗಳಿಕೆ 37.74% ಕ್ಕೆ ಇಳಿದಿದೆ. ಈ ಕೂಟಕ್ಕೆ ಕೇವಲ 2 ಸ್ಥಾನಗಳು ದೊರೆತಿವೆ. ಕಾಂಗ್ರೆಸ್‌ನ ಮತಗಳಿಕೆಯಲ್ಲಿ 4.15% ಹೆಚ್ಚಳವಾಗಿದ್ದು 8 ಸ್ಥಾನಗಳನ್ನು ಪಡೆದಿದೆ. ಕಳೆದ ಬಾರಿ ಒಂದೂ ಸ್ಥಾನ ದೊರೆತಿರಲಿಲ್ಲ. ಈ ಚುನಾವಣೆಗಳಲ್ಲಿ ಬಿಜೆಪಿಯ ಮತಗಳಿಕೆಯಲ್ಲಿ 2.5, ಅಕಾಲಿದಳದ ಮತಗಳಿಕೆಯಲ್ಲಿ 4.43% ಇಳಿಕೆಯಾಗಿದೆ. ಬಿಜೆಪಿಯ ಸ್ಥಾನಗಳ ಸಂಖ್ಯೆಯ 3 ರಿಂದ 1 ಕ್ಕೆ, ಅಕಾಲಿದಳದಲ್ಲಿ 8 ರಿಂದ 2 ಕ್ಕೆ ಇಳಿದಿದೆ.

ಮಧ್ಯಪ್ರದೇಶದಲ್ಲಿ

ಮಧ್ಯಪ್ರದೇಶದಲ್ಲಿ ಲೋಕಸಭಾ ಚುನಾವಣೆಗಳ ಫಲಿತಾಂಶ ತನ್ನ ಈ ಒಂದು ಪ್ರಮುಖ ನೆಲೆಯಲ್ಲೂ ಬಿಜೆಪಿ ಕ್ರಮೇಣ ಹಿನ್ನಡೆ ಪಡೆಯುತ್ತದೆ ಎಂಬುದನ್ನು ತೋರಿಸಿದೆ. ಅದು 40 ರಲ್ಲಿ 29 ಸ್ಥಾನ ಗಳಿಸಿದೆ. ಕಳೆದ ಬಾರಿ 30 ಪಡೆದಿತ್ತು. ಕಾಂಗ್ರೆಸ್ 44% ಮತಗಳಿಸಿದರೂ ಕೇವಲ 11 ಸ್ಥಾನ ಪಡೆಯಲು ಸಾಧ್ಯವಾಗಿದೆ. ಇದು ಕಳೆದ ಬಾರಿಗಿಂತ ಕೇವಲ ಒಂದು ಹೆಚ್ಚು. ಆದರೆ ಮತಗಳಿಕೆಯಲ್ಲಿ 4.5% ಹೆಚ್ಚಳ ಪಡೆದಿದೆ.

ಡಿಸೆಂಬರ್ 1998 ರ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಬಿಜೆಪಿಗಿಂತ 1.26% ಹೆಚ್ಚು ಮತಗಳಿಸಿ ಅಧಿಕಾರಕ್ಕೆ ಬಂದಿತು. ಆದರೆ ಈ ಬಾರಿ ಆ ಹೆಚ್ಚಳ ಉಳಿದಿಲ್ಲ. ಇದಕ್ಕೆ ಕಾರಣ ದಿಗ್ವಿಜಯ್ ಸಿಂಗ್ ಸರಕಾರದ ಕೆಲವು ಜನ-ವಿರೋಧಿ ಕ್ರಮ ಎಂದು ಹೇಳಲಾಗುತ್ತಿದೆ-ಮುಖ್ಯವಾಗಿ ಚುನಾವಣೆಯ ಮೊದಲು ವಿದ್ಯುತ್ ದರ ಹಾಗೂ ನೀರಾವರಿ ದರಗಳನ್ನು ಏರಿಸಿದ್ದನ್ನು ಬಿಜೆಪಿ ಚೆನ್ನಾಗಿ ದುರುಪಯೋಗಪಡಿಸಿಕೊಂಡಿತು.

ಸಿಪಿಐ(ಎಂ) ಇಲ್ಲಿ ಕೇವಲ 11972 ಮತ ಪಡೆಯಿತು. ಸಿಪಿಐ ನ ಮತಗಳಿಕೆಯಲ್ಲಿ ಸುಧಾರಣೆಯಾಗಿದೆ. ಅದು 59000 ಮತ ಗಳಿಸಿದೆ.

ಜಮ್ಮು-ಕಾಶ್ಮೀರದಲ್ಲಿ

ಜಮ್ಮು-ಕಾಶ್ಮೀರದ 6 ಕ್ಷೇತ್ರಗಳಲ್ಲೂ ಮತದಾನ ಬಹಳ ಕಮ್ಮಿಯಾಗಿತ್ತು. ಸಿಪಿಐ(ಎಂ) ಸ್ಪರ್ಧಿಸಿದ್ದ ಅನುತಪನ್-ಪುಬ್ಬಾಗ ಕ್ಷೇತ್ರದಲ್ಲಿ ಕೇವಲ 14% ಮತದಾನ ನಡೆಯಿತು. ಇದರ ಪ್ರಯೋಜನ ಪಡೆದು ನ್ಯಾಶನಲ್ ಕಾನ್ಫರೆನ್ಸ್ ಚುನಾವಣಾ ಅಕ್ರಮ ನಡೆಸಿತು. ಇದರಿಂದ ಜನಗಳಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ ಅಳಿದುಳಿದ ವಿಶ್ವಾಸವೂ ಹ್ರಾಸಗೊಳ್ಳುವಂತಾಗಿದೆ. ಆದರೂ ಗೆದ್ದ ನ್ಯಾಶನಲ್ ಕಾನ್ಫರೆನ್ಸ್ ಅಭ್ಯರ್ಥಿಗೆ ದೊರತಿದ್ದು 38,745 ಮತಗಳು. ಎರಡನೇ ಸ್ಥಾನಪಡೆದ ಮುಫ್ತಿ ಮಹಮ್ಮದ್ ಸೈಯದ್‌ರವರ ಪಿ.ಡಿ.ಪಿ. ಪಕ್ಷಕ್ಕೆ ದೊರೆತ ಮತಗಳು 25,251, ಸಿಪಿಐ(ಎಂ)ಅಭ್ಯರ್ಥಿ ಹಾಗೂ ರಾಜ್ಯ ಕಾರ್ಯದರ್ಶಿ ಮಹಮದ್ ಯೂಸುಫ್ ತರಿಗಾಮಿ 16000 ಮತಗಳನ್ನು ಪಡೆದರು. ಕಾಂಗ್ರೆಸ್ 9221 ಮತ ಪಡೆಯಿತು. ಈ ಕ್ಷೇತ್ರದ ಕುಲ್ಗಾಮ್ ವಿಧಾನಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಗ್ರಸ್ಥಾನದಲ್ಲಿದ್ದರೆ, ಇತರ ನಾಲ್ಕು ವಿಧಾನಸಭಾ ವಿಭಾಗಗಳಲ್ಲಿ ಎರಡನೇ ಸ್ಥಾನ ಪಡೆಯಿತು.

ಬಾಗೇಪಲ್ಲಿ ಚುನಾವಣೆ.........

ಪುಟ 3 ರಿಂದ

ಹಿತಾಸಕ್ತಿಗಳು, ಭ್ರಷ್ಟರು, ಜಾತಿವಾದಿಗಳು ಒಂದಾದರು. ಅವರ ಪ್ರಚಾರ, ಗುರಿ ಒಂದೇ.... ಸಿಪಿಐ(ಎಂ) ಸೋಲಿಸುವುದು.

ಸಿಪಿಐ(ಎಂ)ನ ಜನಬೆಂಬಲ ವಿರೋಧಿಗಳಲ್ಲಿ ನಡುಕ ಹುಟ್ಟಿಸಿತು. ಅಪಾರ ಜನಬೆಂಬಲದೊಂದಿಗೆ ಸಿಪಿಐ(ಎಂ) ಪ್ರಚಾರ ಕಾರ್ಯ ಆರಂಭಿಸಿತು. ಪ್ರತಿ ಗ್ರಾಮ ಪಂಚಾಯತ್‌ನಿಂದ ಸುಮಾರು 200 ರಿಂದ 300 ಕಾರ್ಯಕರ್ತರೊಂದಿಗೆ ಕಾಲ್ನಡಿಗೆ ಜಾಥಾ ಮೂಲಕ ಮನೆ ಮನೆಗೂ ಹೋಗಿ ಮತಯಾಚನೆ ಮಾಡಲಾಯಿತು. ಕಾರ್ಯಕರ್ತರು ಹಳ್ಳಿಹಳ್ಳಿಗಳಲ್ಲಿ, ನಗರದಲ್ಲಿ ಅತ್ಯಂತ ಉತ್ಸಾಹದಿಂದ ಪ್ರಚಾರದಲ್ಲಿ ತೊಡಗಿದ್ದರು. ಜನರೂ ಸಹ ಶಾಸಕರಾಗಿ ಜಿ.ವಿ.ಎಸ್. ಕೈಗೊಂಡ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನೆನಪಿಸಿಕೊಳ್ಳುತ್ತಿದ್ದರು.

ಆದರೆ ಇನ್ನೂ ಕೆಲವರು "ನಮ್ಮ ಜಾತೀಯವರೇ ನಿಂತಿದ್ದಾರಲ್ಲಪ್ಪಾ" ಎಂದರೆ, "ರೆಡ್ಡಿ ಸಂಘದ ಬಗ್ಗೆ ಶ್ರೀರಾಮರೆಡ್ಡಿಗೆ ಕಾಳಜಿ ಇಲ್ಲಾರಿ" ಎಂದವರು ಹಲವರು.... ಈ ಅವಧಿಯಲ್ಲೇ ಆರಂಭಗೊಂಡ ಪಾಲಿಟೆಕ್ನಿಕ್ ಕಾಲೇಜ್, ಬಸ್ ಡಿಪೋ, ವಿದ್ಯುತ್ ವಿತರಣಾ ಕೇಂದ್ರ, ಸುಸಜ್ಜಿತ ಆಸ್ಪತ್ರೆ, ಹಾಸ್ಟೆಲ್, ನೀರು, ನೀರಾವರಿ ವ್ಯವಸ್ಥೆಗಳು ಎಲ್ಲಾ ಜಾತೀಯ ಜನರಿಗೂ ಪ್ರಯೋಜನಕಾರಿಯಲ್ಲವೇ ಎಂದು ಮರು ಉತ್ತರ ಹೇಳುತ್ತಿದ್ದದ್ದೂ ಕಂಡುಬಂತು.

ಚುನಾವಣೆಯ ಪ್ರಚಾರದ ಉತ್ತುಂಗ ಎಂಬಂತೆ ಸೆಪ್ಟೆಂಬರ್ 30 ರಂದು ನಡೆದ ಭಾರಿ ಮೆರವಣಿಗೆ, ಬಹಿರಂಗ ಸಭೆಯಲ್ಲಿ 15 ಸಾವಿರಕ್ಕೂ ಅಧಿಕ ಜನತೆ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸಿದ್ದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ಸೂರಿಯವರು, ಮಾಜಿ ಪ್ರಧಾನಿ ದೇವೇಗೌಡ, ಸಿ.ಎಂ.ಇಬ್ರಾಹಿಂ, ಸಿದ್ಧರಾಮಯ್ಯನವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಹೀಗೆ ಉಕ್ಕಿ ಹರಿದ ಜನತೆಯ ಪ್ರತಿಕ್ರಿಯೆಯಿಂದ ಕಂಗಾಲಾದ ಇತರ ಪಕ್ಷಗಳು ವಿರೋಧಿ ನಾಯಕರು ತರಾತುರಿಯಿಂದ ಹೊಸ ಕುತಂತ್ರಗಳನ್ನು ಅಂದಿನ ರಾತ್ರಿಯೇ ಹೆಣೆದರು. ಏನೇ ಆಗಲೀ ಸಿಪಿಐ(ಎಂ) ಸೋಲಬೇಕು ಎಂದು ಹೊಂದಾಣಿಕೆ, ಮರು ಹೊಂದಾಣಿಕೆ ಮಾಡಿಕೊಂಡು ಹಣ ಹಂಚಿಕೊಂಡರು. ಜಾತಿ ಲೆಕ್ಕಾಚಾರದಲ್ಲಿ ಸ್ವಲ್ಪ ಹೆಚ್ಚಿಗೆ ಮತ ಪಡೆಯಬಹುದಾಗಿದ್ದ ಸಂಪಂಗಿಗೆ ತಮ್ಮ ಮತಗಳನ್ನು ತಿರುಗಿಸಿದರು. ವಿವಿಧ ಜಾತಿಯ ಸಂಘಗಳು, ಮುಖಂಡರು, ಕಮ್ಯುನಿಸ್ಟ್ ವಿರೋಧಿ ವಿದೇಶಿ ಹಣಕಾಸು ನೆರವಿನ ಸ್ವಯಂಸೇವಾ ಸಂಸ್ಥೆ-ಎ.ಡಿ.ಟಿ.ಎಸ್, ಇವರೆಲ್ಲರೂ ಸಿಪಿಐ(ಎಂ) ಸೋಲಿಸಲು ಸಂಪಂಗಿಗೆ ಮತ ಕೊಡಿಸುವಲ್ಲಿ ಮುಂದಾದರು. ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ನಾಗರಾಜ ರೆಡ್ಡಿಯವರ ಮೇಲೆ 28 ಕ್ರಿಮಿನಲ್ ಮೊಕದ್ದಮೆಗಳಿದ್ದು, ಅವುಗಳಲ್ಲಿ ಹೆಚ್ಚಿನವುಗಳು ದಲಿತರ ಮೇಲಿನ ದೌರ್ಜನ್ಯಗಳದ್ದಾಗಿವೆ. ಹೀಗೆ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡದ ಒಂದು ದಲಿತ ವಿಭಾಗದ ಮತಗಳೂ ಬಂಡಾಯ ಕಾಂಗ್ರೆಸ್ ಅಭ್ಯರ್ಥಿ ಸೆಳೆದಿದ್ದಾರೆ. ಈ ನಡುವೆ ಆಂಧ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ರಾಜಶೇಖರ ರೆಡ್ಡಿಯವರನ್ನು ಕರೆಸಿ, ಜಾತಿ ಓಟು ಸೆಳೆಯಲು ಪ್ರಯತ್ನ ನಡೆಯಿತು. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಕೂಟಕ್ಕೆ ಬೆಂಬಲಿಸದೇ ಬಿಜೆಪಿಯು ಸಂಪಂಗಿಗೆ ಮತ ನೀಡುವಂತೆ ನೋಡಿಕೊಂಡಿರುವ ವರದಿಗಳೂ ಇವೆ. ಇದಕ್ಕಾಗಿ ಸುಮಾರು ಆರುಲಕ್ಷ ರೂಪಾಯಿಗಳ ವ್ಯವಹಾರ ನಡೆದಿದೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಸಂಯುಕ್ತ ಜನತಾದಳದ ಜಿಲ್ಲಾ ನಾಯಕರು, ಅಭ್ಯರ್ಥಿಯೂ, ಸಂಪಂಗಿಯೊಂದಿಗೆ ಕೈ ಜೋಡಿಸಿದ್ದಾರೆ. ಸಂಪಂಗಿ ಬೆಂಬಲಿಗರು ಹೆಚ್ಚಿರುವ ಕೆಲವು ಊರುಗಳಲ್ಲಿ ಸತ್ತವರು, ಇಲ್ಲದವರ ಮತಗಳನ್ನು ಅಕ್ರಮವಾಗಿ ಹಾಕಿಸಿಕೊಂಡಿರುವ ದೂರುಗಳು ಇವೆ. (ಇಲ್ಲೆಲ್ಲಾ ಶೇ 95 ಮತದಾನವಾಗಿದೆ) ಹೀಗೆ ಜಾತಿವಾದಿಗಳು, ಭ್ರಷ್ಟರು, ಕಳ್ಳ ವ್ಯಾಪಾರಸ್ಥರು ಸ್ಥಾಪಿತ ಹಿತಾಸಕ್ತಿಗಳು, ಪ್ರಾಮಾಣಿಕವಾಗಿ ಚುನಾವಣೆ ಎದುರಿಸುತ್ತಿದ್ದ ಸಿಪಿಐ(ಎಂ)ನ್ನು ಸೋಲಿಸಿದರು.

ಇಷ್ಟೆಲ್ಲಾವುಗಳ ನಡುವಿನಲ್ಲಿಯೂ ಸಿಪಿಐ(ಎಂ) 36884 ಮತಗಳನ್ನು ಗಳಿಸಿ ತನ್ನ ನೆಲೆಯನ್ನು ಕಾಯ್ದುಕೊಂಡಿದೆ. ಸಂಪಂಗಿ ಮತ್ತು ಜಿ.ವಿ.ಎಸ್. ರವರ ನಡುವಿನ ಅಂತರ ಕೇವಲ 3299. ಈ ಸ್ಥಿತಿಯಲ್ಲಿಯೂ ಜನರ ಮನವನ್ನು ಸಿಪಿಐ(ಎಂ) ಗೆದ್ದಿದೆ. ಮತ್ತೆ ಜನತೆಯ ಹೋರಾಟಗಳೊಂದಿಗೆ ಸಂಘಟನೆಯ ಜಾಲವನ್ನು ಹೊಸ ವಿಭಾಗಗಳೊಂದಿಗೆ ವಿಸ್ತರಿಸಿಕೊಳ್ಳುವ, ಪಕ್ಷದ ಕ್ರಾಂತಿಕಾರಿ ವರ್ಗ ಜಾಗೃತಿಯ ರಾಜಕೀಯವನ್ನು ಮತ್ತೆ ಜನರ ನಡುವೆ ಕೊಂಡೊಯ್ಯಲಿದೆ. ಪಕ್ಷವನ್ನು ಇನ್ನೂ ಬಲಯುತವಾಗಿ ಕಟ್ಟಲಾಗುವುದು. ಸಂಘರ್ಷ ಬೆಳೆದಂತೆ ದುಡಿಯುವ ಜನರ ಮಿತ್ರನಾರು, ಶತ್ರುವಾರು ಎಂಬುದು ಅನುಭವದಿಂದ ಸಾಬೀತಾಗುವುದು. ಬಾಗೇಪಲ್ಲಿಯಲ್ಲಿ ಪಕ್ಷದ ಚಳುವಳಿ ಇಂದು ನಿನ್ನೆಯದಲ್ಲ. ಹಲವು ದಶಕಗಳ ದೀರ್ಘ ಇತಿಹಾಸ, ನೆಲೆ ಪಕ್ಷಕ್ಕಿದೆ. ಎಂತಹ ಸನ್ನಿವೇಶವನ್ನು ಎದುರಿಸಿ ಜನತೆಯ ಹಿತಗಳನ್ನು ರಕ್ಷಿಸಲಾಗುವುದು ಎಂಬ ದೃಢ ವಿಶ್ವಾಸವಿದೆ.

- ವರದಿಗಾರ

ಇಂಡೋನೇಶ್ಯಾದ ಒಲ್ಲದ ಒಂದು ಪ್ರಾಂತ್ಯ ಪುಟ್ಟದ್ವೀಪಗಳ ಸಮೂಹ-ಪೂರ್ವ ತೈಮೂರ್. ಇದು ಈಗ ಜಗತ್ತಿನಲ್ಲಿ ಸುದ್ದಿ ಮಾಡಿದೆ. ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ನಡೆದ ಜನಮತಸಂಗ್ರಹದಲ್ಲಿ ಪೂರ್ವ ತೈಮೂರಿನ ಜನ ಶೇಕಡಾ 80ಕ್ಕಿಂತ ಹೆಚ್ಚು ಸ್ವಾತಂತ್ರವಾಗಲು ಬಯಸಿದ್ದಾರೆ. ಇಂಡೋನೇಶ್ಯದ ಸೈನ್ಯ, ಆಳರಸರು ಮತ್ತು ಅವರ ಭಟ್ಟಂಗಿಗಳು ನರಮೇಧ ಆರಂಭಿಸಿದರು. ವಿಶ್ವಸಂಸ್ಥೆ ಅಲ್ಲಿ ಜನಮತ ಸಂಗ್ರಹದ ಅಭಿಮತ ಜಾರಿ ಮಾಡಲು, ಶಾಂತಿ ತರಲು ವಿಶ್ವಸಂಸ್ಥೆ ಶಾಂತಿಪಾಲನಾ ಪಡೆ ಕಳಿಸಲು ನಿರ್ಧರಿಸಿದೆ. 1975ರಲ್ಲಿ ಪೂರ್ವ ತೈಮೂರ್‌ನ ಸ್ವಾತಂತ್ರ್ಯ ಹರಣಕ್ಕೆ ಕುಮ್ಮಕ್ಕು ನೀಡಿದ ಆಸ್ಟ್ರೇಲಿಯಾ ಈ ಶಾಂತಿಪಾಲನಾ ಪಡೆಯ ನಾಯಕ. ಇದರ ಹಿಂದಿದೆ ಸಾಮ್ರಾಜ್ಯಶಾಹಿಯ ವಿಕಟ ಅಟ್ಟಹಾಸ. ಈ ಗೋಮುಖಿ ವ್ಯಾಘ್ರತನದ ಬಗ್ಗೆ ಪರಿಚಯ.



'ಶಾಂತಿಪಾಲನಾ ಪಡೆ'ಯ ಆಸ್ಟ್ರೇಲಿಯನ್ ಸೈನಿಕರು

ಪೂರ್ವ ತೈಮೂರ್‌ನಲ್ಲಿ ಸಾಮ್ರಾಜ್ಯಶಾಹಿ ಆಟ

25 ವರ್ಷಗಳ ಹಿಂದೆ ಸ್ವಾತಂತ್ರ್ಯ ಹರಣ ಮಾಡಿದವರು ಈಗ ಶಾಂತಿಪಾಲಕರು!


ಅಂದು (1975ರಲ್ಲಿ) ಪೂರ್ವ ತೈಮೊರ್ ಇಂಡೋನೇಶ್ಯಾದ ಪೂರ್ವ ಭಾಗದಲ್ಲಿ ಆಸ್ಟ್ರೇಲಿಯಾ ಉತ್ತರ ಮತ್ತು ಕುರಿಯಾದ ಮುನ್ನೂರು ಕಿ.ಮೀ ಉತ್ತರಕ್ಕಿರುವ ದ್ವೀಪ ಸಮೂಹ. ಸುಮಾರು 8 ಲಕ್ಷ ಜನಸಂಖ್ಯೆ, 1975ರ ವರೆಗೆ ಪೋರ್ಚುಗಲ್‌ನ ವಸಾಹತು ಆಗಿತ್ತು. ಪೋರ್ಚುಗಲ್‌ನ ವಿರುದ್ಧ ಇತರ ಎಲ್ಲಾ ವಸಾಹತುಗಳಂತೆ ಸಶಸ್ತ್ರ ಹೋರಾಟ ನಡೆದಿತ್ತು. ಸ್ವಾತಂತ್ರ್ಯಕ್ಕೆ 1978ರಲ್ಲಿ ಪೋರ್ಚುಗಲ್‌ನ ಸರ್ವಾಧಿಕಾರವನ್ನು ಎಡತುದಿಯ ಮಿಲಿಟರಿ ದಂಗೆ ಉರುಳಿಸಿದಾಗ, ಎಲ್ಲಾ ಪೋರ್ಚುಗಲ್‌ನ ವಸಾಹತುಗಳಿಗೆ ಸ್ವಾತಂತ್ರ್ಯ ಕೊಟ್ಟಿತು. ಅಲ್ಲಿ ಆಗ ಪ್ರಬಲವಾಗಿದ್ದ ಫ್ರೆಟಿಲಿನ್ (ಜನತಾ ವಿಮೋಚನಾ ಚಳುವಳಿ) ನಾಯಕತ್ವದಲ್ಲಿ ದೇಶದ ಸ್ವಾತಂತ್ರ್ಯ ಇನ್ನೇನು ಬಂತು ಎನ್ನುವಷ್ಟರಲ್ಲಿ ಕೈಯಲ್ಲಿದ್ದ ತುತ್ತು ಬಾಯಿಗೆ ಬರಲಿಲ್ಲ ಎನ್ನುವಂತೆ ಪರಿಸ್ಥಿತಿ ಬದಲಾಯಿತು. ಇಂಡೋನೇಶ್ಯಾದ ಸೈನ್ಯ ಪೂರ್ವ ತೈಮೂರ್ ಮೇಲೆ ಆಕ್ರಮಣ ಮಾಡಿ ಅದನ್ನು ಕಬಳಿಸಿತು. ಫ್ರೆಟಿಲಿನ್‌ನ ನಾಯಕತ್ವದಲ್ಲಿ ಪೂರ್ವ ತೈಮೂರಿನ ಜನ ಒಡ್ಡಿದ ಪ್ರತಿರೋಧಕ್ಕೆ ಇಂಡೋನೇಶ್ಯಾದ ಸೈನ್ಯ ಶತಮಾನದ ಅತ್ಯಂತ ಬರ್ಬರ ನರಮೇಧದಿಂದ ಉತ್ತರ ನೀಡಿತು. ಅಂದಿನಿಂದ ಇಂದಿನವರೆಗೆ ಪೂರ್ವತೈಮೂರ್ ಇಂಡೋನೇಸ್ಯಾದ ಮಿಲಿಟರಿ ಬೂಟುಗಳಡಿಯಲ್ಲಿ ನರಳುತ್ತಿದೆ. ಆದರೆ ಪೂರ್ವ ತೈಮೂರಿನ ಸ್ವಾತಂತ್ರ್ಯಪ್ರಿಯ ಜನ ತಮ್ಮ ಹೋರಾಟ ಬಿಟ್ಟುಕೊಟ್ಟಿಲ್ಲ. ಪರಿಣಾಮ : ಕಳೆದ 25 ವರ್ಷಗಳಲ್ಲಿ ಪೂರ್ವ ತೈಮೂರಿನ ಕಾಲುಭಾಗ ಜನ (ಎಂಟು ಲಕ್ಷ ಜನಸಂಖ್ಯೆಯಲ್ಲಿ ಎರಡು ಲಕ್ಷ ಜನ) ತಮ್ಮ ಜೀವದೊಂದಿಗೆ ಈ ಸ್ವಾತಂತ್ರ್ಯಪ್ರಿಯತೆಯ ಬೆಲೆ ತೆರಬೇಕಾಯಿತು. ಎರಡನೇ ಮಹಾಯುದ್ಧದಲ್ಲಿ ಸೋವಿಯತ್ ಒಕ್ಕೂಟದಲ್ಲಿ ನಾಝಿ ದಾಳಿ ಬಿಟ್ಟು ಇಂತಹ ದೊಡ್ಡ ಜನಸಂಖ್ಯೆಯ ಭಾಗದ ಜನರ ಪ್ರಾಣಹರಣವಾದದ್ದಿಲ್ಲ. ಪೂರ್ವ ತೈಮೂರಿನ ಸ್ವಾತಂತ್ರ್ಯ ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿ-ವಿರೋಧಿಗಳ ಸ್ವಾತಂತ್ರ್ಯ ಪ್ರಿಯ ಜನರ ಒಕ್ಕೊರಲಿನ ಕೂಗಾಯಿತು. ಕಳೆದ ಕಾಲು ಶತಮಾನದಲ್ಲಿ.

ಇಂದು (1999ರಲ್ಲಿ)

ಇತ್ತೀಚಿನ ಇಂಡೋನೇಶ್ಯದ ಆರ್ಥಿಕ ರಾಜಕೀಯ ಬಿಕ್ಕಟ್ಟಿನಲ್ಲಿ ಜನರಲ್ ಸುಹಾರ್ತೊರನ ಸರ್ವಾಧಿಕಾರ ನೆಲಕಚ್ಚಿದ ನಂತರ ಪೂರ್ವ ಸುಹಾರ್ತೋ ಸ್ವಾತಂತ್ರ್ಯದ ಬಗ್ಗೆ ಪುನಃ ಆಶಾಭಾವನೆ ಮೂಡಿತು.

ಇಂಡೋನೇಶ್ಯಾದ ಮಿಲಿಟರಿ ಸರ್ವಾಧಿಕಾರದ ಸದ್ದು ಅಡಗಿತು. ಪೂರ್ವತೈಮೂರಿನ ಜನರ ಸ್ವಾತಂತ್ರ್ಯ ಘೋಷಣೆ ಮುಗಿಲು ಮುಟ್ಟಿತು. ವಿಶ್ವಸಂಸ್ಥೆ ಮಧ್ಯಪ್ರವೇಶಿಸಬೇಕಾಯಿತು. ವಿಶ್ವಸಂಸ್ಥೆ ಅಲ್ಲಿ ಜನಮತ ಸಂಗ್ರಹ ನಡೆಸಿ, ಆ ಪ್ರಕಾರ ಮುಂದುವರೆಯಬೇಕೆಂದು ತೀರ್ಮಾನಿಸಿತು. ಈ ಪ್ರಕಾರ ಈ ವರ್ಷ ಆಗಸ್ಟ್ 30ರಂದು ಜನಮತ ಸಂಗ್ರಹ ನಡೆಯಿತು. ತೈಮೂರಿಗಳು ಪೂರ್ಣ ಸ್ವಾತಂತ್ರ್ಯ ಅಥವಾ ಇಂಡೋನೇಶ್ಯಾದ ಒಂದು ಸ್ವಾಯತ್ತ ಪ್ರಾಂತ್ಯ- ಇವೆರಡರ ನಡುವೆ ಆಯ್ಕೆ ಮಾಡಬೇಕಾಗಿತ್ತು. ಜನಮತ ಸಂಗ್ರಹದ ದಿನ ಇಂಡೋನೇಶ್ಯಾದ ಸೈನ್ಯ, ಅವರು ತರಬೇತಿ ನೀಡಿದ ಬಹುಮತ ಸಶಸ್ತ್ರ ಪುಂಡರ ತಂಡದ ಭಯೋತ್ಪಾದನೆ, ಹಿಂಸಾಚಾರ ಧಿಕ್ಕರಿಸಿ ಜನ ಸ್ಪಷ್ಟ ಅಭಿಮತ ನೀಡಿದರು. ಶೇಕಡಾ 80ಕ್ಕಿಂತ ಹೆಚ್ಚು ಜನ ಪೂರ್ಣ ಸ್ವಾತಂತ್ರ್ಯಕ್ಕೆ ಮತ ನೀಡದರು. ಪುನಃ ಸೈನ್ಯದ, ಅವರ ಕುಮ್ಮಕ್ಕಿನ ಸಶಸ್ತ್ರ ಗೂಂಡಾಗಳ ಹಿಂಸಾಚಾರ ಭುಗಿಲೆದ್ದಿತು. ವಿಶ್ವಸಂಸ್ಥೆ ಪೂರ್ವ ತೈಮೂರಿಗೆ ಶಾಂತಿಪಾಲನಾ ಪಡೆ ಕಳಿಸಲು ನಿರ್ಧರಿಸಿತು.

ಜನಮತ ಸಂಗ್ರಹದಂತೆ ತೈಮೂರಿಗೆ ಸ್ವಾತಂತ್ರ್ಯ ತರಲು, ಇಂಡೋನೇಶ್ಯಾ ಸೈನ್ಯವನ್ನು ಅಲ್ಲಿಂದ ತೆರವು ಮಾಡುವುದು ಮತ್ತು ಶಾಂತಿ ಸ್ಥಾಪಿಸುವುದು ಶಾಂತಿ ಪಾಲನಾ ಪಡೆಯ ಕರ್ತವ್ಯ. ಆದರೆ ಈ ವರೆಗಿನ ಎಲ್ಲಾ ಲಕ್ಷಣಗಳನ್ನು ನೋಡಿದರೆ ಪೂರ್ವ ತೈಮೂರಿನ ಜನರಿಗೆ ಸ್ವಾತಂತ್ರ್ಯದ ಕಥೆ 25 ವರ್ಷಗಳ ನಂತರ ಪುನರಾವರ್ತನೆ ಯಾಗುವಂತಿದೆ. ಕೈಗೆ ಬಂದದ್ದು ಬಾಯಿಗೆ ಬರದೆ ಹೋಗಬಹುದು. ಇದನ್ನು ಅರ್ಥಮಾಡಿಕೊಳ್ಳಲಿಕ್ಕೆ 1975ರಲ್ಲಿ ತೈಮೂರಿನ ಕೈಯಲ್ಲಿದ್ದ ಸ್ವಾತಂತ್ರ್ಯ ಬಾಯಿಗೆ ಬರದೆ ಹೋದದ್ದರ ಕಾರಣ ಮತ್ತು ಕಳೆದ 25 ವರ್ಷಗಳ ಬೆಳವಣಿಗೆ ಪರಿಶೀಲಿಸಬೇಕು.



ಪೂರ್ವ ತೈಮೂರ್ ಮುಖಂಡ ಕ್ಸನಾನಾ ಗುಸ್ಮಾವೊ

ಪೂರ್ವ ತೈಮೂರ್‌ಗೆ ಏಕೆ ಕುತ್ತು?

1975 ದಕ್ಷಿಣ-ಪೂರ್ವ ಏಶ್ಯಾದಲ್ಲಿ ವಿಶಿಷ್ಟವರ್ಷ. ಅಮೇರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಧಿರೋದ್ದಾತ ಹೋರಾಟ ನಡೆಸಿದ ವಿಯಟ್ನಾಂ ವಿಜಯಗಳಿಸಿದ ವರ್ಷ. ಅಮೇರಿಕ ಮತ್ತು ಅದರ ಬಾಯಿಬಡುಕರೆಲ್ಲಾ (ಇಂಡೋನೇಶ್ಯಾದ ಕುಖ್ಯಾತ ಜನರಲ್ ಸುಹಾರ್ತೋ ಅದರಲ್ಲಿ ಪ್ರಮುಖ) ತಮ್ಮ ಕಾಲು ನೆಕ್ಕಿಕೊಳ್ಳುತ್ತಿದ್ದ ಸಮಯ. ಆ ಕಾಲದಲ್ಲಿ ಇನ್ನೊಂದು ದೇಶ ಪೂರ್ವ ತೈಮೂರ್ ಅದರ ಪ್ರಭಾವಗಳು ಕಳಚಿ ಸ್ವತಂತ್ರವಾಗುವುದು ಅವರಿಗೆ ಇಷ್ಟವಿರಲಿಲ್ಲ. ಬರೆ ಅಷ್ಟೇನಾ? ಇನ್ನೇನೂ ಪ್ರಬಲ ಕಾರಣವಿರಲಿಲ್ಲವೇ?

ಇತ್ತು ಖಂಡಿತ ಇತ್ತು. ಪೂರ್ವ ತೈಮೂರನ ಸ್ವಾತಂತ್ರ್ಯ ತಪ್ಪಿಸಲಿಕ್ಕೆ ಅಮೇರಿಕ, ಆಸ್ಟ್ರೇಲಿಯಾ, ಇಂಡೋನೇಶ್ಯಾ ಮೂರಕ್ಕೂ ಪ್ರಬಲ ಕಾರಣಗಳಿದ್ದವು.

1. ಪೂರ್ವ ತೈಮೂರ್ ತೈಲ ಮತ್ತು ಗ್ಯಾಸ್ ನಿಕ್ಷೇಪ ಹೇರಳ ಇರುವ ಪ್ರದೇಶ. ಫ್ರೆಟಿಲಿನ್‌ನಂತಹ ಎಡಪಂಥೀಯ ರಂಗದ ಆಡಳಿತದಲ್ಲಿ ಇಂತಹ ಸಂಪನ್ಮೂಲ ಬಳಸಿ ನಿಜವಾಗಿಯೂ ಸ್ವತಂತ್ರ ದೇಶವಾಗಿ ಅಭಿವೃದ್ಧಿ ಆಗುವ ಸಾಧ್ಯತೆ ಇತ್ತು. ಆಸ್ಟ್ರೇಲಿಯಾದ ಕಂಪನಿಗಳಿಗೆ ಈ ತೈಲ-ಗ್ಯಾಸ್ ನಿಕ್ಷೇಪಗಳ ಮೇಲೆ ಕಣ್ಣು. ಪೂರ್ವ ತೈಮೂರ್ ಇಂಡೋನೇಶ್ಯಾಕ್ಕೆ ಸೇರಿದರೆ ಆ ಬಗ್ಗೆ ಸುಲಭ ಚೌಕಾಸಿ ಮಾಡಬಹುದು ಎಂಬುದು ಆಸ್ಟ್ರೇಲಿಯಾ ಲೆಕ್ಕಾಚಾರ. ಇಂಡೋನೇಶ್ಯಾಕ್ಕೂ ಈ ತೈಲ-ಗ್ಯಾಸ್‌ನ ನಿಕ್ಷೇಪದ ಮೇಲೆ ಕಣ್ಣು.

2. ತೈಮೂರ್ ಕೊಲ್ಲಿ ಮಿಲಿಟರಿ ದೃಷ್ಟಿಯಿಂದ ಆಯಾಕಟ್ಟಿನ ಪ್ರದೇಶ. ಇಂಡಿಯಾ ಮಹಾಸಮುದ್ರ ಮತ್ತು ಪ್ಯಾಸಿಸ್ಫ್‌ಗೆ ಎರಡಕ್ಕೂ ಪ್ರವೇಶ ದ್ವಾರವೇ ಇದು. ಅಮೇರಿಕಕ್ಕೆ ಈ ಕೊಲ್ಲಿಯ ಮೇಲಿನ ನಿಯಂತ್ರಣ ಸ್ವತಂತ್ರ ಶಕ್ತಿಗೆ ಹೋಗುವುದು ಇಷ್ಟವಿಲ್ಲ. ಆಸ್ಟ್ರೇಲಿಯಾಕ್ಕೂ ಇದು ಮಿಲಿಟರಿ ದೃಷ್ಟಿಯಿಂದ ಆಯಕಟ್ಟಿನ ಪ್ರದೇಶ.

3. ಅಮೇರಿಕ - ಆಸ್ಟ್ರೇಲಿಯಾ ಇಂಡೋನೇಶ್ಯಾದ ಆಳರಸರಿಗೆ - ಮೂವರಿಗೂ ನೆರೆಯಲ್ಲಿ ಇನ್ನೊಂದು ಕ್ಯೂಬಾ ಬೇಕಿರಲಿಲ್ಲ. ಆಗ ಅಂತಹ ಎಲ್ಲಾ ಸಾಧ್ಯತೆಗಳಿದ್ದವು. ಈಗ ತಾನೇ ಕಮ್ಯುನಿಸ್ಟರ ಪ್ರಭಾವ ತಗ್ಗಿಸಲು 10 ವರ್ಷಕ್ಕಿಂತಲೂ ಹೆಚ್ಚು ಯುದ್ಧ ಮಾಡಿ ಅವರು ಸೋತಿದ್ದರು.

ಸ್ವಾತಂತ್ರ್ಯ ಹರಣಕ್ಕೆ ಅಮೇರಿಕ-ಆಸ್ಟ್ರೇಲಿಯಾದ ಕುಮ್ಮಕ್ಕು

ಇವೆಲ್ಲಾ ಕಾರಣಗಳಿಂದ ಇಂಡೋನೇಶ್ಯಾದ ಸೈನ್ಯಕ್ಕೆ ಅಮೇರಿಕಾ, ಆಸ್ಟ್ರೇಲಿಯಾಗಳು ತೈಮೂರ್ ಮೇಲೆ ಆಕ್ರಮಣ ಮಾಡಲಿಕ್ಕೆ ಕುಮ್ಮಕ್ಕು ಕೊಟ್ಟವು. ಬೇಕಾದ ಶಸ್ತ್ರಾಸ್ತ್ರಗಳನ್ನು ಒದಗಿಸಿದವು. ಮಿಲಿಟರಿಗೆ ತರಬೇತಿ ಕೊಟ್ಟವು. ಬೇಕಾದ ಬೇಹುಗಾರಿಕೆ ಮಾಹಿತಿ ನೀಡಿದವು. ಇಂಡೋನೇಶ್ಯಾಕ್ಕೆ ಆಗಿನ ಅಮೇರಿಕದ ಅಧ್ಯಕ್ಷ ಗೆರಾಲ್ಡ್ ಫೋರ್ಡ್ ಮತ್ತು ವಿದೇಶ ಸಚಿವ ಹೆನ್ರಿ ಕಿಸಿಂಗರ್ ಜಕಾರ್ತಾಕ್ಕೆ ಭೇಟಿ ಕೊಟ್ಟ ಮರುದಿನ (ಡಿಸೆಂಬರ್ 7, 1975) ತೈಮೂರ್ ಮೇಲೆ ದಾಳಿ ಮಾಡಲಾಯಿತು. ನರಮೇಧ ಆರಂಭವಾಯಿತು. ವಿಶ್ವಸಂಸ್ಥೆ ಇದನ್ನು ಅತ್ಯಂತ ಕಟುವಾಗಿ ಟೀಕಿಸಿತು. ಇಂಡೋನೇಶ್ಯಾ ತನ್ನ ಆಕ್ರಮಣ ವಾಪಸು ತೆಗೆದುಕೊಳ್ಳಬೇಕು. ಪೂರ್ವ ತೈವೋರ್‌ಗೆ ಸ್ವಯಂ-ನಿರ್ಧಾರದ ಹಕ್ಕು ಕೊಡಬೇಕು. ವಿಶ್ವಸಂಸ್ಥೆಯ ನಿಯಮಗಳನ್ನು ಮುರಿದಿರುವ ತೈಮೂರ್ ಮೇಲೆ ಇಂಡೋನೇಶ್ಯಾದ ಸಾರ್ವಭೌಮತ್ವವನ್ನು ಗೌರವಿಸಬಾರದು, 'ಬ್ರೆಜಿಲ್' ಎನ್ನುವಂತೆ ಆಡುವ ಅಮೆರಿಕ, ಆಸ್ಟ್ರೇಲಿಯಗಳು ಅದನ್ನು ಪೂರ್ಣವಾಗಿ ಧಿಕ್ಕರಿಸಿದವು. ಆಗಿನ ವಿಶ್ವಸಂಸ್ಥೆಗೆ ಅಮೆರಿಕದ ರಾಯಭಾರಿ ಮೋಯ್ನಿಹಾನ್ ತನ್ನ ಆತ್ಮಚರಿತೆಯಲ್ಲಿ ಹೇಗೆ ಸಫಲವಾಗಿ ತಾನು ವಿಶ್ವಸಂಸ್ಥೆಯ ನಿರ್ಣಯವನ್ನು ಜಾರಿಯಾಗದಂತೆ ಬುಡಮೇಲು ಮಾಡಿದೆ ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಅಮೆರಿಕ ಮತ್ತು ಆಸ್ಟ್ರೇಲಿಯ ಎಂದೂ ಇಂಡೋನೇಶ್ಯಾದ ಸೈನ್ಯಕ್ಕೆ, ಅದರಲ್ಲೂ ಪೂರ್ವತೈಮೂರ್‌ನಲ್ಲಿ ಬಳಸಲಾಗುವ ವಿಶೇಷ

ಪುಟ 12 ಕ್ಕೆ

"1975 ರಿಂದ ಈವರೆಗೆ ಅಮೆರಿಕ-ಆಸ್ಟ್ರೇಲಿಯಾ ಮತ್ತು ಇತರ ಪಾಶ್ಚಿಮಾತ್ಯ ದೇಶಗಳ ಬೆಂಬಲ, ಶಾಮಿಲಿನಿಂದ ಇಂಡೋನೇಶ್ಯಾ ತೈಮೂರ್‌ನಲ್ಲಿ ಎಸಗಿದ ಅತ್ಯಾಚಾರಗಳು ಸದ್ದಾಂ ಹುಸೇನ್ ಕುವೈತ್‌ನಲ್ಲಿ ಮಾಡಿರುವ ಅಪರಾಧಗಳಿಗಿಂತ ಎಷ್ಟೋ ಪಟ್ಟು ಗಂಭೀರವಾದದ್ದು"

"1980 ರಲ್ಲಿ ಅಮೆರಿಕನ್ ಪತ್ರಿಕೆಗಳು ಕೊನೆಗೂ ಪೂರ್ಣ ನಾಲ್ಕು ವರ್ಷಗಳನಂತರ ಪೂರ್ವ ತೈಮೂರ್ ಬಗ್ಗೆ ಸ್ವಯಂಕೃತ ಸೆನ್ಸಾರ್ ತೆಗೆದು, ಅಲ್ಲಿನ ಅತ್ಯಾಚಾರಗಳ ಬಗ್ಗೆ ವರದಿ ಮಾಡಲು ಆರಂಭಿಸಿದವು. ನ್ಯೂಯಾರ್ಕ್ ಟೈಂಸ್ ಒಂದು ಪ್ರಬಲ ಸಂಪಾದಕೀಯ ಬರೆಯಿತು. 'ಇಂಡೋನೇಶ್ಯಾಕ್ಕೆ ನಾಚಿಕೆಗೇಡು' ಅಂತ. ನಾನು ಆಗ ಆ ಪತ್ರಿಕೆಗೆ ಒಂದು ಪತ್ರ ಬರೆದೆ. ಸಂಪಾದಕೀಯ 'ಅಮೆರಿಕದ ನಾಚಿಕೆಗೇಡು' ಎಂದಿರಬೇಕಿತ್ತು ಎಂದು ಹೇಳಿ ಅಮೆರಿಕದ ಜವಾಬ್ದಾರಿ, ಶಾಮಿಲು ಬಗ್ಗೆ ಬರೆದೆ. ಪತ್ರ ಪ್ರಕಟವಾಗಲಿಲ್ಲ. ಬೇರೆ ಪತ್ರಿಕೆಗಳು ಇದನ್ನು ಪ್ರಕಟಿಸಿದವು. ನಿಜವಾಗಿಯೂ ನಾನು 'ನ್ಯೂಯಾರ್ಕ್ ಟೈಂಸ್‌ನ ನಾಚಿಕೆಗೇಡು' ಎನ್ನಬೇಕಾಗಿತ್ತು. ಅದರ ನಾಲ್ಕು ವರ್ಷದ ಗಡಚಿಕ್ಕುವಂತಾಗಿತ್ತು. ಆದರೆ ಆಗ ಅವರು ನನ್ನ ಪತ್ರ ಪ್ರಕಟಿಸಬಹುದು ಎಂಬ ಸಣ್ಣ ಆಸೆ ಇತ್ತು.

- ಪ್ರಸಿದ್ಧ ಅಮೆರಿಕನ್ ವಿಜ್ಞಾನಿ, ಚಿಂತಕ
ನೋಮ್ ಚೋಮ್‌ಸ್ಕಿ



ಆಹಾರ, ರೇಶನ್‌ಗಾಗಿ ತಡಕಾಡುತ್ತಿರುವ ಪೂರ್ವ ತೈಮೂರ್ ನಿರಾಶ್ರಿತರು

ಓದುಗರ ಗಮನಕ್ಕೆ

ಕಳೆದವಾರದಿಂದ 'ಜ್ಯೋತಿಬಸು ಆತ್ಮಕಥನ' ಅನಿವಾರ್ಯ ಕಾರಣಗಳಿಂದ ಪ್ರಕಟವಾಗಿಲ್ಲ. ಇದಕ್ಕಾಗಿ ವಿಷಾಧಿಸುತ್ತೇವೆ. ಮುಂದಿನವಾರದಿಂದ ಎಂದಿನಂತೆ ಪ್ರಕಟವಾಗುವುದು.

ಕ್ರೌರ್ಯ, ಕಾಮ, ಹಗಲುಗನಸುಗಳ 'ಉಪೇಂದ್ರ'

ಪ್ರತಿಯೊಬ್ಬ ವ್ಯಕ್ತಿಯು ಹಗಲು ಗನಸುಗಳನ್ನು ಕಾಣುತ್ತಾನೆ. ನಿಜ ಜೀವನದಲ್ಲಿ ಮಾನವ ಸಹಜ ಅಗತ್ಯಗಳನ್ನು ಪಡೆಯಲಾಗದ ನಿರುದ್ಯೋಗಿ ಯುವಕರ ಅತೃಪ್ತ ಮನಸ್ಸನ್ನಂತೂ ಹಲವು ರೀತಿಯ ಹಗಲುಗನಸುಗಳು ಕಾಡುತ್ತವೆ. ಈ ಮನಸ್ಸಿಗೆ ಎಲ್ಲವೂ ಬೇಕು. ಪ್ರೀತಿ-ಪ್ರೇಮ, ಕೀರ್ತಿ-ಸಂಪತ್ತು, ಹೆಣ್ಣು-ಹೊನ್ನು ಎಲ್ಲವೂ ಬೇಕು. ವಾಸ್ತವದಲ್ಲಿ ಅದನ್ನು ಪಡೆಯಲಾಗದೇ ಭ್ರಮಾಲೋಕದಲ್ಲಿ ಅದನ್ನು ಪಡೆದಂತೆ ಕಾಣುವ ಕನಸೇ ಹಗಲು ಕನಸು. ನಿರುದ್ಯೋಗಿ ಯುವಕನೊಬ್ಬನ ಅತೃಪ್ತ ಆಕಾಂಕ್ಷೆಗಳಿಂದ ಜನಿಸಿದ ಹಗಲುಕನಸುಗಳನ್ನು ಹಗಲುಗನಸುಗಳು ಮೂಡುವಂತೆಯೇ ಚಿತ್ರಿಸಿರುವುದೇ 'ಉಪೇಂದ್ರ' ಚಿತ್ರ. ಅದರ ಜೊತೆಯಲ್ಲಿ ಹಿಂಸೆಯ ಅಬ್ಬರ, ಕಾಮ-ಕ್ರೋಧದ ಹುಚ್ಚು ಹೊಳೆಯ ಮೂಲಕ ಪಡ್ಡೆ ಹುಡುಗರನ್ನು ಸೆಳೆದು ಹಣ ಮಾಡುವ ಪ್ರಯತ್ನವೇ ಈ ಚಲನಚಿತ್ರ.



ಮೀಡಿಯ ಹೈಪ್ ಅಥವಾ ಪತ್ರಿಕೆ, ಟಿ.ವಿ.ಗಳಲ್ಲಿ ಅಬ್ಬರದ ಪ್ರಚಾರದ ಮೂಲಕ ಸಿನಿಮಾ ಪ್ರಿಯರಲ್ಲಿ ವಿಪರೀತ ನಿರೀಕ್ಷೆ ಹುಟ್ಟಿಸಿದ್ದ 'ಉಪೇಂದ್ರ' ಚಲನಚಿತ್ರಕ್ಕೆ ಎಲ್ಲೆಡೆಯೂ ಯುವಕರು ಮುಗಿಬೀಳುತ್ತಿದ್ದಾರೆ.

ಸಾಮಾನ್ಯವಾಗಿ ಚಾಲನೆಯಲ್ಲಿರುವ ಸಿನಿಮಾದ ಸಿದ್ಧ ಫಾರ್ಮುಲಾಗಳನ್ನು ಧಿಕ್ಕರಿಸಿ 'ಉಪೇಂದ್ರ' ಚಿತ್ರ ನಿರೂಪಣೆಯಲ್ಲಿ ಹೊಸ ವ್ಯಾಕರಣವನ್ನು ಬರೆದಿದ್ದಾರೆ. ಹಗಲುಗನಸನ್ನು ಚಿತ್ರಿಸಲು ಹಗಲುಗನಸುಗಳು ಮನಸ್ಸಿನಲ್ಲಿ ಮೂಡುವ ರೀತಿಯಲ್ಲಿಯೇ ಈ ಚಿತ್ರಣವನ್ನು ಮಾಡಿರುವುದು, ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ ಎಂದು ಕೆಣಕಲು ಈ ಶೈಲಿಯನ್ನು ಉಪಯೋಗಿಸಿದ್ದಾರೆ. ಈ ವಿಭಿನ್ನ ಶೈಲಿಯ ನಿರೂಪಣೆಯಿಂದ ಸಾಮಾನ್ಯ ಪ್ರೇಕ್ಷಕನ ಗಮನವನ್ನು ಸೆಳೆದಿದ್ದಾರೆ ಕೂಡ. ಆದರೆ ಈ ಪ್ರತಿಭೆ ಉತ್ತಮ ಮಾನವೀಯ ಮೌಲ್ಯಗಳನ್ನು ಪೋಷಿಸುವ ಬದಲಿಗೆ ಜೀವ ವಿರೋಧಿ ಮೌಲ್ಯಗಳ ಬೆಳವಣಿಗೆಗೆ ಪ್ರೇರಣೆಯಾಗಿರುವುದು ವಿಪರ್ಯಾಸದ ಸಂಗತಿ. ಕಥೆ ಮತ್ತು ಚಿತ್ರೀಕರಣದ ಶೈಲಿ ಬೇರೆಯಾದರೂ ಎಲ್ಲಾ ವ್ಯಾಪಾರಿ ಚಿತ್ರಗಳ ಮಾಮೂಲಿ ಸರಕಾದ ಹಿಂಸೆ ಅಶ್ಲೀಲತೆಗಳೇ ತುಂಬಿವೆ.

ಉಪೇಂದ್ರರ ಪ್ರಕಾರ ಪ್ರತಿಯೊಬ್ಬರ ಒಳ ಮನಸ್ಸಿನ ಪ್ರತಿರೂಪವೇ 'ಉಪೇಂದ್ರ'ದ 'ನಾನು' ಪಾತ್ರ. 'ನಾನು' ಯಾವ ಕೆಲಸಕ್ಕೂ ಹೇಸದ ಅತ್ಯಂತ ಕೆಟ್ಟ ಗುಣದವ. ಅವನ ಪ್ರಕಾರ ಸಮಾಜದಲ್ಲಿರುವ ಎಲ್ಲರೂ ಕೆಟ್ಟವರೇ, ಹೊರಗೊಂದು ಮಾತನಾಡುತ್ತಾರೆ, ಒಳಗೊಂದು ಯೋಚಿಸುತ್ತಾರೆ. ಒಟ್ಟಿನಲ್ಲಿ 'ಈ ಸಮಾಜ ಕೆಟ್ಟದು ಆದ್ದರಿಂದ ನಾನು ಕೆಟ್ಟವನು' ಇದು ಉಪೇಂದ್ರನ ಸಿದ್ಧಾಂತ. ಇಲ್ಲಿಯೇ ಉಪೇಂದ್ರನ ಕೊಳಕು ಮನಸ್ಥಿತಿ ಅರಿವಿಗೆ ಬರುವುದು. ಸಮಾಜದಲ್ಲಿರುವ ಮಾನವೀಯ ಮೌಲ್ಯಗಳು, ಆರೋಗ್ಯವಂತ ಮನಸ್ಸುಗಳು ಅವರ ಲಕ್ಷ್ಯಕ್ಕೇ ಬರುವುದಿಲ್ಲ. ದಾರಿಯಲ್ಲಿ ಹೋಗುತ್ತಿರುವ ಹೆಣ್ಣೊಂದನ್ನು ಅವಳು ಆಧುನಿಕ ಉಡುಪು ಧರಿಸಿದ್ದಾಳೆಂಬ ಕಾರಣಕ್ಕೇ ಅವಳನ್ನು ಪೀಡಿಸುವುದು, ಅಟ್ಟಾಡಿಸುವುದು ಯುವಕರಿಗೆ ಎಂದ 'ಮಾದರಿ'ಯನ್ನು ನೀಡುತ್ತದೆ?. ಮೈತುಂಬ ಬಟ್ಟೆ ತೊಟ್ಟು ಮನೆಯೊಳಗೆ ಕುಳಿತ ಹೆಣ್ಣುಗಳ ಮೇಲೆ, ಹಾಲುಗಲ್ಲದ ಹಸುಳೆಗಳ ಮೇಲೆ ಮನೆಗೆ ನುಗ್ಗಿ ಅತ್ಯಾಚಾರ ಗೈಯುತ್ತಿರುವ ಪುರುಷರು ಈ ಸಮಾಜದಲ್ಲಿ ಎಷ್ಟಿಲ್ಲ?

'ಹೆಂಡತಿ' ಎಂದರೆ ಗಂಡನಿಗೆ ಅಡಿಯಾಳಾಗಿ, ಅವನ ಬೇಕು, ಬೇಡಗಳನ್ನು ಪೂರೈಸುವ ಸಂಬಳವಿಲ್ಲದ 'ಪರ್ಮನೆಂಟ್ ಕೆಲಸ' ಎಂಬ ವಾಸ್ತವವನ್ನು ಎದುರಿಗಿಡುವ ಮೂಲಕ ಮಹಿಳಾ ಪ್ರೇಕ್ಷಕರನ್ನು, ರೈತರ ದುಡಿಮೆಯ ಬಗ್ಗೆ ಮಾತನಾಡುತ್ತಾ ಗ್ರಾಮೀಣ ಪ್ರೇಕ್ಷಕರನ್ನು ಸೆಳೆಯುವ ಪ್ರಯತ್ನ ಪಟ್ಟಿದ್ದಾರೆ.

ಉಪೇಂದ್ರನ ಬಳಿ ಕತ್ತಿಯಿದೆ. ಬಹಳ ಸುಂದರವಾದ, ಹರಿತವಾದ ಚಿನ್ನದ ಕತ್ತಿ. ಅದನ್ನು ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಕತ್ತರಿಸಲು, ಉತ್ತಮ ಮೌಲ್ಯಗಳನ್ನು ಬೆಳೆಸಲು ಬಳಸದೆ ಕೀಳು ಸಂಸ್ಕೃತಿಯನ್ನು ಬೆಳೆಸಲು, ಬಂಡವಾಳಶಾಹಿ ಸಮಾಜವನ್ನು ರಕ್ಷಿಸಲು ಬಳಸಲಾಗಿದೆ. ಸಮಾಜದ ಕೆಟ್ಟ ಮೌಲ್ಯಗಳನ್ನು ಕತ್ತರಿಸಿ ಹಾಕಲು ಈ ಕತ್ತಿ ಬಳಕೆಯಾದಲ್ಲಿ ಸಮಾಜಕ್ಕೂ ಒಳ್ಳೆಯದು-ಉಪೇಂದ್ರನಿಗೂ ಗೌರವ.

ಮನುಷ್ಯರಲ್ಲಿ ಅನೇಕ ರೀತಿಯ ಯೋಜನೆಯ, ಬಯಕೆಗಳಿರುತ್ತವೆ. ಅವರಲ್ಲಿ ಒಳ್ಳೆಯವರೂ ಇರುತ್ತಾರೆ, ಕೆಟ್ಟವರೂ ಇರುತ್ತಾರೆ. ಹಾಗೆಯೇ ಕೆಲವೊಂದು ವಿಚಾರಗಳನ್ನು ಅಂತರಂಗದಲ್ಲಿಯೇ ಇಟ್ಟುಕೊಳ್ಳಬೇಕಾಗುತ್ತದೆ. ಅದನ್ನು ಬಹಿರಂಗವಾಗಿ ಸಾರಬೇಕೆಂದೇನೂ ಇಲ್ಲ. ಕೆಟ್ಟ ವಿಚಾರಗಳನ್ನು ಬಿಟ್ಟು ಒಳ್ಳೆಯ ವಿಚಾರಗಳನ್ನು/ಮೌಲ್ಯಗಳನ್ನು ಸ್ವೀಕರಿಸಿ ಅದನ್ನೇ ಇನ್ನೊಬ್ಬರಿಗೆ ಹಂಚಬೇಕು. ಉಪೇಂದ್ರ ಇದನ್ನು ಅರ್ಥ ಮಾಡಿಕೊಳ್ಳಬೇಕು. ಸಮಾಜ ಕೆಟ್ಟದು, ನಾನು ಕೂಡ ಅಷ್ಟೇ ಎಂದು ಹೇಳುತ್ತಾ ಇನ್ನಷ್ಟು ಹೊಲಸನ್ನು ಸಮಾಜಕ್ಕೆ ತುಂಬ ಬಾರದು; ಅನಾರೋಗ್ಯಕರ ಬೆಳವಣಿಗೆಗಳಿಗೆ ನಾಂದಿಯಾಗಬಾರದು. ಚಿತ್ರದಲ್ಲಿ ಎದ್ದು ಕಾಣುವ ಕ್ರೌರ್ಯ, ಹಿಂಸೆ, ರಕ್ತದ ಚೆಲ್ಲಾಟ ಪಡ್ಡೆ ಯುವಕರಲ್ಲಿರುವ ಮಾನವೀಯತೆಯನ್ನು ಕೊಲ್ಲುವ ಅಶ್ಲೀಲ, ಕಾಮುಕತೆಯ ದೃಶ್ಯಗಳು ಮಹಿಳೆಯರನ್ನು ಕೇ… ಭೋಗವಸ್ತುಗಳನ್ನಾಗಿ ಕಾಣುವ ಅಮಾನವೀಯತೆ… ಬೆಳವಣಿಗೆಗೆ ಇಂಬಾಗುತ್ತದೆ.

ಈ ಚಿತ್ರದ ನಾಯಕಿಯರು ಮನುಷ್ಯರ ಆಕಾಂಕ್ಷೆ… ಪ್ರತಿರೂಪ ಎಂದು ಉಪೇಂದ್ರ ಈ ಚಿತ್ರವ… ಸಮರ್ಥಿಸಿಕೊಳ್ಳ ಬಯಸಿದ್ದಾರೆ. ಪ್ರೀತಿ-ಪ್ರೇಮ, ಸಂತೋ… ಬಯಸುವ ಮನಸು(ಬಿಸಿಲು-ಧಾಮಿನಿ), ತನ್ನ ಸೇ… ಮಾಡುವ, ಸುಖ ಕೊಡುವ ಹೆಂಡತಿ(ಮಳೆ-ಪ್ರೇ… ಮತ್ತು ಇವೆಲ್ಲವನ್ನು ನಿಭಾಯಿಸಲು, ಆರಾಮವಾಗಿರ… ಸಂಪತ್ತು ಗಳಿಸಬೇಕು(ಚಳಿ-ರವೀನಾ) ಇದು ಮನುಷ… ಸಹಜ ಆಸೆ. ಈ ಆಸೆಗಳನ್ನು ಪೂರೈಸಿಕೊಳ್ಳ… ಪ್ರಯತ್ನಿಸಿದಷ್ಟು ಆ ಆಸೆಗಳೇ ಮನುಷ್ಯನನ್ನು ಕೊಲ್ಲುತ್ತ… ಈ ಆಸೆಗಳನ್ನು ಮೆಟ್ಟಿನಿಂತಲ್ಲಿ ಅವನ… ನೆಮ್ಮದಿಯಾಗಿರುತ್ತಾನೆ. ಪ್ರತಿಯೊಬ್ಬರಲ್ಲಿಯ… ಜೀವಂತವಾಗಿರುವ ಮಾನವೀಯತೆ ಹಾಗ… ಆರೋಗ್ಯವಂತ ಮನಸುಗಳು ಈ ಚಿತ್ರವ… ನಿರಾಕರಿಸದಂತೆ ಈ ತತ್ವದ ಮುಸುಕನ್ನು ಬಳಸ… ವಂಚನೆಗೆ ಕೈ ಹಾಕಿದ್ದಾರೆ.

ದೃಶ್ಯವೈಭವದ ಮೂಲಕ ಪ್ರೇಕ್ಷಕನನ್ನು ಭ್ರಮಾಲೋ… ಎಳೆದೊಯ್ಯುವ ಉಪೇಂದ್ರ, ಹಗಲುಗನಸು ಕಾಣು… ಭ್ರಮಾಲೋಕದಲ್ಲಿ ಮುಳುಗಿರುವ ಜನಸಾಮಾನ್ಯರ… ಮುಖ್ಯವಾಗಿ ಯುವಜನರಲ್ಲಿ ಮತ್ತಷ್ಟು ಭ್ರಮೆಗಳ… ಬಿತ್ತುತ್ತಾರೆ. ನಿರುದ್ಯೋಗಿ ಯುವಕರಲ್ಲಿ ಸಿರಿವಂ… ದೌಲತ್ತಿನ ಬಗ್ಗೆ ಇರುವ ಸಿಟ್ಟು ಅವರ ಮನೆಯ ವಸ್ತುಗ… ನಾಶ ಮಾಡುವ ಮೂಕ ಹುಸಿ ಬಾಂಬಿನಂತೆ ಸಿಡಿಸುತ್ತಾ…

ಚಿತ್ರದ ಅಂತ್ಯದಲ್ಲಿ ಹೇಳುವ ಪರಿಹಾರ… ದ್ವಂದ್ವಮಯುವಾಗಿದ್ದು ಸಾಮಾನ್ಯ ಪ್ರೇಕ್ಷಕ… ಅರ್ಥವಾಗದಂತದ್ದು. "ಇದೊಂದು 2D ಚಿ… ಅರ್ಥವಾಗದಿದ್ದಲ್ಲಿ ಮತ್ತೊಮ್ಮೆ ನೋಡಿ' ಎಂಬ ತ… ಬಳಸಿ ತನ್ನ ವ್ಯಾಪಾರಿ ಬುದ್ಧಿಯನ್ನು ತೋರಿಸಿದ್ದಾರೆ. ಅ… ಕೊನೆಗೆ ಸಾಮಾನ್ಯ ಪ್ರೇಕ್ಷಕನ ಮನಸ್ಸಿನಲ್ಲಿ ಉಳಿಯುವ… ತಾನೂ ಅನುಸರಿಸಬಯಸುವ ಉಪೇಂದ್ರನ ವಿ… 'ಮ್ಯಾನರಿಸಂ'ಗಳು ಮತ್ತು ಅಶ್ಲೀಲ-ಹಿಂಸಾತ್ಮಕ ದೃಶ್ಯ… ಮಾತ್ರ.

ಪೂರ್ವ ತೈಮೂರ್‌ನಲ್ಲಿ ಸಾಮ್ರಾಜ್ಯಶಾಹಿ ಆಟ...

ಪುಟ 11 ರಿಂದ

ಪಡೆಗೆ ತರಬೇತಿ ನೀಡುತ್ತಾ ಬಂದಿದ್ದಾರೆ. ಆಸ್ಟ್ರೇಲಿಯಾ ಒಂದು ಹೆಜ್ಜೆ ಮುಂದೆ ಹೋಗಿ 1979 ರಲ್ಲಿ ಇಂಡೋನೇಶ್ಯಾದ ಜತೆ ಮಾಡಿಕೊಂಡ ಒಪ್ಪಂದವೊಂದರಲ್ಲಿ ಪೂರ್ವ ತೈಮೂರ್ ಇಂಡೋನೇಶ್ಯಾದ ಭಾಗ ಎಂದು ಪರೋಕ್ಷವಾಗಿ ಒಪ್ಪಿಕೊಂಡಿದೆ. ತೈಮೂರ್ ಮೇಲೆ ಇಂಡೋನೇಶ್ಯಾ ಸರ್ವಾಧಿಕಾರ ಒಪ್ಪಿದ ಮೊದಲ ಮತ್ತು ಏಕಮಾತ್ರ ದೇಶ ಇಂಡೋನೇಶ್ಯಾ. 1989 ರಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆಸ್ಟ್ರೇಲಿಯಾ - ಇಂಡೋನೇಶ್ಯಾದ ಜತೆ ತೈಲ ಶೋಧನೆಗೆ ಜಂಟಿ ಅಧ್ಯಯನದ ಬಗ್ಗೆ 'ತೈಮೂರ್-ಗ್ಯಾಸ್ ಒಪ್ಪಂದ' ಮಾಡಿಕೊಂಡಿತು.

ಹೀಗೆ ಅಮೆರಿಕಾ, ಆಸ್ಟ್ರೇಲಿಯಾಗಳು ಕಳೆದ 25 ವರ್ಷಗಳಲ್ಲಿ ತೈಮೂರ್‌ನಲ್ಲಿ ಇಂಡೋನೇಶ್ಯಾ ನಡೆಸಿರುವ ಮಾನವ ಹಕ್ಕುಗಳ ಮೇಲೆ ದಾಳಿಯ ಅಟ್ಟಹಾಸದ ಅಪರಾಧದಲ್ಲಿ ಭಾಗಿಗಳು.

"ವಿದೇಶ ಸಚಿವಾಲಯ ವಿಶ್ವಸಂಸ್ಥೆಯ ಎಲ್ಲಾ ಕ್ರಮಗಳು ಒಂಚೂರು ಜಾರಿಗೆ ಆಗದಂತೆ ನೋಡಿಕೊಳ್ಳಬೇಕೆಂದು ನನಗೆ ಆದೇಶ ನೀಡಿತ್ತು. ನಾನು ಈ ಕೆಲಸ ಮಾಡುವುದರಲ್ಲಿ ಸಾಕಷ್ಟು ಯಶಸ್ವಿಯಾದೆನೆಂದು ಹೇಳಬೇಕು"

- ಡೇನಿಯಲ್ ಪೆಟ್ರಿಕ್ ಮೋಯ್ನಿಹನ್

ತಮ್ಮ ಆತ್ಮಕಥೆಯಲ್ಲಿ 1975 ಪೂರ್ವ ತೈಮೂರ್ ಮೇಲೆ ಇಂಡೋನೇಶ್ಯಾ ಆಕ್ರಮಣ ತೆರವಿನ ವಿಶ್ವಸಂಸ್ಥೆ ನಿರ್ಣಯದ ಬಗ್ಗೆ

ಈಗ ಶಾಂತಿ ಪಾಲಕರು

ಇಂತಹ ಆಸ್ಟ್ರೇಲಿಯಾ ಈಗ ಪೂರ್ವ ತೈಮೂರ್‌ನಲ್ಲಿ ಶಾಂತಿ, ಸ್ವಾತಂತ್ರ್ಯ ನೆಲೆಸಲು ಅನುವು ಮಾಡಿಕೊಡುವ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ನಾಯಕ, ಆಸ್ಟ್ರೇಲಿಯಾ ಮಿಲಿಟರಿ ತುಕಡಿ. ಈ ಪಡೆಯ ಅತಿದೊಡ್ಡ ಭಾಗ. ಅವರ ಕಮಾಂಡರ್ ಸಹ ಆಸ್ಟ್ರೇಲಿಯಾದವ. ತಮಾಷೆಯೆಂದರೆ ಈ ಕಮಾಂಡರ್ ಮಹಾನುಭಾವ ವಿಯೆಟ್ನಾಂನಲ್ಲಿ ಅಮೆರಿಕ ಜತೆ ಪೈಶಾಚಿಕ ಕೃತ್ಯ ನಡೆಸಿದ ಆಸ್ಟ್ರೇಲಿಯನ್ ತುಕಡಿಯಲ್ಲಿದ್ದವನಂತೆ. ಇದೇ ಅವನ ಅಂತರ್ರಾಷ್ಟ್ರೀಯ 'ಸೇನೆ'ಯ ಅನುಭವವಂತೆ! ಆಸ್ಟ್ರೇಲಿಯಾ ಅಮೆರಿಕದ ಆಜ್ಞಾಪಾಲಕ 'ಅಸಿಸ್ಟೆಂಟ್'. 70 ರ ದಶಕದಲ್ಲಿ ವಿಯೆಟ್ನಾಂ ಮತ್ತು ಇಂಡೋ-ಚೀನಾದ ಪ್ರದೇಶದಲ್ಲಿ 'ಕಮ್ಯುನಿಸಂನ ಬೆದರಿಕೆ' ವಿರುದ್ಧ ಹೋರಾಡುವುದರಲ್ಲಿ ಕೊಲ್ಲಿ ಪ್ರದೇಶಕ್ಕೆ ಇರಾಕ್ ಮೇಲೆ ಯುದ್ಧಕ್ಕೆ ತುಕಡಿ ಕಳಿಸುವುದರಲ್ಲಿ ಮತ್ತು ಪೂರ್ವ ತೈಮೂರ್‌ನಲ್ಲಿ ಅದನ್ನು ಪ್ರದರ್ಶಿಸಿದೆ. ಆದ್ದರಿಂದಲೇ ಆಸ್ಟ್ರೇಲಿಯಾ ಅಮೆರಿಕದ ಪರವಾಗಿ ನಾಯಕತ್ವ ವಹಿಸಿರುವುದು. ಆದರೆ ಆಸ್ಟ್ರೇಲಿಯಾ, ಅಮೆರಿಕಗಳ ಉದ್ದೇಶವೇ ಬೇರೆ. ಈಗ ಇಂಡೋನೇಶ್ಯಾದಲ್ಲಿ ರಾಜಕೀಯ ಅಲ್ಲೋಲ ಕಲ್ಲೋಲ ನಡೆಯುತ್ತಿದೆ. ಅಮೆರಿಕ-ಆಸ್ಟ್ರೇಲಿಯಾಗಳಿಗೆ ಪರವಾದ ಸರ್ಕಾರ ಬರುವ ಅವಕಾಶ ತೀರಾ ಕಡಿಮೆ. ಈ ಅಲ್ಲೋಲ-ಕಲ್ಲೋಲದ ಸಮಯದಲ್ಲಿ ತೈಲ ಸಂಪನ್ಮೂಲ ಮತ್ತು ಆಯಕಟ್ಟಿನ ಪೂರ್ವ ತೈಮೂರ್ ತಮ್ಮ ನೇರ ಮಿಲಿಟರಿ ಹತೋಟಿಯಲ್ಲಿರಲಿ ಎಂದು ಇರಬಹುದು. ಅಲ್ಲದೆ ಇಂಡೋನೇಶ್ಯಾದಲ್ಲಿ ತೀರಾ 'ಸ್ವತಂತ್ರ' ತಮಗೆ ಕಿರಿಕಿರಿಕೊಡುವ ಸರ್ಕಾರ ಬಂದರೆ ಅದರ ಮೇಲೆ ಕ್ರಮ ಕೈಗೊಳ್ಳಲಿಕ್ಕೂ ಪೂರ್ವ ತೈಮೂರ್ ನೆಲೆ ಸಹಾಯವಾದೀತು ಎಂದು ಅವರ ಲೆಕ್ಕಾಚಾರ.

ಆದರೆ ಈ ಲೆಕ್ಕಾಚಾರ ನಿಲ್ಲಲಿಕ್ಕಿ… ಇಂಡೋನೇಶ್ಯಾದ ಘಟನೆಗಳು, ಮಿಲಿಟರಿ ಮೇ… ಅವರಿಗೆ ಏನೇ ಹತೋಟಿ ಇದ್ದರೂ, ಅಮೆರಿ… ಆಸ್ಟ್ರೇಲಿಯಾಗಳ ಆಶಯಗಳನ್ನು ಮೀ… ನಡೆಯುತ್ತಿದೆ. ಪೂರ್ವ ತೈಮೂರ್… ಸ್ವಾತಂತ್ರ್ಯಪ್ರಿಯ ಜನ ಸಹ ಸಾಮ್ರಾಜ್ಯಶಾಹಿ ಆ… ನಡೆಯಲು ಬಿಡುವುದಿಲ್ಲ.

ಒಂದು 'ಕೈ' ನೋಡಿಕೊಂಡ ಉ.ಕ.ಮತದಾರರ…

ಪುಟ 4 ರಿಂದ

ಕಾಂಗ್ರೆಸಿನಿಂದ ಇತ್ತೀಚೆಗೆ ಬಿಜೆಪಿಗೆ ಬಂದು ಸ್ಪರ್ಧಿಸಿದ್ದ ಪ್ರಭಾಕರ ರಾಣೆ ಇನ್ನೊಬ್ಬರು.

ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದ ಮತ್ತು ನೌಕಾನೆಲೆಯ ನಿರಾಶ್ರಿತರ ಸಮಸ್ಯೆಗಳ ಬಗ್ಗೆ ಹೋರಾಟ ನಡೆಸಿದ ಪ್ರಭಾಕರ ರಾಣೆಯವರನ್ನು 1956 ಮತಗಳಿಂದ ಜನ ತಿರಸ್ಕರಿಸಿದ್ದಾರೆ. ವಸಂತ ಆಸ್ನೋಟಿಕರ ಬಗ್ಗೆ ಕ್ಷೇತ್ರದಲ್ಲಿ ಒಳ್ಳೆಯ ಅಭಿಪ್ರಾಯ ಇಲ್ಲದಿದ್ದರೂ ಬಿಜೆಪಿಯ ಕೋಮುವಾದಿ ನೀತಿಯ ವಿರುದ್ಧ ಬಿದ್ದ ಮತಗಳು ಇವರನ್ನು ರಕ್ಷಿಸಿದವು. ಜಾತ್ಯಾತೀತ ಮೌಲ್ಯಗಳ ಬಗ್ಗೆ ಮಾತನಾಡುತ್ತಿದ್ದ ರಾಣೆ ಅದೆಲ್ಲವನ್ನು ಪಕ್ಕಕ್ಕಿಟ್ಟು ಅಧಿಕಾರದ ಆಸೆಗಾಗಿ ಬಿಜೆಪಿ ಸೇರಿದ್ದನ್ನು ಜನ ಸಹಿಸಲಿಲ್ಲ ಎನ್ನುವುದನ್ನು ಇಲ್ಲಿ ಗಮನಿಸಬಹುದು. ತನ್ನ ಪ್ರಬಲ ನೆಲೆಯೇ ಕಾರವಾರದಲ್ಲಿ ಇಲ್ಲದಿದ್ದಾಗ ರಾಣೆಯವರ ಮೂಲಕವಾದರೂ ನೆಲೆಯನ್ನು ವಿಸ್ತರಿಸಿಕೊಳ್ಳುವ ಕಾರಣಕ್ಕಾಗಿ ತನ್ನ ಕಾರ್ಯಕರ್ತರ ವಿರೋಧದ ನಡುವೆಯೂ ಅವರನ್ನು ಕಣಕ್ಕಿಳಿಸಿದ್ದು, ನಂತರ ಸೋತಿದ್ದು ಸಂಘ ಪರಿವಾರಕ್ಕೊಂದು ಪಾಠ.

ಇನ್ನು ಕುಮಟಾ ಕ್ಷೇತ್ರದಲ್ಲಿ ನಿಷ್ಕ್ರಿಯ ಎಂ… ಕರ್ಕಿಯವರನ್ನು ಆಸ್ಪತ್ರೆಗೆ ವಾಪಾಸು ಕಳುಹಿಸಿದ್ದಾ… ಅವರ ಸೋಲಿಗೆ ಅವರ ನಿಷ್ಕ್ರಿಯತೆಯೊಂದಿಗೆ ಬಿಜ… ಮತ್ತು ಸಂಘಪರಿವಾರಗಳ ಕೊಡುಗೆಯೂ ಇ… ಉದ್ರೇಕಕಾರಿ ಭಾಷಣ ಮಾಡುವಲ್ಲಿ, ಜನರ… ರೊಚ್ಚಿಗೆಬ್ಬಿಸುವಲ್ಲಿ ಅನಂತಕುಮಾರ ಮತ್ತು ಅ… ತಂಡಗಳಿಗೆ ಇವರು ಸರಿಜೋಡಿಯಾಗಿರಲಿಲ್ಲ. ಹಾಗ… ಕರ್ಕಿಯವರನ್ನು (ಸೋಲಿಸಲು ಪೂರ್ಣ ಮನಸ್ಸಿಲ್ಲದಿದ್ದ… ಗೆಲ್ಲಿಸಲು ಇವರಿಗ್ಯಾರಿಗೂ ಆಸಕ್ತಿ ಇದ್ದಿರಲಿಲ್ಲ. ಹಾಗ… "ಮೇಲೆ ಕಮಲಕ್ಕೆ ಹಾಕಿ, ಕೆಳಗೆ ಬೇರೆ ಯಾವುದೇ ಚಿ… ಹಾಕಿ" ಎಂದು ಇವರ ತಂಡದವರೇ ಪ್ರಚಾರ ಮಾಡಿ… ಈಗ ಗುಟ್ಟಾಗೇನೂ ಇಲ್ಲ. ಬಿಜೆಪಿ ವಿರೋ… ಮತದೊಂದಿಗೆ ಇದೂ ಸೇರಿಕೊಂಡಿತು. ಅಂತೂ ಕರಾ… ತಾಲೂಕುಗಳಾದ ಭಟ್ಕಳ, ಕುಮಟಾ, ಹೊನ್ನಾವರದ… ಶಿವಾನಂದನಾಯ್ಕ ಮತ್ತು ಎಂ.ಪಿ. ಕರ್ಕಿಯವರನ್ನು… ಅವರವರ ಮೂಲ ಉದ್ಯೋಗಕ್ಕೆ ಕಳುಹಿಸಿದ್ದಾರೆ.

- ನಿಸ…

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ